
ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-06 • ಸಂಚಿಕೆ-03 • ಜನವರಿ 2022




## ನಾಗರಿಕರ ಮನೆ ಬಾಗಿಲಿಗೆ

# ಸರ್ಕಾರದ ಸೇವೆ

Downloaded From: www.kpscvaani.com



ಡಿಸೆಂಬರ್ 13 ರಿಂದ ಬೆಳಗಾವಿಯ ಸುವರ್ಣಸೌಧದಲ್ಲಿ ಜರುಗಿದ ಚಳಿಗಾಲದ ಅಧಿವೇಶದ ಕಲಾಪದಲ್ಲಿ ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ಭಾಗವಹಿಸಿರುವುದು.



ಡಿಸೆಂಬರ್ 16 ರಂದು ವಿಜಯ್ ದಿವಸ್ ಅಂಗವಾಗಿ ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ಬೆಳಗಾವಿಯ ಮರಾಠಾ ಲೈಟ್ ಇನ್ಫೆಂಟ್ರಿ ರೆಜಿಮೆಂಟ್‌ನ ತರಬೇತಿ ಶಾಲೆಯ ಯುದ್ಧ ಸ್ಮಾರಕಕ್ಕೆ ಗೌರವ ಸಲ್ಲಿಸಿದರು. ಈ ಸಂದರ್ಭದಲ್ಲಿ ಗೃಹ ಸಚಿವರಾದ ಆರಗ ಜ್ಞಾನೇಂದ್ರ, ಮೇಜರ್ ಜನರಲ್ ಜೆ.ವಿ.ಪ್ರಸಾದ್ ಮತ್ತಿತರ ಗಣ್ಯರು ಭಾಗವಹಿಸಿದ್ದರು.

Downloaded From: www.kpscvaani.com

ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-06 • ಸಂಚಿಕೆ-03 • ಜನವರಿ 2022




**06** ನಾಗರಿಕರ ಮನೆ ಬಾಗಿಲಿಗೆ ಸರ್ಕಾರದ ಸೇವೆ
• ಆರ್. ಸ್ಮಿತಾ



**11** ಕರ್ನಾಟಕ ಪೊಲೀಸ್ ಕಾನೂನಿಗೆ ತಿದ್ದುಪಡಿ: ಆನ್‌ಲೈನ್ ಬೆಟ್ಟಿಂಗ್ ವ್ಯವಹಾರಕ್ಕೆ ಕಡಿವಾಣ
• ಎಂ. ವೆಂಕಟೇಶ್

**13** ಆರ್ ಅಂಡ್ ಡಿ ಪಾಲಿಸಿ ಕುರಿತು ಅಶೋಕ್ ಶೆಟ್ಟರ್ ಅವರೊಂದಿಗೆ ಮಾತುಮಂಥನ
• ಮಂಜುನಾಥ ಡಿ. ಡೊಳ್ಳಿನ



**17** ಕರ್ನಾಟಕ : ನಮ್ಮ ರಾಷ್ಟ್ರ ಧ್ವಜದ ತವರು
• ಡಿ. ಪಿ. ಮುರಳೀಧರ್

**21** ತ್ವರಿತಗತಿಯಲ್ಲಿ ದತ್ತಾಂಶ ಹಂಚಿಕೊಳ್ಳಲು **ಇ-ಸಹಮತಿ ತಂತ್ರಾಂಶ**

**23** ಆಂಗ್ಲರ ದುರಾಡಳಿತದ ವಿರುದ್ಧ **ಕೊಡಗಿನ ಆಂದೋಲನ**
• ಎನ್. ಜಗನ್ನಾಥ ಪ್ರಕಾಶ್

**25** ಸಾರಿಗೆ ಇಲಾಖೆಯಲ್ಲಿ **ಆನ್‌ಲೈನ್ ಸೇವಾಸೌಲಭ್ಯ**
• ಬಿ.ಜಿ.ಪೂರ್ಣಿಮ

**26** ಸಾಲ ಮರುಪಾವತಿಗಾಗಿ **ಮೊಬೈಲ್ ಆ್ಯಪ್**
• ಎಸ್. ಹರ್ಷಿತಾ

**28** ತುರ್ತು ಆರೋಗ್ಯ ಪರಿಸ್ಥಿತಿ ಎದುರಿಸಲು **ಕೋವಿಡ್ ಕ್ರಾಶ್ ಕೋರ್ಸ್**
• ಬಿ.ಎಸ್. ಪಲ್ಲವಿ

**30** ಸೋಲಾರ್ ರೂಫ್‌ಟಾಪ್‌ಗೆ ಉತ್ತೇಜನ ನೀಡುತ್ತಿರುವ ಸರ್ಕಾರ
• ಡಾ. ವರಪ್ರಸಾದ್ ರಾವ್

**32** ಅಂತಕರಣದ ಅವಧೂತ **ಸ್ವಾಮಿ ವಿವೇಕಾನಂದ**
• ಪ್ರೊ॥ ರಾಜ್‌ಕುಮಾರ್ ಬಡಿಗೇರ್



**36** **ಬಟರ್‌ಫ್ರೂಟ್**: ಕೊಲೆಸ್ಟ್ರಾಲ್ ಮುಕ್ತ ಹಣ್ಣು
• ಡಾ: ಎಸ್. ನಾರಾಯಣ ಸ್ವಾಮಿ

**38** ಸಾಕು ಪ್ರಾಣಿಗಳು ರಕ್ತದಾನ ಮಾಡಬಹುದು
• ಹರೀಶ್

**40** ಜನರನ್ನು ಆಕರ್ಷಿಸುತ್ತಿರುವ ಕೋಟಿ ಚೆನ್ನಯ ಥೀಮ್ ಪಾರ್ಕ್
• ಸೌಮ್ಯ ಕಾರ್ಕಳ

**42** ಪ್ರಧಾನಮಂತ್ರಿ ಪೋಷಣ್ ಅಭಿಯಾನ: ಅಪೌಷ್ಟಿಕತೆ ನಿವಾರಣೆಗೆ ಸೋಪಾನ
• ಜಿ. ಎಸ್. ರಮ್ಯಾ

**46** ವೈಶಿಷ್ಟ್ಯ ಪೂರ್ಣ ಕಲೆ ಬೋನ್‌ಸಾಯ್
• ಡಾ. ಹರ್ಷವರ್ಧನ್ ಎಂ

**50** ಪದಬಂಧ-26

**ಪ್ರಧಾನ ಸಂಪಾದಕರು**
**ಡಾ॥ ಪಿ. ಎಸ್. ಹರ್ಷ, ಐಪಿಎಸ್**
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ಸಂಪಾದಕೀಯ ಸಲಹೆ**
**ಡಿ.ಪಿ. ಮುರಳೀಧರ್**
ಜಂಟಿ ನಿರ್ದೇಶಕರು

**ಸಹನಾ ಎಂ.**
ಉಪ ನಿರ್ದೇಶಕರು

**ಉಪ ಸಂಪಾದಕರು**
**ಬಿ. ಜಿ. ಪೂರ್ಣಿಮ**

**ಪ್ರಕಾಶಕರು**
**ಆಯುಕ್ತರು**
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001
Ph : 080-22028103 / 22028023
email : varthajanapada@yahoo.co.in
https://dipr.karnataka.gov.in

**ಮುದ್ರಕರು**
**ಲಾವಣ್ಯ ಮುದ್ರಣ**
# 19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು–50

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From: www.kpscvaani.com

# ನಿಮ್ಮ ಅನಿಸಿಕೆ

ಬಹಳ ಚಿಕ್ಕ ವಯಸ್ಸಿಗೆ ಪುನೀತ್ ರಾಜ್ ಕುಮಾರ್ ಅವರು ಹೃದಯಘಾತಕ್ಕೆ ಒಳಗಾಗಿ ನಮ್ಮನ್ನೆಲ್ಲಾ ಅಗಲಿದ ಮೇಲೆ ಬಹಳಷ್ಟು ಜನರು ಆರೋಗ್ಯ ತಪಾಸಣೆಗೆ ಮುಗಿಬಿದ್ದರು. ವಾರ್ತಾ ಜನಪದ ಡಿಸೆಂಬರ್ ಸಂಚಿಕೆಯಲ್ಲಿ ಖ್ಯಾತ ಹೃದಯ ತಜ್ಞರಾದ ಡಾ: ಸಿ.ಎನ್. ಮಂಜುನಾಥ್ ಅವರೊಂದಿಗೆ ನಡೆಸಿರುವ ಸಂದರ್ಶನ ತುಂಬಾ ಚನ್ನಾಗಿ ಮೂಡಿ ಬಂದಿದೆ.

ಅವರ ಸಂದರ್ಶನ ಓದಿ ಹೃದಯಘಾತಕ್ಕೆ ಸಂಬಂಧಿಸಿದಂತೆ ಇದ್ದ ನನ್ನ ಎಲ್ಲಾ ಸಂಶಯಗಳು ದೂರವಾದವು. ಇಂತಹ ಉಪಯುಕ್ತ ವಿಷಯಗಳ ಕುರಿತು ಪ್ರಕಟಿಸುತ್ತಿರುವುದಕ್ಕೆ ಸಂಪಾದಕ ಬಳಗಕ್ಕೆ ಅಭಿನಂದನೆ ಸಲ್ಲಿಸುತ್ತೇನೆ.

**–ಸತೀಶ್ ಬಡಿಗೇರ್, ವಿಜಯಪುರ**

* * *

ಡಾ: ಸಿ.ಎನ್. ಮಂಜುನಾಥ್ ಅವರೊಂದಿಗೆ ವಾರ್ತಾ ಜನಪದದಲ್ಲಿ ನಡೆಸಿರುವ ಸಂದರ್ಶನವು ಹೃದಯಘಾತದ ಕುರಿತು ಕೂಲಂಕುಂಶವಾಗಿ ತಿಳಿದುಕೊಳ್ಳಲು ಸಹಕಾರಿಯಾಯಿತು. ಹೃದಯಾ – ಘಾತಕ್ಕೂ ಕಾರ್ಡಿಯಾಕ್ ಅರೆಸ್ಟ್‌ಗೂ ಇರುವ ವ್ಯತ್ಯಾಸ, ಹೃದಯಘಾತ ಸಂಭವಿಸಲಿದೆ ಎಂದು ಗೊತ್ತಾಗುವುದು ಹೇಗೆ, ಗೋಲ್ಡನ್ ಹವರ್‌ನ ಪ್ರಾಮುಖ್ಯತೆ, ತಪಾಸಣೆಗೆ ಎಂತಹವರು ಒಳಗಾಗಬೇಕು ಇವೇ ಮುಂತಾದ ಹಲವಾರು ಪ್ರಮುಖ ವಿಷಯಗಳ ಮೇಲೆ ಸಂದರ್ಶಕರು ಡಾ. ಸಿ.ಎನ್.ಮಂಜುನಾಥ್ ಅವರಿಂದ ಉತ್ತರವನ್ನು ಪಡೆದುಕೊಂಡಿದ್ದಾರೆ. ಒಟ್ಟಾರೆ ಡಿಸೆಂಬರ್ ಸಂಚಿಕೆ ಉತ್ತಮ ಲೇಖನಗಳಿಂದ ಪ್ರಕಟಗೊಂಡಿದೆ.

**–ಉಷಾ ವಿಶ್ವನಾಥ್, ಬೆಂಗಳೂರು**

ಜಾನಪದದಲ್ಲಿ ಕ್ಷೇತ್ರದಲ್ಲಿ ಮಂಜಮ್ಮ ಜೋಗತಿ ಅವರು ಮಾಡಿರುವ ಸಾಧನೆ ಓದಿ ತುಂಬಾ ಸಂತೋಷವಾಯಿತು. ತೃತೀಯಲಿಂಗಿಯರು ಕೂಡ ಎಲ್ಲರಂತೆ ಬದುಕಲು ಸಾಧ್ಯ ಎಂಬುದನ್ನು ಮಂಜಮ್ಮ ಜೋಗತಿ ಅವರು ತೋರಿಸಿಕೊಟ್ಟಿದ್ದಾರೆ. ಲಲಿತಾ ಕೆ ಹೊಸಪ್ಯಾಟಿ ಅವರು ಲೇಖನದಲ್ಲಿ ಮಂಜಮ್ಮ ಜೋಗತಿ ಅವರು ಜೀವನದಲ್ಲಿ ಎಷ್ಟೆಲ್ಲಾ ಕಷ್ಟಪಟ್ಟು ಉತ್ತಮ ಸ್ಥಾನವನ್ನು ಪಡೆದುಕೊಂಡಿದ್ದಾರೆ ಎಂಬುದನ್ನು ಕಣ್ಣಿಗೆ ಕಟ್ಟುವಂತೆ ತಿಳಿಸಿಕೊಟ್ಟಿದ್ದಾರೆ.

ಹೆಣ್ಣು ಹೆಣ್ಣಾಗಿದ್ದರೇನೆ ಒಪ್ಪಿಕೊಳ್ಳಲು ಸಿದ್ಧವಿಲ್ಲದ ಈ ಸಮಾಜದಲ್ಲಿ ಮಂಜಮ್ಮ ಅವರು ಜಾನಪದ ಕ್ಷೇತ್ರದಲ್ಲಿ ಸಾಧನೆಯನ್ನು ಮಾಡುವ ಮೂಲಕ ಪದ್ಮಶ್ರೀ ಪ್ರಶಸ್ತಿಗೂ ಭಾಜನರಾಗಿದ್ದಾರೆ. ಇವರ ಮೇಲೆ ಪಿಎಚ್‌ಡಿ ಮಾಡುತ್ತಿರುವುದನ್ನು ತಿಳಿದು ಮಂಜಮ್ಮ ಮೇಲೆ ಹೆಮ್ಮೆ ಎನಿಸಿತು. ಅಲ್ಲದೆ ಅವರು ಹದಿನೈದು ಇಪ್ಪತು ತೃತೀಯಲಿಂಗಿಯರನ್ನು ಸಮಾಜದ ಆದರಕ್ಕೆ ಪಾತ್ರರಾಗಿಸಲು ಹೊರಟಿರುವುದು ಪ್ರಶಂಸನೀಯವಾದುದು.

**–ಮಹೇಶ್ ಕುಮಾರ್, ಹಿರಿಸಾವೆ**

* * *

ನೀರಿನ ಅಭಾವದಿಂದ ವ್ಯವಸಾಯವನ್ನೇ ಬಿಟ್ಟು ಗುಳೆ ಹೊರಟಿದ್ದ ಕೊಪ್ಪಳ ಜಿಲ್ಲೆಯ ರೈತ ಭೀಮಣ್ಣ ತಳವಾರ ಅವರನ್ನು ಮೆಣಸಿನ ಬೀಜೋತ್ಪಾದನೆಯು ಕೈಹಿಡಿದು ನಿಲ್ಲಿಸಿದ ಲೇಖನವು ಖಂಡಿತವಾಗಿ ವ್ಯವಸಾಯ ತೊರೆದು ನಗರ ಜೀವನಕ್ಕೆ ಗುಳೇ ಹೋಗುವ ರೈತರಿಗೆ ಮಾದರಿಯಾಗಲಿದೆ. ಅವರು ಕೊಳವೆ ಬಾವಿಯಲ್ಲಿನ ನೀರಿನಿಂದಲೇ ಅರ್ಧ ಎಕರೆಯಷ್ಟು ಭೂಮಿಯಲ್ಲಿ ಮೆಣಸಿನ ಬೀಜೋತ್ಪಾದನೆಯಲ್ಲಿ ತೊಡಗಿಕೊಂಡು ಲಕ್ಷ–ಲಕ್ಷ ರೂ ಹಣವನ್ನು ಸಂಪಾದಿಸುತ್ತಿರುವುದು ಶ್ಲಾಘನೀಯವಾದುದು.

ಹಾಗೆಯೇ ಡಿಸೆಂಬರ್ ಸಂಚಿಕೆಯಿಂದ ಬೀದರ್ ಜಾನುವಾರು ಸಂಶೋಧನೆ ಹಾಗೂ ಮಾಹಿತಿ ಕೇಂದ್ರವು ಪ್ರಮಾಣಿಸಿದ ಅಧಿಕ ಹಾಲು ಇಳುವರಿ ನೀಡುವ ಸುಧಾರಿತ ಮೇವಿನ ಬೆಳೆ ಕುರಿತು ತಿಳಿದುಕೊಳ್ಳುವಂತ್ತಾಯಿತು.

**–ತಿಮ್ಮಾಪೂರ, ಬಾಗಲಕೋಟೆ**

* * *

ವಾರ್ತಾ ಜನಪದ ಡಿಸೆಂಬರ್ ಸಂಚಿಕೆಯು ಹೆಚ್ಚು ಉಪಯುಕ್ತ ಮಾಹಿತಿಯೊಂದಿಗೆ ಮೂಡಿ ಬಂದಿದೆ. ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲಾ ಲೇಖನಗಳು ಒಂದಕ್ಕಿಂತ ಒಂದು ಉತ್ತಮ ಮಾಹಿತಿಯಿಂದ ಕೂಡಿದೆ. ಅದರಲ್ಲೂ ಖ್ಯಾತ ಹೃದಯ ತಜ್ಞರಾದ ಡಾ: ಸಿ.ಎಸ್.ಮಂಜುನಾಥ್ ಅವರ ಸಂದರ್ಶನವಂತೂ ಹೃದಯಕ್ಕೆ ಸಂಬಂಧಪಟ್ಟಂತೆ ಎಲ್ಲಾ ವಿಷಯವನ್ನು ತಿಳಿಸಿಕೊಟ್ಟಿತು.

ಇನ್ನು ಇಂಜಿನಿಯರಿಂಗ್ ಓದಿರುವ ಯುವಕರು ಹಳ್ಳಿಯೊಂದರಲ್ಲಿ ಎತ್ತಿನ ಗಾಣದೊಂದಿಗೆ ದೇಸಿ ಎಣ್ಣೆಯನ್ನು ತೆಗೆಯುವ ಉದ್ಯಮವನ್ನು ಸ್ಥಾಪಿಸಿ, ಹತ್ತಾರು ಜನರಿಗೆ ಉದ್ಯೋಗ ನೀಡಿರುವುದು ಹೆಮ್ಮೆಯ ಸಂಗತಿ. ಇಂತಹ ಲೇಖನಗಳನ್ನು ಓದಿಯಾದರೂ ಯುವ ಜನರು ಹಳ್ಳಿಗಳಲ್ಲಿ ಉದ್ಯಮಗಳನ್ನು ನಡೆಸಲು ಪ್ರೇರಣೆ ಸಿಗಲಿದೆ.

**–ಕೆ. ಆರ್. ರೇವತಿ, ಗೌಡನಗೆರೆ**

* * *

ನಿಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿರುವ 'ಮನಸಿದ್ದರೆ ಮಾರ್ಗ ನೂರು' ಲೇಖನ ಮನಮುಟ್ಟುವಂತಿದೆ. ಮಹಿಳೆಯರು ಮನಸ್ಸು ಮಾಡಿದರೆ ಕುಟುಂಬವನ್ನು ನಿಭಾಯಿಸುವ ಜೊತೆ ಜೊತೆಗೆ ಸ್ವಾವಲಂಬಿ ಜೀವನಕ್ಕೆ ದಾರಿ ಮಾಡಿಕೊಳ್ಳಬಹುದು ಎಂಬುದಕ್ಕೆ ಬೆಂಗಳೂರಿನಲ್ಲಿ ಕೇಕ್ ಬೇಕಿಂಗ್ ಅಕಾಡೆಮಿಯನ್ನು ನಡೆಸುತ್ತಿರುವ ಲಾವಣ್ಯ ವಿ. ಖೋತಾ ಅವರೇ ಸಾಕ್ಷಿ. ಅವರು ಈ ಮೂಲಕ ಸ್ವಾವಲಂಬಿ ಬದುಕನ್ನು ಕಟ್ಟಿಕೊಂಡು ಅಷ್ಟಕ್ಕೇ ಸುಮ್ಮನಾಗದೇ ತಮ್ಮ ಸಂಸ್ಥೆಗೆ ಅಂತರರಾಷ್ಟ್ರೀಯ ಮನ್ನಣೆ ಪಡೆದ ಕೆಲವೇ ಬೇಕಿಂಗ್ ಸಂಸ್ಥೆಗಳಲ್ಲಿ ಒಂದು ಎಂಬ ಹೆಗ್ಗಳಿಕೆಯನ್ನು ಪಡೆಯುವ ಜೊತೆಗೆ ಲಿಮ್ಕಾ ಬುಕ್ ಆಫ್ ರೆಕಾರ್ಡ್ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಅವರಿಗೆ ನಿಮ್ಮ ಪತ್ರಿಕೆಯ ಮೂಲಕ ಅಭಿನಂದನೆ ಸಲ್ಲಿಸುತ್ತೇನೆ.

**–ರೇಖಾ, ಚನ್ನಪಟ್ಟಣ**




ಡಿಸೆಂಬರ್ ತಿಂಗಳ ವಾರ್ತಾ ಜನಪದ ಸಂಚಿಕೆಯಲ್ಲಿ ಮೂಡಿ ಬಂದಿರುವ ಡಾ: ಸಿ.ಎಸ್. ಮಂಜುನಾಥ್ ಅವರ ಹೃದಯ ಸಂಬಂಧಿ ಕಾಯಿಲೆಯ ಬಗೆಗಿನ ಸಂದರ್ಶನ ಅತ್ಯಂತ ಪರಿಣಾಮಕಾರಿ ಹಾಗೂ ಉಪಯುಕ್ತ ಸಲಹೆಗಳಿಂದ ಕೂಡಿದ್ದು, ತುಂಬಾ ಸಹಕಾರಿಯಾಗಿದೆ. ನಾಡಿನ ಪ್ರಖ್ಯಾತ ಹೃದಯ ತಜ್ಞರು ತಮ್ಮ ಪತ್ರಿಕೆಯ ಸಂದರ್ಶನದ ವೇಳೆ ಅನೇಕ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಪತ್ರಿಕಾ ಮಂಡಳಿಗೆ ನನ್ನ ಧನ್ಯವಾದಗಳು.

**–ಎಂ. ಬಿ. ರಾಚೇಗೌಡ, ಮಂಡ್ಯ**

'ವಾರ್ತಾ ಜನಪದ' ಮಾಸಿಕ ಈಗ www.kanaja.inನಲ್ಲಿ ಲಭ್ಯ

ವಾರ್ತಾ ಜನಪದ ಮಾಸಿಕಕ್ಕೆ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ https://sevasindhu.karnataka.gov.in ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From: www.kpscvaani.com



# ಸಂಪಾದಕೀಯ...

ಪ್ರಿಯ ಓದುಗ ಮಿತ್ರರೇ

ನಮ್ಮ ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ಕರ್ನಾಟಕವನ್ನು ಸುರಕ್ಷಿತ ಸುಭಿಕ್ಷ ನಾಡನ್ನಾಗಿ ಕಟ್ಟುವ ಸಂಕಲ್ಪ ಮಾಡಿದ್ದಾರೆ. 21 ನೇ ಶತಮಾನದಲ್ಲಿ ಎಲ್ಲಾ ಜನಾಂಗದವರು ವಿದ್ಯೆ, ಉದ್ಯೋಗ ಮುಂತಾದ ಕ್ಷೇತ್ರದಲ್ಲಿ ಮುಂದುವರೆಯುವಂತೆ ಮಾಡುವುದು ಅವರ ಉದ್ದೇಶವಾಗಿದೆ.

ಈ ನಿಟ್ಟಿನಲ್ಲಿ ಅವರು ಎಜುಕೇಷನ್, ಎಂಪ್ಲಾಯ್‌ಮೆಂಟ್, ಎಂಪವರ್‌ಮೆಂಟ್ (ಶಿಕ್ಷಣ, ಉದ್ಯೋಗ ಮತ್ತು ಸಬಲೀಕರಣ) ಈ ಮೂರು 'ಇ' ಗಳಿಗೆ ಆದ್ಯತೆ ನೀಡುವ ಮೂಲಕ ಸಮಾಜದ ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದಾರೆ. ಈಗಾಲೇ ಚಿತ್ರದುರ್ಗದಲ್ಲಿ ಇಂಡಸ್ಟ್ರಿಯಲ್ ಟೌನ್ ಶಿಪ್ ಸ್ಥಾಪಿಸಲು ಸರ್ಕಾರ ಮುಂದಾಗಿದ್ದು, ಇದಕ್ಕಾಗಿ ಅಂದಾಜು 2000 ಎಕರೆ ಭೂಮಿಯನ್ನು ಗುರುತಿಸಲಾಗುತ್ತಿದೆ.

ರೈತರ ಬಗ್ಗೆ ಹೆಚ್ಚು ಕಾಳಜಿ ಹೊಂದಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ಕಬ್ಬು ಬೆಳೆಗಾರರು, ರೈತ ಮುಂಖಡರು ಒತ್ತಾಯದ ಮೇರೆಗೆ ಮಂಡ್ಯದ ಮೈಶುಗರ್ ಸಕ್ಕರೆ ಕಾರ್ಖಾನೆಯನ್ನು ಲೀಸ್‌ಗೆ ನೀಡಲು ನಿರ್ಧರಿಸಲಾಗಿದ್ದನ್ನು ತಾತ್ಕಾಲಿಕವಾಗಿ ತಡೆಹಿಡಿದಿದ್ದಾರೆ. ಅಲ್ಲದೆ ಸರ್ಕಾರದಿಂದಲೇ ಕಾರ್ಖಾನೆಯನ್ನು ಪುನಶ್ಚೇತನ ಮಾಡಿಸುವ ನಿಮಿತ್ತ ತಜ್ಞರ ಸಮಿತಿಯನ್ನು ರಚನೆ ಮಾಡಲು ನಿರ್ಧರಿಸಿದ್ದಾರೆ.

ಮುಂಬೈ ಕರ್ನಾಟಕ ಎಂದು ಕರೆಯಲಾಗುತ್ತಿದ್ದ ಉತ್ತರಕನ್ನಡ, ಬೆಳಗಾವಿ, ಧಾರವಾಡ, ವಿಜಯಪುರ, ಬಾಗಲಕೋಟೆ, ಗದಗ ಮತ್ತು ಹಾವೇರಿ ಜಿಲ್ಲೆಗಳನ್ನು 'ಕಿತ್ತೂರು ಕರ್ನಾಟಕ ಎಂದು ನಾಮಕರಣ ಮಾಡಲು ಸಚಿವ ಸಂಪುಟದಲ್ಲಿ ಒಪ್ಪಿಗೆ ದೊರೆತಿದೆ.

ಕೊರೊನಾ ಸಾಂಕ್ರಾಮಿಕ ರೋಗ ಮತ್ತು ಪ್ರವಾಹದಿಂದಾಗಿ ಕಳೆದ ಎರಡು ವರ್ಷಗಳಿಂದ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಚಳಿಗಾಲದ ಅಧಿವೇಶನವನ್ನು ನಡೆಸಲಾಗಿರಲಿಲ್ಲ. ಆದರೆ ಇದೇ ಡಿಸೆಂಬರ್ 13 ರಿಂದ 24 ರವರೆಗೆ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಜರುಗಿದ 10 ನೇ ಅಧಿವೇಶನವನ್ನು ಬಸವರಾಜ ಎಸ್ ಬೊಮ್ಮಾಯಿ ಅವರು ರಾಜ್ಯದ ಅಭಿವೃದ್ಧಿ ಪರವಾಗಿ, ಮತ್ತು ಜನಪರ ವಿಚಾರಗಳನ್ನು ಅರ್ಥಪೂರ್ಣವಾಗಿ ಚರ್ಚೆ ನಡೆಸುವ ಮೂಲಕ ಸುಸೂತ್ರವಾಗಿ ನಡೆಸಿದ್ದಾರೆ.

ಇನ್ನು ಬಹಳ ವರ್ಷಗಳ ಬೇಡಿಕೆಯಾಗಿದ್ದ ಶೌರ್ಯ ಪ್ರಶಸ್ತಿಗಳಾದ ಪರಮವೀರಚಕ್ರ, ಮಹಾವೀರಚಕ್ರ, ಅಶೋಕ ಚಕ್ರ, ಕೀರ್ತಿ ಚಕ್ರ, ವೀರಚಕ್ರ, ಶೌರ್ಯ ಚಕ್ರ, ಹಾಗೂ ಸೇನಾ/ನೌಕಾ/ವಾಯು ಸೇನಾ ಮೆಡಲ್‌ಗೆ ಭಾಜನರಾದ ನಮ್ಮ ರಾಜ್ಯದವರಿಗೆ ರಾಜ್ಯ ಸರ್ಕಾರದ ವತಿಯಿಂದ ನೀಡಲಾಗುವ ಅನುದಾನದ ಮೊತ್ತವನ್ನು ಐದು ಪಟ್ಟು ಹೆಚ್ಚಿಸುವುದಾಗಿ ಮುಖ್ಯಮಂತ್ರಿಗಳು ಘೋಷಿಸಿದ್ದಾರೆ.

ಜನರು ಕೊರೊನಾ ಹೊರಟು ಹೋಗಿದೆ ಎಂದು ಭಾವಿಸಿ ಭಾರೀ ಸಂಖ್ಯೆಯಲ್ಲಿ ಸಭೆ ಸಮಾರಂಭಗಳಲ್ಲಿ ಭಾಗವಹಿಸಲಾರಂಭಿಸಿದ್ದಾರೆ. ಆದರೆ ಕೋವಿಡ್ ಸಾಂಕ್ರಾಮಿಕ ಇನ್ನೂ ಕೊನೆಗೊಂಡಿಲ್ಲ. ಕೊರೊನಾ ವೈರಾಣುವಿನ ಹೊಸ ತಳಿ ಓಮಿಕ್ರಾನ್ ಪ್ರಕರಣ ನಮ್ಮ ರಾಜ್ಯದಲ್ಲೂ ಪತ್ತೆಯಾಗುತ್ತಿದೆ. ಹಾಗಾಗಿ ಸರ್ಕಾರವು ಓಮಿಕ್ರಾನ್ ಸೋಂಕು ತಡೆಗಟ್ಟಲು ಎಲ್ಲೆಲ್ಲಿ ಬಿಗಿ ಕ್ರಮಗಳನ್ನು ಕೈಗೊಳ್ಳಬೇಕೊ ಅಂತಹ ಕಡೆ ತೀವ್ರ ನಿಗಾವಹಿಸಿದೆ.

ಲಸಿಕೆ ನೀಡುವ ಕಾರ್ಯದಲ್ಲಿ ನಮ್ಮ ರಾಜ್ಯ ದೇಶದಲ್ಲೇ ಎರಡನೇ ಸ್ಥಾನವನ್ನು ಪಡೆದುಕೊಂಡಿದೆ. ಪ್ರತಿಯೊಬ್ಬರು ಲಸಿಕೆ ಪಡೆದುಕೊಂಡಲ್ಲಿ ಮಾತ್ರವೇ ಈ ಸಾಂಕ್ರಾಮಿಕ ರೋಗವನ್ನು ಸಂಪೂರ್ಣವಾಗಿ ತಡೆಗಟ್ಟಲು ಸಾಧ್ಯ. ಇಲ್ಲದಿದ್ದಲ್ಲಿ, ಇಲ್ಲಿಯವರೆಗೆ ಕೊರೊನಾ ತಡೆಗೆ ಕೈಗೊಂಡ ಶ್ರಮವೆಲ್ಲಾ ಹೊಳೆಯಲ್ಲಿ ಹುಣಸೆಹಣ್ಣು ತೊಳೆದಂತೆ ಆಗುತ್ತದೆ. ಕೊರೊನಾವನ್ನು ನಿರ್ಲಕ್ಷಿಸದೇ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದು ಪ್ರತಿಯೊಬ್ಬ ನಾಗರಿಕರ ಜವಾಬ್ದಾರಿಯಾಗಿದೆ. ಹಾಗಾಗಿ ಎಲ್ಲರೂ ಕಡ್ಡಾಯವಾಗಿ ಕೊರೊನಾ ನಿಯಮಾವಳಿಯನ್ನು ಪಾಲನೆ ಮಾಡಬೇಕು.

ಜನವರಿ 2022ನೇ ಸಂಚಿಕೆಯಲ್ಲಿ ಸರ್ಕಾರ ಇತ್ತೀಚೆಗೆ ಜಾರಿಗೆ ತಂದಿರುವ ಪ್ರಮುಖ ಯೋಜನೆಗಳು, ಕಾಯ್ದೆ, ಕಾನೂನು, ವಿವಿಧ ಇಲಾಖೆಯ ಸೇವಾಸೌಲಭ್ಯಗಳ ಮೇಲೆ ಬೆಳಕು ಚೆಲ್ಲಲಾಗಿದೆ.

**ಓದುಗರೆಲ್ಲರಿಗೂ ಮಕರ ಸಂಕ್ರಾಂತಿ, ಗಣರಾಜ್ಯೋತ್ಸವ ಮತ್ತು ಹೊಸವರ್ಷದ ಹಾರ್ದಿಕ ಶುಭಾಶಯಗಳು.**

**ಡಾ॥ ಪಿ. ಎಸ್. ಹರ್ಷ, ಐಪಿಎಸ್**
**ಪ್ರಧಾನ ಸಂಪಾದಕರು**

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001. email : feedbackjanapada@gmail.com



Downloaded From: www.kpscvaani.com



ಜನಸೇವಕ

# ನಾಗರಿಕರ ಮನೆ ಬಾಗಿಲಿಗೆ ಸರ್ಕಾರದ ಸೇವೆ

**ಜನಸೇವಕ, ಜನಸ್ಪಂದನ ಮೂಲಕ ನಾಗರಿಕರ ಮನೆ ಬಾಗಿಲಿಗೆ ಸರ್ಕಾರದ ಸೇವೆಗಳನ್ನು ಒದಗಿಸುವ ಸೌಲಭ್ಯವನ್ನು ಬೆಂಗಳೂರಿನ ಎಲ್ಲಾ ವಿಧಾನಸಭಾ ಕ್ಷೇತ್ರಗಳಿಗೆ ವಿಸ್ತರಿಸಲಾಗಿದೆ.**

ಆರ್. ಸ್ಮಿತಾ

ಜನಸೇವಕ ಕರ್ನಾಟಕ ಸರ್ಕಾರದ ಯೋಜನೆಯಾಗಿದ್ದು, ರಾಜ್ಯದ ನಾಗರಿಕರ ಮನೆ ಬಾಗಿಲಿಗೆ ಸರ್ಕಾರದ ಸೇವೆಗಳನ್ನು ತಲುಪಿಸಿ ಅವರ ದೈನಂದಿನ ಜೀವನವನ್ನು ಸುಗಮಗೊಳಿಸುವ ಉದ್ದೇಶದಿಂದ ಈ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಈ ಯೋಜನೆಯಡಿ ಪ್ರಸ್ತುತ 8 ಇಲಾಖೆಗಳ ವ್ಯಾಪ್ತಿಯಲ್ಲಿ ಬರುವ 58 ಸರ್ಕಾರದ ಸೇವೆಗಳನ್ನು ನಾಗರಿಕರಿಗೆ ಒದಗಿಸುತ್ತಿದೆ. ಈ ಯೋಜನೆಯನ್ನು ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯ (ಇಡಿಸಿಎಸ್) ಕರ್ನಾಟಕ ಸರ್ಕಾರ ಜಾರಿಗೊಳಿಸಿದೆ.

ಜನಸೇವಕ ಯೋಜನೆಯು ಮಾರ್ಚ್ 2, 2019 ರಂದು ಟಿ. ದಾಸರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ 5 ಸೇವೆಗಳೊಂದಿಗೆ ಮೊದಲ ಬಾರಿಗೆ ಪ್ರಾರಂಭವಾಯಿತು. ಈ ಯೋಜನೆಯನ್ನು ಫೆಬ್ರವರಿ 4, 2020 ರಂದು ರಾಜಾಜಿನಗರ, ಮಹದೇವಪುರ ಮತ್ತು ಬೊಮ್ಮನಹಳ್ಳಿ ಮೂರು ವಿಧಾನಸಭಾ ಕ್ಷೇತ್ರಗಳಿಗೆ ವಿಸ್ತರಿಸಲಾಯಿತು. ಈ ಹಂತದಲ್ಲಿ ಈ ಯೋಜನೆಗೆ ಇನ್ನೂ 48 ಸೇವೆಗಳನ್ನು ಸೇರಿಸಲಾಯಿತು. ಜನವರಿ 2021 ರಂದು ಇನ್ನೂ 5 ಸೇವೆಗಳ ಜೊತೆಗೆ ಸೇವಾ ಸೌಲಭ್ಯ ವ್ಯಾಪ್ತಿಗೆ ಯಶವಂತಪುರ ವಿಧಾನಸಭಾ ಕ್ಷೇತ್ರವನ್ನು ಸೇರಿಸಲಾಯಿತು. ಇಲ್ಲಿಯವರೆಗೆ ಈ 5 ಕ್ಷೇತ್ರಗಳಲ್ಲಿ ಈಗಾಗಲೇ 95,000ಕ್ಕೂ ಹೆಚ್ಚು ಅರ್ಜಿಗಳನ್ನು ಜನಸೇವಕ ಮೂಲಕ ಸಂಗ್ರಹಿಸಲಾಗಿದೆ.



Downloaded From: www.kpscvaani.com



**ಯೋಜನೆಯ ಲಾಭಗಳು**

- ನಿಮ್ಮ ಅಮೂಲ್ಯ ಸಮಯದ ಉಳಿತಾಯ.
- ಸೇವೆಗಳನ್ನು ಪಡೆಯಲು ಸರ್ಕಾರಿ ಕಚೇರಿಗಳಿಗೆ ಭೇಟಿ ನೀಡುವ ಅಗತ್ಯವಿಲ್ಲ.
- ಸರ್ಕಾರಿ ಕಚೇರಿಗಳಿಗೆ ಅನಗತ್ಯವಾಗಿ ತಿರುಗಾಡುವ ಅವಶ್ಯಕತೆ ಇಲ್ಲ.
- ಹಿರಿಯ ನಾಗರಿಕರು/ವಿಶೇಷ ಚೇತನರಿಗೆ ಸರ್ಕಾರದ ಸೇವೆ ಪಡೆಯಲು ಮತ್ತಷ್ಟು ಸುಲಭ.

ಕೋವಿಡ್-19 ಸಾಂಕ್ರಾಮಿಕ ರೋಗದ ಮೊದಲ ಅಲೆಯ ಸಮಯದಲ್ಲಿ ಕಾರ್ಯಕ್ರಮವನ್ನು ಸ್ಥಗಿತಗೊಳಿಸಲಾಗಿತ್ತು. ಎಲ್ಲಾ ಕೋವಿಡ್-19 ಸುರಕ್ಷತಾ ಪ್ರೋಟೋಕಾಲ್‌ಗಳನ್ನು ಅಳವಡಿಸಿಕೊಂಡು ಬದಲಾದ ಕಾರ್ಯತಂತ್ರದೊಂದಿಗೆ ಜನವರಿ 18, 2021 ರಂದು ಯೋಜನೆಯನ್ನು ಪುನರಾರಂಭಿಸಲಾಯಿತು. ಜನಸೇವಕರು ಕೋವಿಡ್-19 ಎರಡನೇ ಹಂತದಲ್ಲೂ ನಾಗರಿಕರ ಅಗತ್ಯ ಸೇವೆಗಳನ್ನು ಬಹಳ ಪರಿಣಾಮಕಾರಿಯಾಗಿ ಅವರ ಮನೆ ಬಾಗಿಲಿಗೆ ತಲುಪಿಸಿದರು.

ನಾಗರಿಕರು ತಮ್ಮ ಜನಸೇವಕ ಕೇಂದ್ರಕ್ಕೆ (080-44554455) ಕರೆ ಮಾಡುವುದರ ಮೂಲಕ ಅಥವಾ ಜಾಲತಾಣ (www.janasevaka.karnataka.gov.in) ವನ್ನು ಸಂಪರ್ಕಿಸುವುದರ ಮೂಲಕ ಅಥವಾ ಮೊಬೈಲ್ ಒನ್ ಅಪ್ಲಿಕೇಶನ್ ಬಳಸಿ ಸ್ಲಾಟ್‌ಗಳನ್ನು ಕಾಯ್ದಿರಿಸಬಹುದಾಗಿದೆ. ನಿಗದಿಯಾದ ದಿನಾಂಕ ಮತ್ತು ಸಮಯದಲ್ಲಿ ಅಧಿಕೃತವಾದ ಜನಸೇವಕ ನಾಗರಿಕರ ಮನೆಗೆ ಭೇಟಿ ನೀಡಿ ಕೋರಿದ ಸೇವೆಗೆ ಸಂಬಂಧಿಸಿದ ಪೂರಕ ದಾಖಲೆಗಳನ್ನು ಪಡೆದು ಸದರಿ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಸೇವಾಸಿಂಧು ತಂತ್ರಾಂಶದ ಮೂಲಕ ಸಂಬಂಧಿತ ಇಲಾಖೆಯ ಅಧಿಕಾರಿಗೆ ಕಳುಹಿಸಿಕೊಡಲಾಗುವುದು. ಸದರಿ ಅರ್ಜಿಯು ವಿಲೇ ಆದ ನಂತರ ಸಂಬಂಧಿತ ಸೇವೆಯನ್ನು ನಾಗರಿಕರು ಸೂಚಿಸಿದ ದಿನಾಂಕ ಮತ್ತು ಸಮಯದಂದು ಅವರ ಮನೆ ಬಾಗಿಲಿಗೆ ತಲುಪಿಸಲಾಗುವುದು.

ನಾಗರಿಕರು ಸೇವೆಗೆ ತಗಲುವ ಇಲಾಖಾ ಶುಲ್ಕದ ಜೊತೆಗೆ ರೂ. 115 ಸೇವಾ ಶುಲ್ಕವನ್ನು ಪಾವತಿಸಬೇಕು. ತಮ್ಮ ಅನುಕೂಲಕರ ದಿನ ಹಾಗೂ ಸಮಯದ ಆಧಾರದಲ್ಲಿ ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಯ ನಡುವೆ ಎಲ್ಲಾ ದಿನಗಳಲ್ಲಿ ಸ್ಲಾಟ್ ಬುಕ್ ಮಾಡಬಹುದು. ಪ್ರತಿ ಸೇವೆಯ ವಿತರಣೆಯ ನಂತರ ನಾಗರಿಕರಿಂದ ಮರುಸ್ಪಂದನೆ ಪಡೆಯಲಾಗುತ್ತದೆ. ಇದು ಅತಿಯಾದ ಶುಲ್ಕ ದುರ್ವರ್ತನೆ ಮತ್ತು ಭೇಟಿಗಳಲ್ಲಿ ವಿಳಂಬವನ್ನು ತಪ್ಪಿಸಲು ಅನುಕೂಲವಾಗುತ್ತದೆ.

### ನಾಗರಿಕರಿಗೆ ಪ್ರಯೋಜನಗಳು:

ಸೇವೆಗಳನ್ನು ಪಡೆಯಲು ಸರ್ಕಾರಿ ಕಚೇರಿಗಳಿಗೆ ಭೇಟಿ ನೀಡುವುದನ್ನು ತಪ್ಪಿಸಲು ಈ ಸೌಲಭ್ಯವು ಸಹಾಯ ಮಾಡುತ್ತದೆ. ಸೇವೆಗಳನ್ನು ಪಡೆಯಲು ಸರ್ಕಾರಿ ಕಚೇರಿಗಳಿಗೆ ಅಥವಾ ನಾಗರಿಕ ಸೇವಾ ಕೇಂದ್ರಗಳಿಗೆ ಪ್ರಯಾಣಿಸುವ ಸಮಯ ಮತ್ತು ಹಣ ಉಳಿತಾಯವಾಗಲಿದೆ. ಈ ಯೋಜನೆಯು ವಿಶೇಷವಾಗಿ ಹಿರಿಯ ನಾಗರಿಕರು, ವಿಕಲಚೇತನರು ಇವರುಗಳಿಗೆ ಸಹಾಯವಾಗುತ್ತದೆ. ಉದ್ಯೋಗಸ್ಥರಿಗೆ, ಕಾರ್ಮಿಕರಿಗೆ ದಿನದ ಕೂಲಿ ಅಥವಾ ದುಡಿಮೆ ಕಳೆದುಕೊಳ್ಳುವ ಭೀತಿಯಿರುವುದಿಲ್ಲ. ಸೇವೆಗಳನ್ನು ಪಡೆಯಲು ಸರತಿ ಸಾಲಿನಲ್ಲಿ ನಿಲ್ಲುವ ಅಗತ್ಯವಿಲ್ಲ. ಮಧ್ಯವರ್ತಿಗಳ ಹಾವಳಿ ಇರುವುದಿಲ್ಲ. ಕೋವಿಡ್-19 ಸಾಂಕ್ರಾಮಿಕ ರೋಗದ ನಡುವೆ ಉತ್ತಮ ಸೇವಾ ವಿತರಣಾ ವ್ಯವಸ್ಥೆ ಎಂದು ಸಾಬೀತಾಗಿದೆ.

**ಸರ್ಕಾರಿ ಸೇವೆಯನ್ನು ಪಡೆಯಲು ಜನರು ಸರ್ಕಾರಿ ಕಚೇರಿಗಳಿಗೆ ಹಲವು ಬಾರಿ ಅಲೆದಾಡುವ ಜೊತೆಗೆ ಮಧ್ಯವರ್ತಿಗಳಿಗೆ ಹಣ ನೀಡಿ ಮೋಸಹೋಗುತ್ತಾರೆ. ಇದನ್ನು ತಪ್ಪಿಸುವ ಸಲುವಾಗಿಯೇ ಸರ್ಕಾರಿ ಸೇವೆಗಳನ್ನು ಮನೆ ಬಾಗಿಲಿಗೆ ತಲುಪಿಸಲು ಜನಸೇವಕ ಯೋಜನೆಯನ್ನು ಜಾರಿಗೆ ತರಲಾಗಿದೆ. ಅಧಿಕಾರಿಗಳು ಈ ಯೋಜನೆಯ ಅನುಷ್ಠಾನದಲ್ಲಿ ಬದ್ಧತೆಯಿಂದ ಕೆಲಸ ಮಾಡಬೇಕು. ಹಾಗೆಯೇ ಜನಸೇವಕರಾಗಿ ನಿಯುಕ್ತಿಗೊಂಡವರು ಕೂಡ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು.**

**–ಬಸವರಾಜ ಎಸ್ ಬೊಮ್ಮಾಯಿ, ಮುಖ್ಯಮಂತ್ರಿಗಳು**



Downloaded From: www.kpscvaani.com




# ಜನಸ್ಪಂದನ ವೈಶಿಷ್ಟ್ಯಗಳು

ಸರ್ಕಾರದ ಯಾವುದೇ ಸೇವೆ ಅಥವಾ ಯೋಜನೆಗಳ ಬಗ್ಗೆ ಕುಂದು ಕೊರತೆ ದಾಖಲೆ.

ವೆಬ್ ಪೋರ್ಟಲ್/ ಮೊಬೈಲ್ ಆ್ಯಪ್/ ಸಹಾಯವಾಣಿ 1902 ಮುಖಾಂತರ ಕುಂದು ಕೊರತೆ/ ದೂರು ದಾಖಲಿಸಲು ಅವಕಾಶ.

ದೂರು ದಾಖಲಾದ ಕೂಡಲೇ ನಾಗರಿಕರಿಗೆ ಸ್ವೀಕೃತಿ ಸಂದೇಶ ರವಾನೆ.

ಸಂಬಂಧಪಟ್ಟ ಇಲಾಖೆಯ ಕ್ಷೇತ್ರ ಅನುಷ್ಠಾನಾಧಿಕಾರಿಗಳಿಗೆ ಕುಂದುಕೊರತೆ ಅರ್ಜಿಯ ರವಾನೆ.

ನಿಗದಿತ ಅವಧಿಯಲ್ಲಿ ಕುಂದು ಕೊರತೆ ನಿವಾರಣೆಗೆ ಕ್ರಮ.

ಕಾಲಾವಧಿ ಮೀರಿದರೆ, ಸ್ವಯಂಚಾಲಿತವಾಗಿ ಮೇಲಧಿಕಾರಿಗಳಿಗೆ ಕುಂದು ಕೊರತೆ ವರ್ಗಾವಣೆ,

ಕುಂದು ಕೊರತೆ ನಿವಾರಣೆ ತೃಪ್ತಿಕರವಾಗಿರುವ ಕುರಿತು ನಾಗರಿಕರ ಅಭಿಪ್ರಾಯ ಸಂಗ್ರಹಣೆ.

### ಜನಸೇವಕ ಯೋಜನೆಯಡಿಯಲ್ಲಿರುವ ಇಲಾಖೆಗಳು ಮತ್ತು ಸೇವೆಗಳು:

ಪ್ರಸ್ತುತ 8 ಇಲಾಖೆಗಳ 58 ಸೇವೆಗಳನ್ನು ಜನಸೇವಕ ಯೋಜನೆಯಡಿಯಲ್ಲಿ ಪಡೆಯಬಹುದು.

### ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ:

ಆಯುಷ್ಮಾನ್ ಭಾರತ್ – ಆರೋಗ್ಯ ಕರ್ನಾಟಕ ಗುರುತಿನ ಚೀಟಿ ಸೇವೆ ಲಭ್ಯವಿರತ್ತದೆ.

### ಭಾರತೀಯ ವಿಶಿಷ್ಟ ಗುರುತು ಪ್ರಾಧಿಕಾರ (UIDAI):

ಆಧಾರ್ ನೋಂದಣಿ, ಬಯೋಮೆಟ್ರಿಕ್ ನವೀಕರಣ, ಡೆಮೋಗ್ರಫಿಕ್ ನವೀಕರಣ/ ತಿದ್ದುಪಡಿ/ಆಧಾರ್‌ನಲ್ಲಿ ಬದಲಾವಣೆ, ಕಡ್ಡಾಯ ಬಯೋಮೆಟ್ರಿಕ್ ನವೀಕರಣ (5 ರಿಂದ 15 ವರ್ಷಗಳವರೆಗೆ)ದ ಸೇವೆಯನ್ನು ಒಳಗೊಂಡಿದೆ.

### ಕಂದಾಯ ಇಲಾಖೆ:

ಆದಾಯ ಪ್ರಮಾಣ ಪತ್ರ, ಜಾತಿ ಪ್ರಮಾಣಪತ್ರ (ಪ್ರವರ್ಗ – ಎ), ಆದಾಯ ಮತ್ತು ಜಾತಿ ಪ್ರಮಾಣ ಪತ್ರ, ಭೂ ಹಿಡುವಳಿ ಪ್ರಮಾಣ ಪತ್ರ, ಬೊನಾಫೈಡ್ ಪ್ರಮಾಣಪತ್ರ, ಸಾಲ ತೀರಿಸುವ ಶಕ್ತಿ ಪ್ರಮಾಣ ಪತ್ರ, ಕುಟುಂಬ ವಂಶವೃಕ್ಷ ದೃಢೀಕರಣ ಪ್ರಮಾಣ ಪತ್ರ, ಮೇಲುಸ್ಥರಕ್ಕೆ ಸೇರಿಲ್ಲವೆಂದು ಪ್ರಮಾಣ ಪತ್ರ, ಸಹಾನುಭೂತಿಯ ನೇಮಕಾತಿಗಾಗಿ ಆದಾಯ ಪ್ರಮಾಣ ಪತ್ರ, ಜೀವಂತ ದೃಢೀಕರಣ ಪ್ರಮಾಣಪತ್ರ, ಇತರ ಹಿಂದುಳಿದ ವರ್ಗಗಳ ಪ್ರಮಾಣಪತ್ರ (ಕೇಂದ್ರ), ವಾಸಸ್ಥಳ ಪ್ರಮಾಣ ಪತ್ರ, ನಿವಾಸಿ ಪ್ರಮಾಣ ಪತ್ರ, ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ಪಿಂಚಣಿ, ವಿಧವಾ ಪಿಂಚಣಿ, ವಿಕಲಚೇತನರ ಪಿಂಚಣಿ, ಅಂತ್ಯ ಸಂಸ್ಕಾರ ಯೋಜನೆ, ಆಸಿಡ್ ವಿಕ್ಟಿಮ್ ಪಿಂಚಣಿ, ಸರ್ಕಾರಿ ನೌಕರಿ ಇಲ್ಲದಿರುವ ಬಗ್ಗೆ ಪ್ರಮಾಣ ಪತ್ರ, ನಿರುದ್ಯೋಗಿ





Downloaded From: www.kpscvaani.com



ದೃಢೀಕರಣ ಪತ್ರ, ವಿಧವಾ ಪ್ರಮಾಣ ಪತ್ರ, ಸಂಧ್ಯಾ ಸುರಕ್ಷಾ ಯೋಜನೆ ಕುರಿತಾದ ಸೇವೆಗಳನ್ನು ಕಂದಾಯ ಇಲಾಖೆ ನೀಡುತ್ತದೆ.

### ಕರ್ನಾಟಕ ಪೊಲೀಸ್ ಇಲಾಖೆ:

ಮನೆಗೆಲಸ/ಗೃಹ ನಿರ್ವಹಣೆಗಾರರ ಪೂರ್ವಾಪರ ಪರಿಶೀಲನಾ ಪ್ರಮಾಣ ಪತ್ರಕ್ಕಾಗಿ ಅರ್ಜಿ, ಸಂಸ್ಥೆಗಳು/ಕಂಪೆನಿಗಳ ಪೊಲೀಸ್ ಪರಿಶೀಲನೆ ಪ್ರಮಾಣ ಪತ್ರಗಳಿಗೆ ಅರ್ಜಿ, ಉದ್ಯೋಗ ಪರಿಶೀಲನೆಗಾಗಿ ಅರ್ಜಿ, ಈ ಸೇವೆಗಳು ಕರ್ನಾಟಕ ಪೋಲಿಸ್ ಇಲಾಖೆಯಿಂದ ಲಭ್ಯವಿರುತ್ತದೆ.

### ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ:

ಹಿರಿಯ ನಾಗರಿಕರ ಗುರುತಿನ ಚೀಟಿ ಕುರಿತಾದ ಸೇವೆಗಳನ್ನು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ನೀಡುತ್ತದೆ.

### ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ:

ಕ್ರಯ ಪತ್ರದ ಆಧಾರದ ಮೇಲೆ ಖಾತಾ ವರ್ಗಾವಣೆ (ಒಬ್ಬ), ಕ್ರಯ ಪತ್ರದ ಆಧಾರದ ಮೇಲೆ ಖಾತಾ ವರ್ಗಾವಣೆ (ಜಂಟಿ), ಪಿತ್ರಾರ್ಜಿತ ಆಧಾರದ ಮೇಲೆ ಖಾತಾ ವರ್ಗಾವಣೆ (ಒಬ್ಬ), ಪಿತ್ರಾರ್ಜಿತ ಆಧಾರದ ಖಾತಾ ವರ್ಗಾವಣೆ (ಜಂಟಿ), ಉಡುಗೊರೆ ಮೂಲಕ ಖಾತಾ ವರ್ಗಾವಣೆ (ಒಬ್ಬ), ಉಡುಗೊರೆ ಮೂಲಕ ಖಾತಾ ವರ್ಗಾವಣೆ (ಜಂಟಿ), ನ್ಯಾಯಾಲಯದ ತೀರ್ಪಿನ ಮೂಲಕ ಖಾತಾ ವರ್ಗಾವಣೆ (ಒಬ್ಬ), ನ್ಯಾಯಾಲಯದ ತೀರ್ಪಿನ ಮೂಲಕ ಖಾತಾ ವರ್ಗಾವಣೆ (ಜಂಟಿ), ವಿಭಜನಾ ಪತ್ರದ ಮೂಲಕ ಖಾತಾ ವರ್ಗಾವಣೆ (ಒಬ್ಬ), ವಿಭಜನಾ ಪತ್ರದ ಮೂಲಕ ಖಾತಾ ವರ್ಗಾವಣೆ (ಜಂಟಿ), ಬಿಡುಗಡೆ ಪತ್ರದ ಮೂಲಕ ಖಾತಾ ವರ್ಗಾವಣೆ (ಒಬ್ಬ), ಬಿಡುಗಡೆ ಪತ್ರದ ಮೂಲಕ ಖಾತಾ ವರ್ಗಾವಣೆ (ಜಂಟಿ), ಕ್ರಯ ಪತ್ರದ ಆಧಾರದ ಮೇಲೆ ಖಾತಾ ವಿಭಜನೆ (ಒಬ್ಬ), ಕ್ರಯ ಪತ್ರದ ಆಧಾರದ ಮೇಲೆ ಖಾತಾ ವಿಭಜನೆ (ಜಂಟಿ), ಖಾತಾ ನೋಂದಣಿ (ಒಬ್ಬ ಮಾಲೀಕ), ಖಾತಾ ನೋಂದಣಿ (ಜಂಟಿ), ಕ್ರಯ ಪತ್ರದ ಆಧಾರದ ಮೇಲೆ ಖಾತಾ ಒಂದುಗೂಡಿಸುವಿಕೆ ಸೇವೆಗಳನ್ನು ಬೃಹತ್ ಬೆಂಗಳೂರು ನಗರ ಪಾಲಿಕೆಯು ನೀಡುತ್ತದೆ.

### ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಫಲಾನುಭವಿಯಾಗಿ ನೋಂದಾಯಿಸುವ ಅರ್ಜಿ, ಶೈಕ್ಷಣಿಕ ಸಹಾಯಧನಕ್ಕಾಗಿ ಅರ್ಜಿ, ಅಂತ್ಯಕ್ರಿಯೆ ಮತ್ತು ಅನುಗ್ರಹರಾಶಿ ಸಹಾಯ ಧನಕ್ಕಾಗಿ ಅರ್ಜಿ, ಮುಂದಿನ ಒಂದು/ಮೂರು ವರ್ಷದವರೆಗೆ ಅಸ್ತಿತ್ವದಲ್ಲಿರುವ ನೋಂದಣಿಯನ್ನು ಮುಂದುವರೆಸುವುದಕ್ಕಾಗಿ ಅರ್ಜಿ, ವೈದ್ಯಕೀಯ ಸಹಾಯಧನ ಅರ್ಜಿ (ಕಾರ್ಮಿಕ ಆರೋಗ್ಯ ಭಾಗ್ಯ), ಮದುವೆ ಸಹಾಯಧನಕ್ಕಾಗಿ ಅರ್ಜಿ, ನಕಲು ಗುರುತಿನ ಚೀಟಿ ಪಡೆಯಲು ಅರ್ಜಿ, ಹೆರಿಗೆ ಸಹಾಯಧನಕ್ಕಾಗಿ ಅರ್ಜಿ, ಪಿಂಚಣಿಗಾಗಿ ಅರ್ಜಿ ಸೇವೆಗಳನ್ನು ಒಳಗೊಂಡಿದೆ.

> **ಈ ಜನಸೇವಕ ವೇದಿಕೆಯ ಮೂಲಕ ಸೇವೆಗಾಗಿ ಅರ್ಜಿ ಸಲ್ಲಿಸುವ ನಾಗರಿಕರು ತಮ್ಮ ಅನುಕೂಲತೆಯ ಆಧಾರದ ಮೇಲೆ ಲಭ್ಯವಿರುವ ಯಾವುದೇ ಸ್ಲಾಟ್ (ಸಮಯ) ಅನ್ನು ಬುಕ್ ಮಾಡುವ ಅವಕಾಶವನ್ನು ಇದರಲ್ಲಿ ಒದಗಿಸಲಾಗಿದೆ.**

### ಆಹಾರ, ನಾಗರಿಕರ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ:

ಹೊಸ ಆದ್ಯತೇತರ ಪಡಿತರ ಚೀಟಿ (ಎಪಿಎಲ್ ಕಾರ್ಡ್)ಗಳ ಸೇವೆಯನ್ನು ಆಹಾರ, ನಾಗರಿಕರ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆಯಿಂದ ಪಡೆಯಬಹುದು.

### ಜನಸ್ಪಂದನ

ಏಕೀಕೃತ ಸಾರ್ವಜನಿಕ ಕುಂದುಕೊರತೆ ನಿವಾರಣಾ ವ್ಯವಸ್ಥೆಯು ರಾಜ್ಯದಲ್ಲಿ ನಾಗರಿಕರಿಗೆ ಜನಸ್ನೇಹಿ ಆಡಳಿತ ನೀಡುವ ಕಡೆಗೆ ಮತ್ತೊಂದು ದಿಟ್ಟ ಹಾಗೂ ಪಾರದರ್ಶಕ ಹೆಜ್ಜೆಯನ್ನು ಇಟ್ಟಿದೆ. ಹೊಸದಾಗಿ ಲೋಕಾರ್ಪಣೆಗೊಂಡ IPGRS ಜನಸ್ಪಂದನ ಎಂದು ಕರೆಯುವ ಏಕೀಕೃತ ಸಾರ್ವಜನಿಕ ಕುಂದುಕೊರತೆ ನಿವಾರಣಾ ವ್ಯವಸ್ಥೆಯು ನಾಗರಿಕರಿಗೆ ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳ ಯೋಜನೆ/ಸೇವೆಗಳ ಕುರಿತಂತೆ ಇರುವ ಕುಂದುಕೊರತೆಗಳನ್ನು ದಾಖಲಿಸಲು ಜನಸ್ಪಂದನವು ಅತ್ಯಂತ ಸದೃಢವಾದ ದತ್ತಾಂಶ ಆಧಾರಿತ ಬಹುಮುಖಿ, ಕಾಗದರಹಿತ ತಾಂತ್ರಿಕ ವೇದಿಕೆಯನ್ನು ಒದಗಿಸುತ್ತದೆ.

ನಾಗರಿಕರಿಗೆ ನೀಡಲಾಗುವ ಸೇವೆಗಳ ಗುಣಮಟ್ಟವನ್ನು ಉತ್ತಮಪಡಿಸಲು ಆದಿಯಿಂದ ಅಂತ್ಯದವರೆಗೆ ಅಂದರೆ ದೂರು ದಾಖಲೆಯಿಂದ ಹಿಡಿದು ದೂರು ನಿವಾರಣೆವರೆಗೆ ನಂತರ ನಾಗರಿಕರಿಂದ ತೃಪ್ತಿಕರವಾಗಿದೆ ಎಂಬ feedback ಪಡೆಯುವವರೆಗೆ ಜನಸ್ಪಂದನವು ಒಂದು



Downloaded From: www.kpscvaani.com




ಸಮಗ್ರ ವ್ಯವಸ್ಥೆಯಾಗಿದೆ. ಕರ್ನಾಟಕ ಸರ್ಕಾರದ 50ಕ್ಕೂ ಹೆಚ್ಚು ಇಲಾಖೆಗಳ 600 ಕ್ಕೂ ಹೆಚ್ಚು ಯೋಜನೆ/ಸೇವೆಗಳ ಕುರಿತಂತೆ ಕುಂದು ಕೊರತೆಗಳನ್ನು ದಾಖಲಿಸಲು ಈ ವೇದಿಕೆಯು ನಾಗರಿಕರಿಗೆ ಅನುವು ಮಾಡಿಕೊಡುತ್ತದೆ. ಈ ಏಕೀಕೃತ ವ್ಯವಸ್ಥೆಯಲ್ಲಿ ನಾಗರಿಕರ ಕುಂದುಕೊರತೆ ದಾಖಲಾದ ತಕ್ಷಣ Last Mile Functineries ಅಂದರೆ ಕ್ಷೇತ್ರದ ಅನುಷ್ಠಾನ ಅಧಿಕಾರಿಗೆ (ಅಂದರೆ ಗ್ರಾಮಲೆಕ್ಕಿಗರು, ಕೃಷಿ ಅಧಿಕಾರಿಗಳು ಇತ್ಯಾದಿ) ತಕ್ಷಣದ ಕ್ರಮಕ್ಕಾಗಿ ಕಳುಹಿಸಿಕೊಡಲಾಗುತ್ತದೆ ಮತ್ತು ನಿಗದಿತ ಕಾಲಾವಧಿಯೊಳಗೆ ಪರಿಹರಿಸಲಾಗುತ್ತಿರುವ ಬಗ್ಗೆ ಪ್ರತಿ ಹಂತದಲ್ಲೂ ಪ್ರಗತಿ ಮೇಲ್ವಿಚಾರಣೆ/ ಪರಿಶೀಲನೆ ಮಾಡಲಾಗುತ್ತದೆ.

**ನಾಗರಿಕರು** ipgrs.karnataka.gov.in ವೆಬ್ ಪೋರ್ಟಲ್ ಅನ್ನು ಅಥವಾ Android play store ನಲ್ಲಿ ಲಭ್ಯವಿರುವ ಜನಸ್ಪಂದನ mobile app ಮೂಲಕ ಅಥವಾ ಗ್ರಾಮ ಪಂಚಾಯಿತಿಗಳಲ್ಲಿರುವ ಬಾಪೂಜಿ ಸೇವಾ ಕೇಂದ್ರಗಳಲ್ಲಿ ದೂರುಗಳನ್ನು ದಾಖಲು ಮಾಡಲು ಅವಕಾಶವಿರುತ್ತದೆ. ಏಕೀಕೃತ ಸಾರ್ವಜನಿಕ ಕುಂದುಕೊರತೆ ನಿವಾರಣಾ ವ್ಯವಸ್ಥೆಯು ಕೇಂದ್ರ ಸರ್ಕಾರದ CPGRAMS ವೇದಿಕೆಯೊಂದಿಗೆ ಸಹ ಜೋಡಿತವಾಗಿದ್ದು CPGRAMS ನಲ್ಲಿ ದಾಖಲಾದ ಕುಂದುಕೊರತೆಗಳನ್ನು ಸಹ ಕ್ಷೇತ್ರದ ಅನುಷ್ಠಾನ ಅಧಿಕಾರಿಗಳಿಗೆ ಕಳುಹಿಸುವ ವ್ಯವಸ್ಥೆ ಇರುತ್ತದೆ.

ಅಲ್ಲದೇ ನಾಗರಿಕರು ಏಕೀಕೃತ ಸಾರ್ವಜನಿಕ ಕುಂದುಕೊರತೆ ನಿವಾರಣಾ ವ್ಯವಸ್ಥೆಗೆ ಮೀಸಲಾಗಿರುವ ಸಹಾಯವಾಣಿ 1902ಗೆ ಕರೆ ಮಾಡುವ ಮೂಲಕ ತಮ್ಮ ಕುಂದುಕೊರತೆ ವಿವರಗಳನ್ನು ದಾಖಲಿಸಲು ಇಚ್ಛಿಸಿದಲ್ಲಿ ಸಹಾಯವಾಣಿಯು ನಾಗರಿಕರ ಪರವಾಗಿ ದೂರುಗಳನ್ನು ದಾಖಲಿಸುತ್ತದೆ. ಪೊಲೀಸ್, ಅಗ್ನಿಶಾಮಕ, ಆಂಬುಲೆನ್ಸ್, ಕೋವಿಡ್ ಈ ರೀತಿಯ ತುರ್ತುಸೇವೆಗಳು ಹಾಗೂ ವಾಣಿಜ್ಯ ಸೇವೆಯಾದ ಬೆಸ್ಕಾಂ ಇತ್ಯಾದಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಸೇವೆಗಳ ಬಗ್ಗೆ ಕುಂದುಕೊರತೆಗಳಿದ್ದಲ್ಲಿ ಜನಸ್ಪಂದನದಲ್ಲಿ ದಾಖಲಿಸಬಹುದಾಗಿದೆ.



**ನಾಗರಿಕರು ವಿವಿಧ ಇಲಾಖೆಗಳ ಯೋಜನೆ/ಸೇವೆಗಳ ಕುರಿತಂತೆ ಇರುವ ತಮ್ಮ ಕುಂದುಕೊರತೆಗಳನ್ನು ನಿವಾರಿಸಿಕೊಳ್ಳಲು ಪದೇ ಪದೇ ಸರ್ಕಾರಿ ಕಚೇರಿಗೆ ಅಲೆದಾಡುವ ಅಗತ್ಯವಿಲ್ಲ. ಬದಲಿಗೆ ಸರ್ಕಾರ ಒದಗಿಸಿರುವ ಸಹಾಯವಾಣಿ ಸಂಖ್ಯೆ 1902 ಗೆ ಕರೆ ಮಾಡುವ ಮೂಲಕ ಸರ್ಕಾರಿ ಯೋಜನೆಗೆ ಸಂಬಂಧಿಸಿದ ತಮ್ಮ ಯಾವುದೇ ಕುಂದು ಕೊರತೆಗಳ ಬಗ್ಗೆ ದೂರು ದಾಖಲಿಸಬಹುದು.**

ನಾಗರಿಕರು ತಾವು ದಾಖಲಿಸಿದ ದೂರುಗಳ ನಿವಾರಣೆಗಾಗಿ ಕೈಗೊಂಡ ಕ್ರಮಗಳನ್ನು ಪರಿಶೀಲಿಸಬಹುದು. ನಿಗದಿತ ಅವಧಿಯೊಳಗೆ ಕುಂದು ಕೊರತೆಗಳ ನಿವಾರಣೆಯಾಗುತ್ತದೆ. ಯಾವುದೇ ಕುಂದುಕೊರತೆಯನ್ನು ನಿಗದಿತ ಕಾಲಾವಧಿಯೊಳಗೆ ನಿವಾರಿಸದಿದ್ದಲ್ಲಿ ಅದು ಸ್ವಯಂಪ್ರೇರಿತವಾಗಿ ಮುಂದಿನ ಮೇಲಾಧಿಕಾರಿಗೆ ರವಾನಿಸಲ್ಪಡುತ್ತದೆ ಹಾಗೂ ದೂರು ನಿವಾರಿಸಲು ಕ್ರಮಕೈಗೊಳ್ಳದ ಅಧಿಕಾರಿಗೆ ಸ್ವಯಂಚಾಲಿತವಾಗಿ ಕಾರಣ ಕೇಳುವ ನೋಟೀಸ್ ಅನ್ನು ಜಾರಿ ಮಾಡಲಾಗುತ್ತದೆ.

ರಾಜ್ಯ ಮಟ್ಟದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಗಳನ್ನು ರಚಿಸಲಾಗಿದ್ದು, ಕುಂದುಕೊರತೆಗಳ ನಿವಾರಣಾ ಪ್ರಗತಿ ಪರಿಶೀಲನೆಯನ್ನು ನಿಯತಕಾಲಿಕವಾಗಿ ಮಾಡಲಾಗುತ್ತದೆ. ನಾಗರಿಕರಿಗೆ ಇದರಿಂದಾಗಿ ಒಳ್ಳೆಯ ಗುಣಮಟ್ಟದ ಸೇವೆಗಳು ಲಭ್ಯವಾಗುತ್ತದೆ. ಕುಂದುಕೊರತೆ ನಿವಾರಣೆಗೆ ಅಧಿಕಾರಿಗಳು ಕೈಗೊಂಡ ಕ್ರಮದ ಕುರಿತು ಸಾರ್ವಜನಿಕರಿಂದ ಪ್ರತಿಕ್ರಿಯೆಗಳನ್ನು ಸಂಗ್ರಹಿಸಲಾಗುತ್ತದೆ. ನೂತನ ಜನಸ್ಪಂದನವು ಸಾರ್ವಜನಿಕ ಕುಂದುಕೊರತೆ ನಿವಾರಣೆಯಲ್ಲಿ ಏಕರೂಪತೆಯನ್ನು ತಂದು ಸರ್ಕಾರದ ಆಡಳಿತದಲ್ಲಿ ನಿರಂತರವಾಗಿ ಪಾರದರ್ಶಕತೆ, ಹೊಣೆಗಾರಿಕೆ ಹಾಗೂ ಉತ್ತಮ ಗುಣಮಟ್ಟವನ್ನು ಕಾಯ್ದುಕೊಳ್ಳಲು ಸಹಕಾರಿಯಾಗುತ್ತದೆ. ■



Downloaded From: www.kpscvaani.com

ಕರ್ನಾಟಕ ಪೊಲೀಸ್ ಕಾನೂನಿಗೆ ತಿದ್ದುಪಡಿ



# ಆನ್‌ಲೈನ್ ಬೆಟ್ಟಿಂಗ್ ವ್ಯವಹಾರಕ್ಕೆ ಕಡಿವಾಣ

**ಸಮಾಜದಲ್ಲಿ ಸಾಮಾಜಿಕ ಪಿಡುಗಾಗಿ ಕಾಡುತ್ತಿದ್ದ ಬೆಟ್ಟಿಂಗ್ ದಂಧೆಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಕರ್ನಾಟಕ ಸರಕಾರವು ಕರ್ನಾಟಕ ಪೊಲೀಸ್ (ತಿದ್ದುಪಡಿ) ವಿಧೇಯಕ ಮಸೂದೆಯನ್ನು ಜಾರಿಗೆ ತಂದಿದೆ.**

ಎಂ. ವೆಂಕಟೇಶ್

ನಮ್ಮ ಕರ್ನಾಟಕ ರಾಜ್ಯ ಸರ್ಕಾರವು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನಾಯಕತ್ವದಲ್ಲಿ, ರಾಜ್ಯದ ಜನತೆಯ ಕಲ್ಯಾಣ ದೃಷ್ಟಿಯಿಂದ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ನಾಡಿನ ಜನತೆಗೆ ನೀಡಿದ ಭರವಸೆಗಳನ್ನು ಅನುಷ್ಠಾನಗೊಳಿಸುವಲ್ಲಿ ದಾಪುಗಾಲು ಇಡುತ್ತಿದೆ.


ಅಂತಹ ಹಲವು ಉಪಕ್ರಮಗಳಲ್ಲಿ ರಾಜ್ಯ ಸರಕಾರವು ಇತ್ತೀಚೆಗೆ ಕರ್ನಾಟಕ ವಿಧಾನ ಮಂಡಲದ ಎರಡೂ ಸದನಗಳಲ್ಲಿ ಮಂಡಿಸಿ, ಸದನದ ಒಪ್ಪಿಗೆಯನ್ನು ಪಡೆಯಲು ಸಫಲವಾದ **"ಕರ್ನಾಟಕ ಪೊಲೀಸ್ (ತಿದ್ದುಪಡಿ) ವಿಧೇಯಕ ಅಥವಾ ಆನ್‌ಲೈನ್ ಬೆಟ್ಟಿಂಗ್ ನಿಷೇಧ ಕಾನೂನು"** ಮಹತ್ತರವಾದದು.

ಆಧುನಿಕ ತಂತ್ರಜ್ಞಾನ ಅದರಲ್ಲಿಯೂ ಮಾಹಿತಿ ತಂತ್ರಜ್ಞಾನ ಅತ್ಯಂತ ವೇಗದಲ್ಲಿ ಬೆಳೆಯುತ್ತಿದ್ದು, ಸಮಾಜದ ಎಲ್ಲಾ ಸ್ತರಗಳಲ್ಲಿ ವ್ಯಾಪಿಸಿಕೊಂಡಿದ್ದು, ಹತ್ತು ಹಲವು ರೀತಿಯಲ್ಲಿ ಮಾನವನಿಗೆ ಸಹಕಾರಿಯಾಗಿರುವಂತೆ, ಹತ್ತು ಹಲವು ಸಾಮಾಜಿಕ ಸಮಸ್ಯೆಗಳನ್ನೂ ಹುಟ್ಟು ಹಾಕಿದೆ.

ಕರ್ನಾಟಕ ಸರಕಾರವು ಸಾಮಾಜಿಕ ಪಿಡುಗಾಗಿ ಕಾಡುತ್ತಿದ್ದ ಬೆಟ್ಟಿಂಗ್ ವ್ಯವಹಾರ ಹಾಗೂ ಲಾಟರಿ ದಂಧೆಗೆ ನಿಷೇಧ ಹೇರಿದೆ. ಆದರೆ "ಹೋದೆಯಾ ಪಿಶಾಚಿ ಅಂದರೆ, ಬಂದೆ ಗವಾಕ್ಷೀಯಲಿ' ಎಂಬ ಗಾದೆಯಂತೆ, ಲಾಟರಿ ಅಥವಾ ಜೂಜು ಎಂಬ ವ್ಯಸನಗಳು, ಯುವಜನತೆಯನ್ನು ಆನ್‌ಲೈನ್ ಗೇಮಿಂಗ್ ಮತ್ತು ಬೆಟ್ಟಿಂಗ್ ಎಂಬ ಹೆಸರಿನಲ್ಲಿ ಆವರಿಸಿಕೊಂಡು ಲಕ್ಷಾಂತರ ಪೋಷಕರಲ್ಲಿ ಆತಂಕ ಮನೆ ಮಾಡಿತ್ತು.



Downloaded From: www.kpscvaani.com




ಆನ್‌ಲೈನ್ ಜೂಜು ಅಥವಾ ಬೆಟ್ಟಿಂಗ್‌ಗಳಲ್ಲಿ ಅಪಾರವಾದ ಹಣ ತೊಡಗಿಸಿ, ಮೋಸಕ್ಕೆ ಒಳಗಾಗಿ, ಲಕ್ಷಾಂತರ ರೂಪಾಯಿಗಳನ್ನು ಕಳೆದುಕೊಂಡು ಆರ್ಥಿಕ ನಷ್ಟವನ್ನು ಅನುಭವಿಸಿ ಹತಾಶರಾಗುತ್ತಿದ್ದ ಯುವ ಜನತೆ, ಆತ್ಮಹತ್ಯೆಯಂತಹ ಆಘಾತಕಾರಿ ಹಾದಿ ತುಳಿಯುವ ಹಲವಾರು ಘಟನೆಗಳು ನಡೆಯುತಿದ್ದವು.

ಸಾಮಾಜಿಕ ಪಿಡುಗಾಗಿ ಬೃಹದಾಕಾರವಾಗಿ ಬೆಳೆದ ಆನ್‌ಲೈನ್ ಬೆಟ್ಟಿಂಗ್ ಅನ್ನು ನಿಯಂತ್ರಿಸಬೇಕು, ಹಾಗೂ ಆತ್ಮಹತ್ಯಾ ದಾರಿ ತುಳಿದ ಯುವಜನತೆಯನ್ನು ರಕ್ಷಿಸಬೇಕು ಎಂಬ ಜನಾಭಿಪ್ರಾಯಕ್ಕೆ ಮನ್ನಣೆ ನೀಡಿದ ಸರಕಾರ, ಸಮಸ್ಯೆಗೆ ಪರಿಹಾರವೆಂಬಂತೆ ಹಣ ಅಥವಾ ಬಾಜಿ ಕಟ್ಟಿ ಆಟ ಆಡುವ ಎಲ್ಲ ತರಹದ ಗೇಮ್‌ಗಳನ್ನೂ ನಿಷೇಧ ಮಾಡುವ ಮಸೂದೆಯನ್ನು ಸದನದಲ್ಲಿ ಮಂಡಿಸಲು ತೀರ್ಮಾನಿಸಲಾಗಿತ್ತು.

ಅಧಿವೇಶನದಲ್ಲಿ ಆನ್‌ಲೈನ್ ನಿಷೇಧ ಮಸೂದೆಯನ್ನು ಸದನದ ಎರಡೂ ಸದನದಲ್ಲಿ ಮಂಡಿಸಿದ ಗೃಹ ಸಚಿವರಾದ ಆರಗ ಜ್ಞಾನೇಂದ್ರ ಅವರು, ತಿದ್ದುಪಡಿ ವಿಧೇಯಕದ ಮಹತ್ವ, ಅದನ್ನು ತರಬೇಕಾದ ಅನಿವಾರ್ಯತೆ, ಹಾಗೂ ವಿಧೇಯಕದ ಬಗ್ಗೆ ಇರುವ ಎಲ್ಲ ರೀತಿಯ ಕಾನೂನು ತೊಡಕುಗಳು ಹಾಗೂ ಅವುಗಳಿಗೆ ಕಂಡುಕೊಂಡ ಪರಿಹಾರೋಪಾಯಗಳನ್ನು, ಎಳೆ ಎಳೆಯಾಗಿ ವಿವರಿಸಿ ಸದನದ ಗಮನ ಸೆಳೆದರು.

ಸದನದಲ್ಲಿ ಈ ತಿದ್ದುಪಡಿಯ ಕುರಿತು ಎತ್ತಿದ ಹಲವಾರು ಪ್ರಶ್ನೆಗಳಿಗೆ ಸಮಂಜಸವಾಗಿ ಉತ್ತರಿಸಿದ ಸಚಿವರು, ಇಂತಹ ಕಾನೂನು ತಿದ್ದುಪಡಿಗಳಿಗೆ ನೆರೆಯ ತಮಿಳುನಾಡು ಹಾಗೂ ಕೇರಳ ರಾಜ್ಯಗಳು ಪ್ರಯತ್ನಿಸಿದ್ದರೂ, ನ್ಯಾಯಾಲಯಗಳಲ್ಲಿ ಅದಕ್ಕೆ ಇನ್ನೂ ಮನ್ನಣೆ ಸಿಕ್ಕಿಲ್ಲ. ಇದರ ಎಲ್ಲಾ ಸಾಧಕ ಬಾಧಕಗಳನ್ನು ಕೂಲಂಕುಶವಾಗಿ ಪರಮಾರ್ಶೆ ನಡೆಸಿಯೇ ಈ ಕಾನೂನನ್ನು ಸದನದ ಮುಂದೆ ತರಲಾಗಿದೆ. ಇದಕ್ಕೆ ಎದುರಾಗುವ ಯಾವುದೇ ಕಾನೂನು ಸಮಸ್ಯೆಗೆ ಸಮರ್ಥವಾಗಿ ನ್ಯಾಯಾಲಗಳಲ್ಲಿ ಉತ್ತರ ನೀಡಲಾಗುವುದು ಎಂದು ಸಚಿವರು ತಿಳಿಸುವ ಮೂಲಕ ಈ ಐತಿಹಾಸಿಕ ತಿದ್ದುಪಡಿ ಮಸೂದೆಗೆ ಎರಡೂ ಸದನದಲ್ಲಿ ಬೆಂಬಲವನ್ನು ಪಡೆಯುವಲ್ಲಿ ಸಫಲರಾದರು.

ಈ ರೀತಿಯ ಹಣ ತೊಡಗಿಸಿ ಆಡುವ ಎಲ್ಲ ಆನ್‌ಲೈನ್ ಬೆಟ್ಟಿಂಗ್ ವ್ಯವಹಾರಕ್ಕೆ ನಿಷೇಧ ಮಾಡುವುದರಿಂದ ಲಕ್ಷಾಂತರ ಕುಟುಂಬಗಳನ್ನು ಆರ್ಥಿಕ ನಷ್ಟದಿಂದ ಪಾರು ಮಾಡಬಹುದು ಎನ್ನುವುದು ಸಚಿವರ ಅಭಿಪ್ರಾಯವಾಗಿತ್ತು. ಪ್ರಸ್ತುತ ಇದ್ದ ಕರ್ನಾಟಕ ಪೊಲೀಸ್ ಆಕ್ಟ್ 1963 ನಿಂದ ಪೊಲೀಸರಿಗೆ ಎಲ್ಲ ರೀತಿಯ ಗ್ಯಾಂಬಲಿಂಗ್ ವ್ಯವಹಾರವನ್ನು ನಿಯಂತ್ರಿಸಲು ಅತ್ಯಂತ ಕಷ್ಟವಾಗಿತ್ತು. ಏಕೆಂದರೆ, ಪೊಲೀಸರು ತಮಗೆ ದೊರೆತ ಮಾಹಿತಿ ಮೇರೆಗೆ ಗ್ಯಾಂಬಲಿಂಗ್ ನಡೆಯುತ್ತಿದ್ದ ಸ್ಥಳಗಳಿಗೆ ಹೋಗುವುದಕ್ಕೆ ಪೂರ್ವಭಾವಿಯಾಗಿ, ಸಂಬಂಧಪಟ್ಟ ಮ್ಯಾಜಿಸ್ಟ್ರೇಟ್‌ರವರಿಂದ ಪೂರ್ವಾನುಮತಿ ಪಡೆದು, ದಾಳಿ ಮಾಡಬೇಕಾಗುತ್ತಿತ್ತು.

ಸಮಯದ ಅಭಾವ ಹಾಗೂ ಇನ್ನಿತರ ತಾಂತ್ರಿಕ ಸಮಸ್ಯೆಗಳಿಂದಾಗಿ ಬೆಟ್ಟಿಂಗ್ ಅಥವಾ ಜೂಜು ವ್ಯವಹಾರಕ್ಕೆ ನಿಯಂತ್ರಣ ಹೇರಲು ಪೊಲೀಸರು ಹರಸಾಹಸ ಮಾಡಬೇಕಾಗಿತ್ತು, ಹಾಗೂ ಅದೊಂದು ಜಾಮೀನು (Bail) ಅಪರಾಧವಾದ್ದರಿಂದ ಸಾಮಾಜಿಕ ಪಿಡುಗಾಗಿ ಬೆಳೆದಿದ್ದ ಆನ್‌ಲೈನ್ ಬೆಟ್ಟಿಂಗ್ ವ್ಯವಹಾರವನ್ನು ಸಂಪೂರ್ಣವಾಗಿ ನಿವಾರಿಸಲು ಆಗುತ್ತಿರಲಿಲ್ಲ ಎಂದು ಸಚಿವರು ಸದನದ ಗಮನಕ್ಕೆ ತಂದಿದ್ದರು.

ಹೊಸ ಮಸೂದೆಯ ಪ್ರಕಾರ, ಯಾವುದೇ ರೀತಿಯ ಆನ್‌ಲೈನ್ ಬೆಟ್ಟಿಂಗ್ ವ್ಯವಹಾರದಲ್ಲಿ ತೊಡಗಿಸಿಕೊಳ್ಳುವವರು ಅಥವಾ ಭಾಗಿಯಾಗುವವರನ್ನು ಪೊಲೀಸರು ತಕ್ಷಣವೇ ಬಂಧಿಸಿ, ನ್ಯಾಯಾಲಯಕ್ಕೆ ಹಾಜರು ಪಡಿಸಬಹುದು. ಅಲ್ಲದೆ ಆನ್‌ಲೈನ್ ಬೆಟ್ಟಿಂಗ್ ದಂಧೆಯು ಜಾಮೀನುರಹಿತ (Non-Bailable) ಅಪರಾಧವೆಂದು ಪರಿಗಣಿತವಾಗಿರುವುದರಿಂದ ಕಠಿಣ ಶಿಕ್ಷೆಗೂ ಗುರಿಯಾಗುತ್ತಾರೆ.

ಕರ್ನಾಟಕ ವಿಧಾನ ಮಂಡಲದ ಎರಡೂ ಸದನಗಳಲ್ಲಿ, ಯಾವುದೇ ವಿರೋಧವಿಲ್ಲದೆ ಪಾಸಾದ ತಿದ್ದುಪಡಿ ವಿಧೇಯಕದಿಂದ ಈಗ ರಾಜ್ಯದಲ್ಲಿ ಎಲ್ಲ ರೀತಿಯ ಅಂದರೆ ಚಾನ್ಸ್ ಮತ್ತು ಸ್ಕಿಲ್ ಗೇಮ್‌ಗಳಲ್ಲಿ ಸಾರ್ವಜನಿಕರು ಹಣ ಅಥವಾ ಇನ್ನಿತರೆ ರೀತಿಯ ಮೂಲಕ ಬೆಟ್ಟಿಂಗ್ ವ್ಯವಹಾರ ಮಾಡುವಂತಿಲ್ಲ.

ಇದರಿಂದಾಗಿ ರಾಜ್ಯದಲ್ಲಿ ಎಲ್ಲ ರೀತಿಯ ಬೆಟ್ಟಿಂಗ್ ವ್ಯವಹಾರಗಳಿಗೆ ಬ್ರೇಕ್ ಬಿದಿದ್ದು, ಸಾವಿರಾರು ಕುಟುಂಬಗಳು, ಹಣ ಕಳೆದುಕೊಳ್ಳುವುದು ಅಥವಾ ಮೋಸ ಹೋಗುವುದು ತಪ್ಪಲಿದೆ ಎಂದರೆ ಅತಿಶಯೋಕ್ತಿಯಲ್ಲ.

ಪ್ರಸ್ತುತ ಆನ್‌ಲೈನ್ ಬೆಟ್ಟಿಂಗ್ ನಿಷೇಧ ತಿದ್ದುಪಡಿಯ ಕಾನೂನನ್ನು ಪ್ರಶ್ನಿಸಿ ಹಲವಾರು ಸಂಸ್ಥೆಗಳು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿವೆ. ಆದರೆ ಈ ತಿದ್ದುಪಡಿ ಕಾನೂನಿಗೆ ತಡೆಯಾಜ್ಞೆ ನೀಡಿ ಎಂಬ ಬೇಡಿಕೆಗೆ ಪುರಸ್ಕಾರ ಸಿಕ್ಕಿಲ್ಲ ಎಂಬುದು ಗಮನಾರ್ಹವಾದುದು.



Downloaded From: www.kpscvaani.com



# ಸಂಶೋಧನೆ ಮತ್ತು ಅಭಿವೃದ್ಧಿಯ ನಾಯಕತ್ವ ಸ್ಥಾನದಲ್ಲಿ ಕರ್ನಾಟಕ ಆರ್ಥಿಕ, ಸಾಮಾಜಿಕ ವಿಕಾಸಕ್ಕೆ ಆರ್ ಅಂಡ್ ಡಿ ನೀತಿಯು ದಿಕ್ಸೂಚಿ.

## ಆರ್ ಅಂಡ್ ಡಿ ನೀತಿ ಕಾರ್ಯಪಡೆಯ ಅಧ್ಯಕ್ಷರಾದ ಡಾ. ಅಶೋಕ ಶೆಟ್ಟರ್ ಅವರೊಂದಿಗೆ ನಡೆಸಿದ ಮಾತುಮಂಥನ

ಮಂಜುನಾಥ ಡಿ. ಡೊಳ್ಳಿನ

ಯಾವುದೇ ಉತ್ಪಾದನಾ ಕ್ಷೇತ್ರಗಳು ಜಡಗೊಂಡರೆ ನಿಂತ ನೀರಾಗಿ ಬಿಡುತ್ತವೆ. ಜ್ಞಾನಾಧಾರಿತ ಆರ್ಥಿಕತೆಯ ಪ್ರಗತಿ ಸಾಧಿಸಲು ಹೊಸ ಹೊಸ ಆವಿಷ್ಕಾರಗಳು ನಿರಂತರವಾಗಿರಬೇಕು. ಅವು ಸದಾ ಚಲನಶೀಲವಾಗಿರಬೇಕು. ಆಗ ಆರ್ಥಿಕ ಹರಿವು ಏರುಗತಿಯಲ್ಲಿರುವ ಜೊತೆಗೆ ಆರೋಗ್ಯ, ಪೌಷ್ಟಿಕತೆಯಂತಹ ಸಾಮಾಜಿಕ ಆಯಾಮಗಳೂ ಕೂಡ ಸುಸ್ಥಿರವಾಗಿರುತ್ತವೆ. ಉದ್ಯಮಶೀಲತೆ ಎಂಬುದಕ್ಕೆ ಒಂದು ಸೀಮಿತ ಚೌಕಟ್ಟಿಲ್ಲ, ಅದರ ಸಾಧ್ಯತೆಗಳು ಮತ್ತು ಅವಕಾಶಗಳು ಅಪಾರ. ಸಂಶೋಧನೆಗಳು ಅಭಿವೃದ್ಧಿಯ ದಿಕ್ಸೂಚಿಯಾಗಬೇಕು.

ವಿಶ್ವವಿದ್ಯಾಲಯದ ಪ್ರಯೋಗಾಲಯಗಳಿಂದ ನೇರವಾಗಿ ಜನಸಾಮಾನ್ಯರ ಕೈಗೆ ಅವು ತಲುಪಬೇಕು. ಉನ್ನತ ಶಿಕ್ಷಣದ ಸಂಶೋಧನಾ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಕೈಗಾರಿಕೆಗಳು ಹಾಗೂ ಸರ್ಕಾರದ ನಡುವೆ ಸಮನ್ವಯ ಸಾಧಿಸಿ, ಸಂಶೋಧನೆ ಮತ್ತು ಆವಿಷ್ಕಾರಗಳ ಲಾಭವನ್ನು ಜನತೆಗೆ ತಲುಪಿಸುವ ಗುರಿಯೊಂದಿಗೆ, ಕೃಷಿ, ಸಾರಿಗೆ, ನಗರಾಭಿವೃದ್ಧಿ, ಆರೋಗ್ಯ ಮತ್ತಿತರ ಕ್ಷೇತ್ರಗಳಲ್ಲಿ ಗುಣಾತ್ಮಕ ಬದಲಾವಣೆ ತರುವ ಆಶಯದಿಂದ ಕರ್ನಾಟಕ ಸರ್ಕಾರ ಇದೇ ಮೊದಲ ಬಾರಿಗೆ ಸಂಶೋಧನೆ ಮತ್ತು ಅಭಿವೃದ್ಧಿ ( Research And Development Policy Task Force) ನೀತಿ ಕಾರ್ಯಪಡೆ ರಚಿಸಿದೆ.

ಹುಬ್ಬಳ್ಳಿಯ ಹೆಸರಾಂತ ಶಿಕ್ಷಣ ತಜ್ಞ, ಕೆಎಲ್ಇ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಡಾ. ಅಶೋಕ ಶೆಟ್ಟರ್ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಿದೆ. ವಿವಿಧ ಕ್ಷೇತ್ರಗಳ 10 ಜನ ತಜ್ಞರು ಸಮಿತಿಯ ಸದಸ್ಯರಾಗಿದ್ದಾರೆ.

ವಾರ್ತಾ ಜನಪದ ಮಾಸಪತ್ರಿಕೆಗಾಗಿ ಆರ್ ಅಂಡ್ ಡಿ ಟಾಸ್ಕ್‌ಫೋರ್ಸ್‌ನ ಅಧ್ಯಕ್ಷರಾದ ಡಾ.ಅಶೋಕ ಶೆಟ್ಟರ್ ಅವರನ್ನು ಧಾರವಾಡ ಜಿಲ್ಲಾ ವಾರ್ತಾಧಿಕಾರಿಗಳಾದ ಮಂಜುನಾಥ ಡಿ. ಡೊಳ್ಳಿನ ಅವರು ಸಂದರ್ಶನ ನಡೆಸಿದ್ದಾರೆ....

**ದೇಶದ ರಾಜ್ಯ ಸರ್ಕಾರಗಳಲ್ಲಿ ಆರ್ ಅಂಡ್ ಡಿ ಕಾರ್ಯಪಡೆ ರಚಿಸಿರುವ ಮೊದಲ ರಾಜ್ಯ ಕರ್ನಾಟಕ ಎಂದು ಹೇಳಬಹುದು, ಇದರ ಮಹತ್ವ ಏನು?**

ಸಂಶೋಧನೆ ಮತ್ತು ಅಭಿವೃದ್ಧಿಯಾಗಲಿ (ರಿಸರ್ಚ್ ಅಂಡ್ ಡೆವಲಪ್‌ಮೆಂಟ್), ವಿಜ್ಞಾನ, ತಂತ್ರಜ್ಞಾನ, ಆವಿಷ್ಕಾರ ನೀತಿಗಳನ್ನಾಗಲಿ ಸಾಮಾನ್ಯವಾಗಿ ಕೇಂದ್ರ ಸರ್ಕಾರ ರೂಪಿಸುತ್ತದೆ. ಭಾರತ ಸರ್ಕಾರವು 1958, 1983, 2003 ಹಾಗೂ 2013ರಲ್ಲಿ ಒಟ್ಟು ನಾಲ್ಕು ಸಂಶೋಧನೆ ಮತ್ತು ಅಭಿವೃದ್ಧಿ ನೀತಿ ರೂಪಿಸಿ ಜಾರಿಗೊಳಿಸಿದೆ. 2020 ರಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಅವಿಷ್ಕಾರ ನೀತಿ ಹೊರಬಂದಿದೆ. ರಾಜ್ಯ ಸರ್ಕಾರಗಳು ಕೈಗಾರಿಕಾ ನೀತಿ, ಕೃಷಿ ನೀತಿ ಹೀಗೆ ವಲಯವಾರು ವಿವಿಧ ನೀತಿ ನಿರೂಪಣೆಗಳನ್ನು ಪ್ರತ್ಯೇಕವಾಗಿ ರೂಪಿಸಿ, ಜಾರಿ ಮಾಡಿವೆ. ಆದರೆ ಸಮಗ್ರವಾಗಿ ಸಂಶೋಧನೆ ಮತ್ತು ಅಭಿವೃದ್ಧಿ ನೀತಿ ಕಾರ್ಯಪಡೆ ರಚಿಸಿದ್ದು ಇದೇ ಮೊದಲು ಎನ್ನಬಹುದು. ಜ್ಞಾನಾಧಾರಿತ ಆವಿಷ್ಕಾರಗಳ ಮೂಲಕ ಆರ್ಥಿಕ ಪ್ರಗತಿ ಸಾಧಿಸುವುದು ಇದರ ಆಶಯವಾಗಿದೆ.

**ಕಾರ್ಯಪಡೆಯ ಪ್ರಧಾನ ಗುರಿ ಏನು?**

ಜ್ಞಾನಾಧರಿತ ಉದ್ಯಮಶೀಲತೆ ಮೂಲಕ ಆರ್ಥಿಕ ಪ್ರಗತಿ ಸಾಧಿಸಲು






Downloaded From: www.kpscvaani.com



ಆವಿಷ್ಕಾರಗಳು ಅಗತ್ಯ. ಸಂಶೋಧನೆ ಮತ್ತು ಅಭಿವೃದ್ಧಿ ಮೂಲಕ ಇವು ಸಾಗಬೇಕು. ಆರ್ಥಿಕತೆ ಮಾತ್ರವಲ್ಲದೇ, ಜನಜೀವನಮಟ್ಟ, ಆರೋಗ್ಯ ಕ್ಷೇತ್ರದಲ್ಲಿ ಸುಧಾರಣೆ ತರಬಹುದು. ಕಳೆದ ಅನೇಕ ದಶಕಗಳಿಂದ ಈ ಚರ್ಚೆ ನಡೆಯುತ್ತಿದೆ. ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಬೆಳವಣಿಗೆಯ ಇಂಜಿನ್ ಆಗಿಸಿಕೊಂಡು, 21 ನೇ ಶತಮಾನದಲ್ಲಿ ಭಾರತ ಪ್ರಗತಿಯ ದಿಶೆಯಲ್ಲಿ ದಾಪುಗಾಲು ಹಾಕಬೇಕು. ಇದಕ್ಕಾಗಿ ಕಾರ್ಯಪಡೆಯ ನೀತಿಯು ಪ್ರಧಾನವಾಗಿ ಬೆಳಕು ಚೆಲ್ಲಲಿದೆ. ಈಗಾಗಲೇ ಬೆಂಗಳೂರು ಜಾಗತಿಕವಾಗಿ ಸಂಶೋಧನೆ ಮತ್ತು ಅಭಿವೃದ್ಧಿ ನಕ್ಷೆಯಲ್ಲಿ ಸ್ಥಾನ ಪಡೆದಿದೆ. ಸುಮಾರು 480 ಕ್ಕೂ ಹೆಚ್ಚು ಬಹು ರಾಷ್ಟ್ರೀಯ ಕಂಪನಿಗಳ ಆರ್ ಅಂಡ್ ಡಿ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಕರ್ನಾಟಕ ನಾಯಕತ್ವ ಸ್ಥಾನದಲ್ಲಿದೆ. ಸರ್ಕಾರದ ಈ ಕಾರ್ಯಪಡೆ ರಚನೆಯಿಂದ ಸಂಶೋಧನೆಯ ಹಬ್ ಆಗಿ ರಾಜ್ಯ ಮುನ್ನಡೆಯಲಿದೆ.

**ಸದ್ಯ ಬೆಂಗಳೂರು ಕೇಂದ್ರಿತವಾಗಿರುವ ಉದ್ಯಮಗಳ ವಿಕೇಂದ್ರೀಕರಣ ಸಾಧ್ಯವೇ, ಕಾರ್ಯಪಡೆಯ ನೀತಿ ಹೇಗಿರುತ್ತದೆ?**

ಸಂಶೋಧನೆ ಮತ್ತು ಅಭಿವೃದ್ಧಿಯ ನೀತಿಯ ಮೂಲಕ ರಾಜ್ಯವನ್ನು ಸಮಗ್ರವಾಗಿ ಹಾಗೂ ಸರ್ವತೋಮುಖವಾಗಿ ಅಭಿವೃದ್ಧಿಪಡಿಸುವುದು ಪ್ರಧಾನ ಗುರಿಯಾಗಿದೆ. ಬಿಯಾಂಡ್ ಬೆಂಗಳೂರು ಕಲ್ಪನೆಯಡಿ ರಾಜ್ಯದ ಹಳೆಯ ಮೈಸೂರು, ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಭಾಗಗಳಲ್ಲಿ ಕೂಡಾ ಉದ್ಯಮಶೀಲತೆಯ ಉತ್ತೇಜನಕ್ಕೆ ನೀತಿಯು ಒತ್ತು ನೀಡಲಿದೆ. ಸಂಶೋಧನೆ ಮತ್ತು ಅಭಿವೃದ್ಧಿ ಎಂಬುದು ಕೇವಲ ಮಾಹಿತಿ ತಂತ್ರಜ್ಞಾನ, ಮುಂದುವರೆದ ತಾಂತ್ರಿಕತೆ ಕ್ಷೇತ್ರಗಳಿಗೆ ಮಾತ್ರ ಸೀಮಿತವಲ್ಲ. ಅದು ಬಹು ಆಯಾಮಗಳನ್ನು ಹೊಂದಿದೆ. ಕೃಷಿ, ಆರೋಗ್ಯ, ಆಹಾರ ಉತ್ಪಾದನಾ ಚಟುವಟಿಕೆಗಳನ್ನು ಆಧರಿಸಿದ ಉದ್ಯಮಶೀಲತೆಯ ಮೂಲಕ ರೈತರ ಆರ್ಥಿಕತೆಯನ್ನು ಮೇಲೆತ್ತಲು ಹೊಸ ಮಾರ್ಗಗಳನ್ನು ಸೂಚಿಸಲಿದೆ. ಕೃಷಿಯಲ್ಲಿ ಕೂಲಿ ಕಾರ್ಮಿಕರ ಕೊರತೆ, ಉತ್ಪಾದನೆಯ ಹೆಚ್ಚಳದ ಸಾಧ್ಯತೆಗಳನ್ನು ಮನವರಿಕೆ ಮಾಡಿಕೊಡುವ ಹಾಗೂ ಅದು ಸಾಮಾನ್ಯ ರೈತನಿಗೆ ತಲುಪುವಂತೆ ನೋಡಿಕೊಳ್ಳುವುದು ಮುಖ್ಯ ಉದ್ದೇಶವಾಗಿದೆ.

> **ಈ ಕಾರ್ಯಪಡೆಯು ಸಾರ್ವಜನಿಕ ಮತ್ತು ಖಾಸಗಿ ವಲಯದ ಉತ್ತೇಜನಕ್ಕೆ ಆದ್ಯತೆ ನೀಡಲಿದೆ. ಸಂಶೋಧನೆ ಮತ್ತು ಅಭಿವೃದ್ಧಿ ಕಲ್ಪನೆಯನ್ನು ಶಾಲಾ ಹಂತದಿಂದಲೇ ಆರಂಭಿಸಿ ಕಾಲೇಜು, ವಿಶ್ವವಿದ್ಯಾಲಯಗಳಿಗೆ ಕೊಂಡೊಯ್ಯಲಿದೆ. ಕೃಷಿ, ಆರೋಗ್ಯ ಕ್ಷೇತ್ರದ ಸಮನ್ವಯದೊಂದಿಗೆ ಭವಿಷ್ಯದ ತಂತ್ರಜ್ಞಾನಕ್ಕೆ ಕೊಡುಗೆಗಳನ್ನು ನೀಡಲಿದೆ. ಬೆಂಗಳೂರಿನ ಆಚೆ ಹುಬ್ಬಳ್ಳಿ–ಧಾರವಾಡ, ಕಲಬುರಗಿ, ಮಂಗಳೂರು, ಮೈಸೂರು ಮತ್ತಿತರ ಸ್ಥಳಗಳಲ್ಲಿ ಆರ್ ಅಂಡ್ ಡಿ ಕೇಂದ್ರಗಳನ್ನು ಸ್ಥಾಪಿಸಲಿದೆ. ಇಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ಕಾರ್ಯಪಡೆಯ ಚಟುವಟಿಕೆಗಳನ್ನು ನಿರ್ವಹಿಸಲಿದೆ.**



**ಸಂಶೋಧನೆ, ಅವಿಷ್ಕಾರಗಳು ಈವರೆಗೆ ವಿಶ್ವವಿದ್ಯಾಲಯಗಳು, ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಮಾತ್ರ ಸೀಮಿತವಾಗಿವೆ. ಅವುಗಳ ಅಂತಿಮ ಉದ್ದೇಶ, ಗುರಿ ತಲುಪಲು ಇರುವ ಅಡಚಣೆಗಳೇನು?**

ಸಂಶೋಧನಾ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಉನ್ನತ ಶಿಕ್ಷಣ ಅಕಾಡೆಮಿಗಳು, ಕೈಗಾರಿಕೆಗಳು, ಕಾರ್ಪೋರೇಟ್ ಸಂಸ್ಥೆಗಳು ಹಾಗೂ ಸರ್ಕಾರ ಈ ಎಲ್ಲವೂ ಸಮನ್ವಯಗೊಂಡರೆ ಮಾತ್ರ ಸಮುದಾಯವನ್ನು ಸಾಮೂಹಿಕವಾಗಿ ದೊಡ್ಡ ಪ್ರಮಾಣದಲ್ಲಿ ತಲುಪಲು ಸಾಧ್ಯ. ಎಲ್ಲಾ ಸಂಶೋಧನೆಗಳು



Downloaded From: www.kpscvaani.com

ಸಾಮಾಜಿಕತೆಯ ಜೊತೆಗೆ ಸಂಪರ್ಕ ಹೊಂದಿಯೇ ಇರುತ್ತವೆ. ಕೃಷಿ, ಸಾರಿಗೆ, ನಗರಾಭಿವೃದ್ಧಿ, ಆರೋಗ್ಯ ಮೊದಲಾದ ಕ್ಷೇತ್ರಗಳಲ್ಲಿ ನೀತಿಯು ಪ್ರತಿಫಲನವಾಗಲಿದೆ. ಪ್ರಾದೇಶಿಕವಾಗಿ ವರ್ತಮಾನದಲ್ಲಿ ಎದುರಾಗಿರುವ ಸವಾಲುಗಳನ್ನು ತೆಗೆದುಕೊಂಡು ಪರಿಹಾರ ಒದಗಿಸಲು ಈ ಕಾರ್ಯಪಡೆಯು ಗಮನ ನೀಡಲಿದೆ.

**ಉದ್ಯಮಶೀಲತೆ ಬೆಳವಣಿಗೆಗೆ ಹೆಚ್ಚು ಅವಕಾಶಗಳನ್ನು ಯಾವ ಕ್ಷೇತ್ರದಲ್ಲಿ ಗುರುತಿಸಿರುವಿರಿ ?**

ಔದ್ಯೋಗಿಕ ರಂಗಕ್ಕೆ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಕೊಡುಗೆ ದೊಡ್ಡ ಪ್ರಮಾಣದಲ್ಲಿದೆ. ಅಂಕಿ ಅಂಶಗಳ ಪ್ರಕಾರ ಹೆಚ್ಚು ಉದ್ಯೋಗ ನೀಡಿರುವುದು ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳೇ ಆಗಿವೆ. ಪ್ರಾದೇಶಿಕವಾಗಿ ಅವು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಅಂತಹ ಘಟಕಗಳಿಗೆ ಸ್ವತ: ಆರ್ ಅಂಡ್ ಡಿ ಸ್ಥಾಪಿಸಿಕೊಳ್ಳಲು ಸಾಮರ್ಥ್ಯ ಇರುವುದಿಲ್ಲ. ಆದರೆ ಅವು ಜಾಗತಿಕವಾಗಿ ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಸ್ಪರ್ಧೆಗೆ ಇಳಿಯಲೇಬೇಕು. ಅವುಗಳನ್ನು ಉತ್ತೇಜಿಸಲು ಅಗತ್ಯವಿರುವ ಹೊಸ ಹೊಸ ತಂತ್ರಜ್ಞಾನ, ಮೆಕ್ಯಾನಿಸಂ ಒದಗಿಸಬೇಕು. ನಮ್ಮ ಕಾರ್ಯಪಡೆಯು ಈ ದಿಸೆಯಲ್ಲಿ ಹೆಚ್ಚು ಒತ್ತು ನೀಡಲಿದೆ.

**ದೇಶದಲ್ಲಿಯೇ ಮೊದಲ ಬಾರಿ ರಾಜ್ಯ ಸರ್ಕಾರ ಒಂದು ಆರ್ ಅಂಡ್ ಡಿ ಕಾರ್ಯಪಡೆಯನ್ನು ಸ್ಥಾಪಿಸಿದೆ. ವಿಶೇಷವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮಹತ್ವಕಾಂಕ್ಷೆಯ ಕಾರ್ಯಕ್ರಮ ಇದಾಗಿರುವುದರಿಂದ ರಾಜ್ಯದ ನಿರೀಕ್ಷೆಗಳು ಏನು?**

ಹೌದು, ಇದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಬಹು ನಿರೀಕ್ಷೆಯ ಕಾರ್ಯಕ್ರಮವಾಗಿದೆ. ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳು ರಾಜ್ಯದಾದ್ಯಂತ ವಿಸ್ತರಿಸಬೇಕು. ಆರ್ಥಿಕ, ಸಾಮಾಜಿಕ ವ್ಯವಸ್ಥೆಯಲ್ಲಿ ಗಮನಾರ್ಹ ಬದಲಾವಣೆಗಳಾಗಬೇಕು. ರಾಜ್ಯವನ್ನು ಜ್ಞಾನಾಧಾರಿತ ಆರ್ಥಿಕತೆ, ಹೊಸ ಪೀಳಿಗೆಯಲ್ಲಿ ಉದ್ಯಮಶೀಲತೆ ಬೆಳೆಸುವ ಜಾಗತಿಕ ಹಬ್ ಆಗಿ ರೂಪಿಸುವುದು ಪ್ರಥಮ ಆದ್ಯತೆಯಾಗಿದೆ.

**ಮುಂಚೂಣಿ ತಂತ್ರಜ್ಞಾನ ಹಾಗೂ ಆದ್ಯತಾ ವಲಯಗಳನ್ನು ಹೇಗೆ ಪ್ರತ್ಯೇಕವಾಗಿ ಗುರುತಿಸುವಿರಿ. ಅವುಗಳು ಪರಸ್ಪರ ಪೂರಕವೇ ?**

ಕೃತಕ ಬುದ್ಧಿಮತ್ತೆ (Artificial intelligence), ಕ್ಲೌಡ್ ಮೊದಲಾದ ರಂಗಗಳು ಮುಂಚೂಣಿ ತಂತ್ರಜ್ಞಾನ ಕ್ಷೇತ್ರದಲ್ಲಿ ಗುರುತಿಸಲಾಗಿದೆ. ಇಲ್ಲಿ ಆರ್ಥಿಕ ವ್ಯವಹಾರ, ಉದ್ಯೋಗ ಸೃಜನೆಗೆ ಅಪಾರ ಅವಕಾಶಗಳಿವೆ. ಇದೇ ವೇಳೆ ಆದ್ಯತಾ ವಲಯದಲ್ಲಿ ಗುರುತಿಸಲಾಗಿರುವ ಕೃಷಿ, ಆಹಾರ, ಪೌಷ್ಠಿಕತೆ ಕ್ಷೇತ್ರಗಳು ಕೂಡ ಬೆಳೆಯಲೇಬೇಕು. ಮುಂಚೂಣಿ ವಲಯದ ಉದ್ಯಮಗಳು ಬೆಳೆಯದೇ ಆದ್ಯತಾ ವಲಯದ ಬಲವರ್ಧನೆ ಸಾಧ್ಯವಿಲ್ಲ. ಇವು ಪರಸ್ಪರ ಪೂರಕವಾಗಿವೆ. ಆರ್ ಅಂಡ್ ಡಿ ಇವುಗಳಿಗೆ ಬೆಂಬಲವಾಗಿ ವ್ಯವಸ್ಥೆಯನ್ನು ರೂಪಿಸುವ ಹೊಣೆಗಾರಿಕೆ ಹೊಂದಿದೆ.

**ಸಂಶೋಧನೆ ಮತ್ತು ಆವಿಷ್ಕಾರಗಳ ಮೂಲಕ ದೇಶವು ತಂತ್ರಜ್ಞಾನದಲ್ಲಿ ಸ್ವಾವಲಂಬಿಯಾಗಿ ಹೊರ ಹೊಮ್ಮಲು ಸಾಧ್ಯವೇ ?**

ಹೌದು, ಪ್ರಧಾನಮಂತ್ರಿಯವರ ಕನಸಿನ ಆತ್ಮ ನಿರ್ಭರ ಭಾರತ ನಿರ್ಮಾಣಕ್ಕೆ ಸಂಶೋಧನೆ ಮತ್ತು ಅಭಿವೃದ್ಧಿಯ ಬೆಳವಣಿಗೆ ಎಲ್ಲಕ್ಕಿಂತ ಮುಖ್ಯವಾಗಿದೆ. ವಿದೇಶಗಳ ತಂತ್ರಜ್ಞಾನ, ಉತ್ಪನ್ನಗಳ ಮೇಲೆ ಅವಲಂಬಿತವಾದರೆ ನಮ್ಮದೇ ಆದ ಜ್ಞಾನ ಕೌಶಲಗಳ ಆವಿಷ್ಕಾರ ಸಾಧ್ಯವಿಲ್ಲ. ಸಂಶೋಧನೆಗಳು ಕೇವಲ ಉನ್ನತ ಸಂಸ್ಥೆಗಳು ಹಾಗೂ ವಿಶ್ವವಿದ್ಯಾಲಯಗಳ






## ಶಿಕ್ಷಣ ಶಿಲ್ಪಿ ಡಾ. ಅಶೋಕ ಶೆಟ್ಟರ್

ಡಾ. ಅಶೋಕ ಶೆಟ್ಟರ್ ಅವರು ಇಂಜನಿಯರಿಂಗ್ ಶಿಕ್ಷಣಕ್ಕೆ ವಿಶಿಷ್ಟ ಕೊಡುಗೆ ನೀಡಿದ ತಜ್ಞರು. ಹುಬ್ಬಳ್ಳಿಯ ಕೆಎಲ್ಇ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ, ಇಂಜಿನಿಯರಿಂಗ್ ಶಿಕ್ಷಣ ಹಾಗೂ ಆಡಳಿತದಲ್ಲಿ 35 ವರ್ಷಗಳ ಅನುಭವ ಹೊಂದಿದವರು. ಹುಬ್ಬಳ್ಳಿಯ ಪ್ರತಿಷ್ಠಿತ ಬಿ.ವಿ.ಭೂಮರಡ್ಡಿ ಇಂಜಿನಿಯರಿಂಗ್ ಕಾಲೇಜಿನ ಭದ್ರ ಅಡಿಪಾಯದ ಮೇಲೆ ಕೆಎಲ್ಇ ತಾಂತ್ರಿಕ ವಿ.ವಿ.ಯನ್ನು ಕಟ್ಟಿ ಮಾದರಿ ಸಂಸ್ಥೆಯಾಗಿ ರೂಪಿಸಿದವರು.

ಇಂಜಿನಿಯರಿಂಗ್ ಪದವೀಧರರು ಕೇವಲ ಕಾರ್ಪೋರೇಟ್ ಸಂಸ್ಥೆಗಳ ನೌಕರಿಗೆ ಸೀಮಿತರಾಗದೇ, ಸ್ವಂತ ಉದ್ಯಮ ಪ್ರಾರಂಭಿಸಲು ಉದ್ಯಮಶೀಲ ಮನೋಭಾವ ಬೆಳೆಸಿದ್ದಾರೆ. ಹಾಗಾಗಿ ಕರ್ನಾಟಕ ಸರ್ಕಾರವು ಪ್ರಸ್ತುತ ಸಂಶೋಧನೆ ಮತ್ತು ಅಭಿವೃದ್ಧಿ ನೀತಿ ಕಾರ್ಯಪಡೆಯ ಅಧ್ಯಕ್ಷರನ್ನಾಗಿ ಅವರನ್ನು ನೇಮಿಸಿ, ಕೃಷಿ ಮತ್ತು ಆಹಾರ ಉತ್ಪಾದನೆಯೂ ಸೇರಿ ಉದ್ಯಮರಂಗದಲ್ಲಿ ಆರ್ಥಿಕ, ಸಾಮಾಜಿಕ ವಿಕಾಸ ತರಲು ಹೊಸ ನೀತಿ ರೂಪಿಸುವ ಜವಾಬ್ದಾರಿ ವಹಿಸಿದೆ.



Downloaded From: www.kpscvaani.com

## ಸಂಶೋಧನೆ ಮತ್ತು ಅಭಿವೃದ್ಧಿ ನೀತಿ ಕಾರ್ಯಪಡೆ

**ಅಧ್ಯಕ್ಷರು**
**ಡಾ.ಅಶೋಕ ಶೆಟ್ಟರ್**
ಕುಲಪತಿಗಳು, ಕೆ.ಎಲ್.ಇ.ತಾಂತ್ರಿಕ ವಿಶ್ವವಿದ್ಯಾಲಯ
ಹುಬ್ಬಳ್ಳಿ

* * *

**ಸದಸ್ಯರು**
**ಪ್ರೊ. ರಾಜೇಶ್ ಸುಂದರೇಶನ್**
ಡೀನ್, ಇಲೆಕ್ಟ್ರಿಕಲ್, ಇಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಸೈನ್ಸ್ ವಿಭಾಗ, ಐಐಎಸ್‌ಸಿ, ಬೆಂಗಳೂರು

**ಶ್ರೀವರ್ಧಿನಿ ಕೆ ಝಾ**
ಸಹ ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು,
ಉದ್ಯಮಶೀಲತೆ ವಿಭಾಗ, ಐಐಎಂ, ಬೆಂಗಳೂರು.

**ಪ್ರೊ. ಎಸ್.ಎಂ.ಶಿವಪ್ರಸಾದ**
ಪ್ರಾಧ್ಯಾಪಕರು, ಜೆಎನ್‌ಸಿಎಎಸ್‌ಆರ್
ನಿರ್ದೇಶಕರು, ಕರ್ನಾಟಕ ಉನ್ನತ ಶಿಕ್ಷಣ ಅಕಾಡೆಮಿ
ಧಾರವಾಡ

**ಡಾ.ನಂದಿನಿ ಪ್ರಸಾದ ಶೆಟ್ಟಿ**
ಪ್ರಧಾನ ವಿಜ್ಞಾನಿ, ಸಿಎಫ್‌ಟಿಆರ್‌ಐ, ಮೈಸೂರು

**ಮಧುಸೂಧನ ವಿ.ಅತ್ರೆ**
ಸಂದರ್ಶಕ ವಿಜ್ಞಾನಿ
ಸೆಂಟರ್ ಫಾರ್ ನ್ಯಾನೊ ಸೈನ್ಸ್ ಆ್ಯಂಡ್ ಇಂಜಿನಿಯರಿಂಗ್, ಐಐಎಸ್‌ಸಿ, ಬೆಂಗಳೂರು

**ಬಾಲಾಜಿ ಶ್ರೀನಿವಾಸ ಹೊಳೂರು**
ಉಪಾಧ್ಯಕ್ಷರು ಮತ್ತು ಮುಖ್ಯಸ್ಥರು,
ಮಲ್ಟಿ ಮೀಡಿಯಾ ವಿಭಾಗ
ಸ್ಯಾಮ್‌ಸಂಗ್ ಆರ್ ಅಂಡ್ ಡಿ, ಬೆಂಗಳೂರು

**ಅನಂತ ಆರ್.ಕೊಪ್ಪರ್**
ಚೇರ್‌ಮನ್ ಮತ್ತು ಸಿಇಓ
ಕೆಟಿಡಬ್ಲುಒ ಟೆಕ್ನಾಲಜಿ ಸೊಲ್ಯೂಷನ್ಸ್, ಬೆಂಗಳೂರು

**ಪ್ರೊ.ಮೀನಾಕ್ಷಿ ರಾಜೀವ್**
ಐಸೆಕ್, ಬೆಂಗಳೂರು

* * *

**ಸದಸ್ಯ ಕಾರ್ಯದರ್ಶಿ**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಮೋಷನ್ ಸೊಸೈಟಿ, ಬೆಂಗಳೂರು

ಪ್ರಯೋಗಾಲಯಗಳಲ್ಲಿಯೇ ಆಗಬೇಕು ಎಂದೇನಿಲ್ಲ. ಎಷ್ಟೋ ರೈತರು ತಮ್ಮದೇ ಆದ ಅನುಭವದ ಮೂಲಕ ಉತ್ತಮ ಕೃಷಿ ತಳಿಯೊಂದನ್ನು ಕಂಡು ಹಿಡಿದಿರುತ್ತಾರೆ. ಸಣ್ಣ ಕೈಗಾರಿಕೆಗಳು ಹೊಸ ಸಾಧ್ಯತೆಗಳನ್ನು ಶೋಧಿಸಿರುತ್ತವೆ. ಅಂತಹ ಜ್ಞಾನವನ್ನು ಗುರುತಿಸಿ ಹೆಚ್ಚು ನಿಖರತೆ ಹಾಗೂ ಮಾರುಕಟ್ಟೆ ಪ್ರಣೀತವಾಗಿ ಅಭಿವೃದ್ಧಿಪಡಿಸಲು ಪರೀಕ್ಷೆ, ಪ್ರಯೋಗದಂತಹ ಸೌಲಭ್ಯಗಳನ್ನು ಸಾಮಾನ್ಯ ಜನರಿಗೆ ವಿಸ್ತರಿಸುವುದು ಪ್ರಮುಖ ಗುರಿಯಾಗಿದೆ. ನಮ್ಮ ಸುತ್ತಲಿರುವ ವ್ಯಕ್ತಿಗಳನ್ನು ಒಳಗೊಂಡು ಅಭಿವೃದ್ಧಿ ಸಾಗಬೇಕು. ಹಾಗಾದಾಗ ಮಾತ್ರ ಸರ್ವಾಂಗೀಣ ಪ್ರಗತಿ ಸಾಧ್ಯ.

**ಆರ್ ಅಂಡ್ ಡಿ ಕಾರ್ಯಪಡೆ ಇದುವರೆಗೆ ಎಷ್ಟು ಬಾರಿ ಸಭೆ, ಚರ್ಚೆ ನಡೆಸಿದೆ. ನೀತಿಯ ಮೊದಲ ಕರಡು ಪ್ರತಿ ಸರ್ಕಾರಕ್ಕೆ ಯಾವಾಗ ಸಲ್ಲಿಕೆಯಾಗಬಹುದು ?**

ಭಾರತೀಯ ವಿಜ್ಞಾನ ಸಂಸ್ಥೆ, ಐಐಎಂ, ಉನ್ನತ ಶಿಕ್ಷಣ ಅಕಾಡೆಮಿ, ಸಿ.ಎಫ್.ಟಿ.ಆರ್.ಐ., ಸ್ಯಾಮ್‌ಸಂಗ್, ಐಸೆಕ್, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಮೋಶನ್ ಸೊಸೈಟಿ ಸೇರಿದಂತೆ ನಾಡಿನ ಪ್ರಮುಖ ಸಂಸ್ಥೆಗಳ ತಜ್ಞರನ್ನು ಒಳಗೊಂಡ ಕಾರ್ಯಪಡೆ ಕಳೆದ ನವೆಂಬರ್ ತಿಂಗಳಲ್ಲಿ ರಚನೆಯಾಗಿದೆ. ಈ ಅವಧಿಯಲ್ಲಿ ಈಗಾಗಲೇ ಮೂರು ಬಾರಿ ಸಭೆ ಸೇರಿ ಚರ್ಚಿಸಲಾಗಿದೆ. ಎಲ್ಲಾ ಸದಸ್ಯರು ಬಹಳ ಆಸಕ್ತಿ ಮತ್ತು ಉತ್ಸುಕತೆ ಹೊಂದಿದ್ದಾರೆ. ಸಾಕಷ್ಟು ಕಾರ್ಯಗಳ ಒತ್ತಡದ ನಡುವೆಯೂ ಸಿದ್ಧತೆ ಮಾಡಿಕೊಂಡು ತಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ. ಸಾಂಸ್ಥಿಕ ಫ್ರೇಮ್ ವರ್ಕ್ ಮಾಡಿಕೊಳ್ಳಲಾಗುತ್ತಿದೆ. ನೀತಿಯ ಕರಡು ರಚನೆಗೆ ವೇದಿಕೆ ಸಿದ್ಧವಾಗಿದೆ. ಕನಿಷ್ಠ ಎರಡು ತಿಂಗಳ ಕಾಲಾವಕಾಶ ಬೇಕಾಗುತ್ತದೆ. ಬಜೆಟ್ ಮಂಡನೆಯ ಒಳಗಾಗಿ ವಿವರವಾದ ನೀತಿಯ ಕರಡು ಪ್ರತಿ ಸಲ್ಲಿಸುವ ಗುರಿ ಹೊಂದಲಾಗಿದೆ.

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು, ವಿಶ್ವವಿದ್ಯಾಲಯ ಮತ್ತು ಸಂಸ್ಥೆಗಳ ನಡುವೆ ಸಮನ್ವಯ ತರಲು ಆರ್ ಅಂಡ್ ಡಿ ನೀತಿ ರೂಪಿಸಲು ಬಯಸಿದೆ. ಮಾಹಿತಿ ತಂತ್ರಜ್ಞಾನ, ಇಲೆಕ್ಟ್ರಾನಿಕ್, ಇಲೆಕ್ಟ್ರಿಕಲ್ ಕ್ಷೇತ್ರದಲ್ಲಿ ಆಗುತ್ತಿರುವ ಬೆಳವಣಿಗೆಗಳು ಕೃಷಿ, ಮೀನುಗಾರಿಕೆ, ತೋಟಗಾರಿಕೆ ಇಲಾಖೆಗಳನ್ನು ತಲುಪುತ್ತಿಲ್ಲ. ಇವುಗಳ ನಡುವೆ ಸಮನ್ವಯತೆ ತರಬೇಕಾಗಿದೆ. ಈ ಸಮಸ್ಯೆಗೆ ಪರಿಹಾರ ಒದಗಿಸುವುದು ಆರ್ ಅಂಡ್ ಡಿ ನೀತಿ ಕಾರ್ಯಪಡೆಯ ಮುಂದಿರುವ ದೊಡ್ಡ ಸವಾಲಾಗಿದೆ. ಸಮಾಜದಲ್ಲಿ ಈಗ ಇರುವ ಮನಸ್ಥಿತಿಯನ್ನು ಸಂಶೋಧನೆ, ಆವಿಷ್ಕಾರದ ಮನಸ್ಥಿತಿಗೆ ಬದಲಾಯಿಸಬೇಕು. ಸಂಶೋಧನೆ ಮತ್ತು ಅಭಿವೃದ್ಧಿ ನಮ್ಮ ಬದುಕಿನ ಮುಖ್ಯ ಭಾಗವಾಗಬೇಕು. ಮುಂದಿನ ಪೀಳಿಗೆಗೆ ಭದ್ರವಾದ ಮತ್ತು ಗಟ್ಟಿಯಾದ ಆವಿಷ್ಕಾರಗಳನ್ನು ನಾವು ಒದಗಿಸಬೇಕು. ಶಾಲಾ ಹಂತದಿಂದಲೇ ಮಕ್ಕಳಲ್ಲಿ ಈ ಮನೋಭಾವ ರೂಪಿಸುವುದಕ್ಕೆ ಆರ್ ಅಂಡ್ ಡಿ ನೀತಿ ಸ್ಪಷ್ಟ ಮಾರ್ಗದರ್ಶಿಯಾಗಲಿದೆ.



Downloaded From: www.kpscvaani.com



# ಕರ್ನಾಟಕ ನಮ್ಮ ರಾಷ್ಟ್ರ ಧ್ವಜದ ತವರು...

ಡಿ. ಪಿ. ಮುರಳೀಧರ್

ಕರ್ನಾಟಕ ಎಂದರೆ ಹಲವು ವಿಷಯಗಳಿಗೆ ಹೆಸರು ವಾಸಿ ! ಕರ್ನಾಟಕ ಎಂದರೆ ಹಲವು ವಿಚಾರಗಳಿಗೆ ಖ್ಯಾತಿ ! ಇಷ್ಟು ಮಾತ್ರವಲ್ಲ ! ಕರ್ನಾಟಕ ಎಂದರೆ ಕೆಲವು ಉತ್ಪನ್ನಗಳಿಗೆ ವಿಶ್ವ ವಿಖ್ಯಾತಿ ! ಇದನ್ನು ತಾವು ಬಲ್ಲಿರಾ ?

ನವದೆಹಲಿಯಲ್ಲಿ ರಾಷ್ಟ್ರಪತಿ ಭವನದ ಮೇಲೆ ಅಭಿಮಾನ ಪೂರಕವಾಗಿ ಹಾರಾಡುತ್ತಿರುವ ನಮ್ಮ ರಾಷ್ಟ್ರ ಧ್ವಜ ! ಸಂಸತ್ತಿನ ಮೇಲೆ ಹೆಮ್ಮೆಯಿಂದ ಬೀಗುತ್ತಿರುವ ಕೇಸರಿ, ಬಿಳಿ ಮತ್ತು ಹಸಿರು ಹಾಗೂ ಬಿಳಿಯ ನಡುವೆ ನೀಲಿ ಚಕ್ರವಿರುವ ನಮ್ಮ ದೇಶದ ಧ್ವಜ ! ರಕ್ಷಣಾ ಮಂತ್ರಾಲಯದ ಭೂಸೇನೆ, ವಾಯುಸೇನೆ ಹಾಗೂ ನೌಕಾದಳದ ಕೇಂದ್ರ ಸ್ಥಾನದ ಮೇಲೆ ನಳನಳಿಸುತ್ತಿರುವ ನಮ್ಮ ತ್ರಿವರ್ಣ ಧ್ವಜ ಹಾಗೂ ಭಾರತ ಸರ್ವೋಚ್ಚ ನ್ಯಾಯಾಲಯದ ಗೋಪುರದ ಮೇಲೆ



Downloaded From: www.kpscvaani.com



ಗೌರವ ಸೂಚಕವಾಗಿ ಕಂಗೊಳಿಸುವ ನಮ್ಮ ರಾಷ್ಟ್ರ ಧ್ವಜ ! ಎಲ್ಲಾ ರಾಜ್ಯಗಳ ಆಡಳಿತ ಕೇಂದ್ರಗಳು, ವಿಧಾನ ಸಭೆಗಳು ಹಾಗೂ ಉಚ್ಚ ನ್ಯಾಯಾಲಯಗಳು, ರಾಷ್ಟ್ರೀಯ ಹಬ್ಬಗಳಾದ ಜನವರಿ 26 ರ ಗಣರಾಜ್ಯೋತ್ಸವ ಹಾಗೂ ಆಗಸ್ಟ್ 15 ರ ಸ್ವಾತಂತ್ರ್ಯ ದಿನಾಚರಣೆಗಳಂದು ಪುಟ್ಟ ಪುಟ್ಟ ಶಾಲೆಗಳು, ದೊಡ್ಡ ದೊಡ್ಡ ಮಹಾವಿದ್ಯಾಲಯಗಳು ಹಾಗೂ ಬೃಹತ್ ವಿಶ್ವವಿದ್ಯಾಲಯಗಳವರೆಗೆ ನಾಡಿಗೆ ನಾಡೇ ರಾಷ್ಟ್ರ ಧ್ವಜಕ್ಕೆ ಗೌರವ ನಮನ ಸಲ್ಲಿಸುತ್ತಿರುವುದು ನಮಗೆ ತಿಳಿದಿದೆ. ಅಲ್ಲವೇ ? ಆದರೆ, ಎಲ್ಲೆಡೆ ದೊರೆಯುವ ನಮ್ಮ ರಾಷ್ಟ್ರ ಧ್ವಜ ಎಲ್ಲಿ ತಯಾರಾಗುತ್ತವೆ ಎಂಬ ಸಂಗತಿ ಮಾತ್ರ ಬಹುತೇಕರಿಗೆ ತಿಳಿದಿಲ್ಲ.



**ಏಕೈಕ ಅಧಿಕೃತ ಸಂಸ್ಥೆ !**

ಮಹಾತ್ಮ ಗಾಂಧಿ ಅವರ ಕನಸನ್ನು ನನಸು ಮಾಡಲು ಖಾದಿ ಉತ್ಪನ್ನಗಳನ್ನು ಉತ್ತೇಜಿಸಲು ಕರ್ನಾಟಕ ಏಕೀಕರಣವಾದ ನಂತರದ ವರ್ಷದಲ್ಲಿ ಅಂದರೆ 1957 ರ ನವೆಂಬರ್ 1 ರಂದು ನಮ್ಮ ಕರ್ನಾಟಕದಲ್ಲಿ ಪ್ರಾರಂಭವಾದ ಸಣ್ಣ ಸಂಸ್ಥೆಯೊಂದು ಇಂದು ಇಡೀ ಭಾರತಕ್ಕೇ ರಾಷ್ಟ್ರ ಧ್ವಜವನ್ನು ಪೂರೈಸುವ ಏಕೈಕ ಅಧಿಕೃತ ಸಂಸ್ಥೆಯಾಗಿ ಬೆಳದಿದೆ ಎಂದರೆ ಏಕಕಾಲಕ್ಕೆ ಅಚ್ಚರಿ ಮತ್ತು ಆನಂದ ಉಂಟಾಗುತ್ತದೆ.

ವೆಂಕಟೇಶ್ ಟಿ ಮಾಗಡಿ ಹಾಗೂ ಶ್ರೀರಂಗ ಕಾಮತ್ ಅವರನ್ನು ಒಳಗೊಂಡ ಗೆಳೆಯರ ಗುಂಪು ಖಾದಿ ಮತ್ತು ಗ್ರಾಮೋದ್ಯೋಗ ಕ್ಷೇತ್ರದಲ್ಲಿ ಗ್ರಾಮೀಣ ಯುವ ಜನತೆಗೆ ಉದ್ಯೋಗ ದೊರಕಿಸಿಕೊಡಲು ಧಾರವಾಡ ಜಿಲ್ಲೆಯ ಬೆಂಗೇರಿಯಲ್ಲಿ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಸಂಯುಕ್ತ ಸಂಘದ ಹೆಸರಿನಲ್ಲಿ ಸ್ಥಾಪಿಸಿದ ಸಂಸ್ಥೆ ಇಂದು ಇಡೀ ರಾಷ್ಟ್ರಕ್ಕೇ ರಾಷ್ಟ್ರ ಧ್ವಜವನ್ನು ಪೂರೈಸುವ ಅಭಿಮಾನದ ಸಂಸ್ಥೆಯಾಗಿ ದೇಶದ ಎಲ್ಲರೂ ಹೆಮ್ಮೆ ಪಡುವ ಕಾರ್ಯವನ್ನು ನಿರ್ವಹಿಸುತ್ತಿದೆ.



Downloaded From: www.kpscvaani.com

ರಾಜ್ಯದ ವಿವಿಧೆಡೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ 58 ಸಂಸ್ಥೆಗಳನ್ನು ಒಗ್ಗೂಡಿಸಿ 17 ಎಕರೆ ವಿಶಾಲ ಪ್ರದೇಶದಲ್ಲಿ ಮೇಳೈಸಿದ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಸಂಯುಕ್ತ ಸಂಘವು 1982 ರಲ್ಲಿ ಖಾದಿ ಟೋಪಿ, ಚೀಲ, ಹೊದಿಕೆ, ನೆಲಹಾಸು ಹೀಗೆ ಬಗೆ ಬಗೆಯ ಖಾದಿ ಉತ್ಪನ್ನಗಳನ್ನು ತಯಾರಿಸಲು ಮುಂದಾಯಿತು. ನಂತರ, 2004 ರಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗವು ರಾಷ್ಟ್ರ ಧ್ವಜವನ್ನು ತಯಾರಿಸಲು ಅನುಮತಿ ನೀಡಿದ ಹಿನ್ನೆಲೆಯಲ್ಲಿ ಈ ಸಂಸ್ಥೆಯು ರಾಷ್ಟ್ರ ಧ್ವಜವನ್ನು ತಯಾರಿಸುವ ಪ್ರತ್ಯೇಕ ಘಟಕವನ್ನು ಸ್ಥಾಪಿಸಿದೆ.

ಅಲ್ಲದೆ, ರಾಷ್ಟ್ರ ಧ್ವಜ ತಯಾರಿಸಲು ಪ್ರಾರಂಭಿಸಿದ ಈ ಸಂಸ್ಥೆಗೆ ಭಾರತೀಯ ಮಾಪನ ಕೇಂದ್ರವು ( ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್ ) 2006 ರಲ್ಲಿ ರಾಷ್ಟ್ರ ಧ್ವಜದ ಗುಣಮಟ್ಟವನ್ನು ಪ್ರಮಾಣೀಕೃತಗೊಳಿಸಿ, ರಾಷ್ಟ್ರ ಧ್ವಜವನ್ನು ಭಾರತಾದ್ಯಂತ ಮಾರಾಟ ಮಾಡಲು ಅನುವು ಮಾಡಿಕೊಟ್ಟಿದೆ.



**ತಯಾರಿಕೆ ಹೇಗೆ ?**

ರಾಷ್ಟ್ರ ಧ್ವಜ ತಯಾರಿಕಾ ಕಾರ್ಯ ಸುಲಭವಲ್ಲ. ಭಾರತೀಯ ಮಾಪನ ಕೇಂದ್ರದ ಕಟ್ಟುನಿಟ್ಟಿನ ಮಾರ್ಗಸೂಚಿಗಳಂತೆಯೇ ಧ್ವಜವನ್ನು ತಯಾರಿಸಬೇಕು. ಬಣ್ಣ, ಅಳತೆ ಅಥವಾ ಗಾತ್ರ, ದಾರದ ಎಳೆಯ ಎಣಿಕೆ, ನೂಲಿನ ಬಲ, ಬಣ್ಣ ಹಾಕಲು ಬಳಸುವ ಪದಾರ್ಥಗಳು ಎಲ್ಲವೂ ಸಪ್ರಮಾಣದಲ್ಲಿ ಇರಬೇಕು. ಇಲ್ಲವಾದಲ್ಲಿ ಅದು ಗಂಭೀರ ಅಪರಾಧವಾಗುತ್ತದೆ. ಅಂತೆಯೇ, ಈ ಅಪರಾಧಕ್ಕೆ ಭಾರತ ಧ್ವಜ ಸಂಹಿತೆ – 2002 ರ ಪ್ರಕಾರ ದಂಡ ಅಥವಾ ಕಾರಾಗೃಹ ವಾಸ ಅಥವಾ ಎರಡನ್ನೂ ವಿಧಿಸಬಹುದಾಗಿದೆ.



ಕೈಯಿಂದ ನೂಲು ತೆಗೆಯುವುದು, ಕೈಮಗ್ಗದಿಂದ ನೇಯ್ಗೆ ಮಾಡುವುದು, ಬೆಳ್ಳಗೆ ಶುಭ್ರಗೊಳಿಸಿ ಬಣ್ಣ ಹಾಕುವುದು, ಚಕ್ರದ ಮುದ್ರಣ, ಹೊಲಿಗೆ ಹಾಕುವುದು ಹಾಗೂ ಅಡ್ಡ ಬೆಣೆಯ ಸಾಧನದ ಮೂಲಕ ನೇತು ಹಾಕುವುದು ಹೀಗೆ ಧ್ವಜ ತಯಾರಿಕೆ ನಡೆಯುತ್ತದೆ. ರಾಷ್ಟ್ರ ಧ್ವಜಕ್ಕೆ ಅಗತ್ಯವಿರುವ ಬಟ್ಟೆಯನ್ನು ತುಳಸಿಗೇರಿಯಲ್ಲಿರುವ ಸಂಸ್ಥೆಯ ಬಾಗಲಕೋಟೆ ಘಟಕ ಪೂರೈಸುತ್ತದೆ.

ಬಿಳಿಯ ಬಟ್ಟೆಯ ಮೇಲೆ ನೀಲಿ ಚಕ್ರದಲ್ಲಿ 24 ಕಡ್ಡಿಗಳು ಸಪ್ರಮಾಣದಲ್ಲಿ ಇರುವುದನ್ನು ಖಾತರಿಪಡಿಸಿಕೊಂಡು ಒಂದೇ ಗಾತ್ರದಲ್ಲಿ ಹಾಗೂ ಎರಡೂ ಬದಿಯಲ್ಲಿರುವ ಕೇಸರಿ, ಬಿಳಿ ಹಾಗೂ ಹಸಿರು ಬಟ್ಟೆಯನ್ನು ಹೊಲಿಗೆ ಯಂತ್ರವನ್ನು ಬಳಸಿ ಹೊಲಿಯಲಾಗುತ್ತದೆ. ಆಗ ನಮ್ಮೆಲ್ಲರ ಅಚ್ಚುಮೆಚ್ಚಿನ ಇಡೀ ಭಾರತವೇ ಪೂಜಿಸಿ–ಗೌರವಿಸುವ ಹಾಗೂ ವಿಶ್ವವಿಡೀ ಭಾರತೀಯರೆಲ್ಲರೂ ಅಭಿಮಾನಿಸಿ–ಪ್ರೀತಿಸುವ ರಾಷ್ಟ್ರ ಧ್ವಜ ತಯಾರಾಗುತ್ತದೆ.

**ಗಾತ್ರ ಮತ್ತು ಬಳಕೆ**

ಭಾರತ ಧ್ವಜ ಸಂಹಿತೆಯ ಪ್ರಕಾರ ರಾಷ್ಟ್ರ ಧ್ವಜವು ಚೌಕಾಕಾರದಲ್ಲಿ ಮೂರು ಮತ್ತು ಎರಡರ ಅನುಪಾತದಲ್ಲಿ ಇರಬೇಕು. ರಾಷ್ಟ್ರ ಧ್ವಜವನ್ನು ಒಂಭತ್ತು ವಿವಿಧ ಗಾತ್ರಗಳಲ್ಲಿ ತಯಾರಿಸಲಾಗುತ್ತದೆ. ಅತಿ ಸಣ್ಣ ಗಾತ್ರದ್ದು 150 ಮಿ ಮೀ ಅಗಲ ಮತ್ತು 100 ಮಿ ಮೀ ಎತ್ತರ ಎಂದರೆ 6 ಇಂಚು : 4 ಇಂಚು ! ಅತಿ ದೊಡ್ಡ ಗಾತ್ರದ್ದು 6300 ಮಿ ಮೀ ಮತ್ತು 4200 ಮಿ ಮೀ ಎಂದರೆ 21 ಅಡಿ : 14 ಅಡಿ !

ಗಣ್ಯಾತಿಗಣ್ಯರು ಪ್ರಯಾಣಿಸುವ ವಿಮಾನದಲ್ಲಿ 450 ಮಿ ಮೀ ಮತ್ತು 300 ಮಿ ಮೀ ಗಾತ್ರದ ರಾಷ್ಟ್ರ ಧ್ವಜವನ್ನು ವಿಮಾನದ ಮುಂಭಾಗದಲ್ಲಿ ಅಳವಡಿಸಲಾಗುತ್ತದೆ. ಅಲ್ಲದೆ, 225 ಮಿ ಮೀ ಮತ್ತು 150 ಮಿ ಮೀ ಗಾತ್ರದ ರಾಷ್ಟ್ರ ಧ್ವಜವನ್ನು ಗಣ್ಯಾತಿಗಣ್ಯರು ಸಂಚರಿಸುವ ಕಾರುಗಳ ಮೇಲೆ ಪ್ರದರ್ಶಿಸಲಾಗುತ್ತದೆ. ಅಂತೆಯೇ, 150 ಮಿ ಮೀ ಮತ್ತು 100 ಮಿ ಮೀ ಗಾತ್ರದ ರಾಷ್ಟ್ರ ಧ್ವಜವನ್ನು ಗಣ್ಯಾತಿಗಣ್ಯರ ಮೇಜಿನ ಮೇಲೆ



Downloaded From: www.kpscvaani.com





ಇರಿಸಲಾಗುತ್ತದೆ. ಬೃಹತ್ ಗಾತ್ರದ ರಾಷ್ಟ್ರ ಧ್ವಜಗಳನ್ನು ಪ್ರಮುಖ ಸರ್ಕಾರಿ ಕಟ್ಟಡಗಳ ಮೇಲೆ ಹಾರಿಸಲಾಗುತ್ತದೆ.

ಮುಂಜಾನೆ ಸೂರ್ಯನ ಜೊತೆ ಜೊತೆಯಲ್ಲಿ ಆಗಸವೇರುವ ರಾಷ್ಟ್ರಧ್ವಜವು ಮುಸ್ಸಂಜೆ ಸೂರ್ಯ ಮುಳುಗುವ ವೇಳೆಗೆ ಇಳಿಯಬೇಕೆಂಬುದು ನಿಯಮ. ಇತ್ತೀಚಿನ ದಿನಗಳಲ್ಲಿ ದಿನದ 24 ಗಂಟೆಗಳೂ ರಾಷ್ಟ್ರಧ್ವಜವನ್ನು ಅಧಿಸೂಚಿತ ಸ್ಥಳಗಳಲ್ಲಿ ಹಾರಿಸಲು ಅವಕಾಶ ಕಲ್ಪಿಸಲಾಗಿದೆ. ಉದಾಹರಣೆಗೆ ಬೆಂಗಳೂರಿನ ಇಂದಿರಾ ಗಾಂಧಿ ಸಂಗೀತ ಕಾರಂಜಿಯ ಸಮೀಪದಲ್ಲಿರುವ ರಾಷ್ಟ್ರೀಯ ಸೈನಿಕ ಸ್ಮಾರಕ ಹಾಗೂ ಬೆಳಗಾವಿಯ ಕೆರೆಯ ಬಳಿ ದಿನದ 24 ಗಂಟೆಗಳೂ ಮುಗಿಲಿನೆತ್ತರಕ್ಕೆ ರಾಷ್ಟ್ರ ಧ್ವಜವು ನಳನಳಿಸುತ್ತಿರುತ್ತದೆ.

**ರಾಷ್ಟ್ರ ಧ್ವಜದ ಬೆಲೆ ಎಷ್ಟು ?**

ರಾಷ್ಟ್ರ ಧ್ವಜಕ್ಕೆ ಬೆಲೆ ಎಷ್ಟು ? ಎಂದು ಯಾರಾದರೂ ಪ್ರಶ್ನಿಸಿದರೆ, ಅದಕ್ಕೆ ನಮ್ಮಲ್ಲಿ ಉತ್ತರವಿಲ್ಲ. ಏಕೆಂದರೆ, ಯಾರಿಂದಲೂ ರಾಷ್ಟ್ರಧ್ವಜಕ್ಕೆ ಬೆಲೆ ಕಟ್ಟಲು ಸಾಧ್ಯವೇ ಇಲ್ಲ ! ಸರ್ಕಾರಿ ಇಲಾಖೆಗಳು ಮತ್ತು ಕಚೇರಿಗಳು, ಶಾಲಾ-ಕಾಲೇಜುಗಳು, ರಾಜಕೀಯ ಪಕ್ಷಗಳು ಸಂದರ್ಭಕ್ಕೆ ಅನುಗುಣವಾಗಿ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಸಂಯುಕ್ತ ಸಂಘದಿಂದ ರಾಷ್ಟ್ರ ಧ್ವಜವನ್ನು ಖರೀದಿಸುತ್ತವೆ. ಕೈಗೆಟುಕುವ ಬೆಲೆಯಲ್ಲಿ ಲಭಿಸುವ ರಾಷ್ಟ ಧ್ವಜವು ನಮ್ಮಲ್ಲಿ ಮೂಡಿಸುವ ಅಭಿಮಾನ, ಹೆಮ್ಮೆ, ಗೌರವ ಹಾಗೂ ಪ್ರೀತಿಗೆ ಬೆಲೆ ಕಟ್ಟಲಾಗದು !

ಕೋವಿಡ್-19 ರ ಉಪಟಳ ನಮ್ಮ ರಾಷ್ಟ್ರ ಧ್ವಜವನ್ನೂ ಕಾಡಿದೆ. 2020 ಹಾಗೂ 2021 ನೇ ಸಾಲಿನಲ್ಲಿ ರಾಷ್ಟ್ರಧ್ವಜದ ಖರೀದಿ ಮತ್ತು ಮಾರಾಟ ತೀವ್ರವಾಗಿ ಕುಸಿದಿದೆ. ಹೊಸ ವರ್ಷ 2022 ನೇ ಸಾಲಿನಲ್ಲಾದರೂ ರಾಷ್ಟ್ರಧ್ವಜದ ಖರೀದಿ ಮತ್ತು ಮಾರಾಟ ಉತ್ತಮಗೊಳ್ಳಲಿ ಎಂದು ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಸಂಯುಕ್ತ ಸಂಘದ ಕಾರ್ಯದರ್ಶಿ ಶಿವಾನಂದ ಮಠಪತಿ ಅವರು ಆಶಿಸುತ್ತದೆ. ನಾವು ಕೊಳ್ಳುವ ಒಂದು ಧ್ವಜ ನಮ್ಮ ಜೀವನಕ್ಕೆ ಪ್ರೇರಣೆ ಮತ್ತು ಸ್ಫೂರ್ತಿಯನ್ನೀಯುತ್ತದೆ, ಮಾತ್ರವಲ್ಲ, ಹಲವು ಕುಟುಂಬಗಳಿಗೆ ಬದುಕನ್ನು ಕಟ್ಟಿಕೊಡುತ್ತದೆ. ಆದಕಾರಣ, ಈ ಬಾರಿಯ ಗಣರಾಜ್ಯೋತ್ಸವ ಹಾಗೂ ಸ್ವಾತಂತ್ರ್ಯ ದಿನಾಚರಣೆಗೆ ನಿಶ್ಚಿತವಾಗಿ ನಾವು ರಾಷ್ಟ್ರಧ್ವಜವನ್ನು ಖರೀದಿಸೋಣ. ಆ ದಿನ ಅದನ್ನು ಗೌರವಯುತವಾಗಿ ಪ್ರದರ್ಶಿಸೋಣ. ನಮ್ಮ ಮಕ್ಕಳಲ್ಲಿ ರಾಷ್ಟ್ರಾಭಿಮಾನ ಮತ್ತು ರಾಷ್ಟ್ರ ಪ್ರೇಮವನ್ನು ಬೆಳೆಸೋಣ.

ಅಷ್ಟು ಮಾತ್ರವಲ್ಲ ! ಮತ್ತೊಂದು ವಿಷಯ ! ಕರ್ನಾಟಕದವರೆಲ್ಲರೂ ಸಂತಸಪಟ್ಟು ಸಂಭ್ರಮಿಸಬಹುದಾದ ವಿಚಾರ ಎಂದರೆ ನಮ್ಮ ರಾಷ್ಟ್ರ ಧ್ವಜದ ತವರು ನಮ್ಮ ಕರ್ನಾಟಕ ! ಇದೂ ಕೂಡಾ ನಮಗೆ ಹೆಮ್ಮೆಯ ಸಂಗತಿ ಅಲ್ಲವೇ ?




Downloaded From: www.kpscvaani.com

# ತ್ವರಿತಗತಿಯಲ್ಲಿ ದತ್ತಾಂಶ ಹಂಚಿಕೊಳ್ಳಲು

# ಇ-ಸಹಮತಿ ತಂತ್ರಾಂಶ

**ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ ಕರ್ನಾಟಕ ರಾಜ್ಯ ಸರ್ಕಾರವು ನಾಗರಿಕರ ದತ್ತಾಂಶವನ್ನು ತ್ವರಿತಗತಿಯಲ್ಲಿ ಮತ್ತು ಅತ್ಯಂತ ಗೌಪ್ಯತೆಯಿಂದ ಇ-ಸಹಮತಿ ಎಂಬ ತಂತ್ರಾಂಶದ ಮೂಲಕ ಹಂಚಿಕೊಳ್ಳುವ ವ್ಯವಸ್ಥೆಯನ್ನು ಒದಗಿಸಿದೆ.**



ಕರ್ನಾಟಕ ಸರ್ಕಾರವು ರಾಜ್ಯದ ನಾಗರಿಕರ ದತ್ತಾಂಶ ಗೌಪ್ಯತೆಯನ್ನು ಕಾಪಾಡಲು ಮತ್ತು ಸುರಕ್ಷಿತವಾಗಿ ದತ್ತಾಂಶವನ್ನು ಇತರೆ ಸಂಸ್ಥೆಯೊಂದಿಗೆ ಹಂಚಿಕೊಳ್ಳಲು ಇ-ಸಹಮತಿ ಎಂಬ ಒಂದು ಪ್ರಮುಖ ಹಾಗೂ ವಿನೂತನ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿದೆ.

ಯಾವುದೇ ವ್ಯಕ್ತಿಯು ತನ್ನ ದತ್ತಾಂಶವನ್ನು ಪರಿಶೀಲಿಸಲು ಬಯಸುವ ಸಂಸ್ಥೆಯೊಂದಿಗೆ ತನ್ನ ಸಹಮತಿಯ ಮೇರೆಗೆ ಇ-ಸಹಮತಿ ತಂತ್ರಾಂಶದ ಮೂಲಕ ದತ್ತಾಂಶವನ್ನು ಸಂಗ್ರಹಿಸಿ ಮತ್ತು ನಿರ್ವಹಿಸುತ್ತಿರುವ ಸಂಸ್ಥೆಯಿಂದ ನೀಡುವುದೇ ಈ ತಂತ್ರಾಂಶದ ವ್ಯವಸ್ಥೆಯಾಗಿದೆ. ಇಂತಹ ವ್ಯವಸ್ಥೆ ದೇಶದಲ್ಲೇ ಪ್ರಥಮ ಬಾರಿಗೆ ನಮ್ಮ ರಾಜ್ಯದಲ್ಲಿ ಜಾರಿಗೊಳಿಸಲಾಗುತ್ತಿದೆ.

ಇತ್ತೀಚಿನ ದಿನಗಳಲ್ಲಿ ಕೆಲವು ಉದ್ಯೋಗಾಕಾಂಕ್ಷಿಗಳು ನಕಲಿ ಪ್ರಮಾಣ ಪತ್ರವನ್ನು ಉದ್ಯೋಗದಾತರಿಗೆ ಸಲ್ಲಿಸುತ್ತಿರುವುದು ಕಂಡುಬರುತ್ತಿದೆ. ಇದಲ್ಲದೆ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಪ್ರಮಾಣಪತ್ರಗಳನ್ನು ದೃಢೀಕರಿಸಿ ಉದ್ಯೋಗದಾತರಿಗೆ ಸಲ್ಲಿಸುವ ಪ್ರಕ್ರಿಯೆ ಕ್ಲಿಷ್ಟಕರವಾಗಿರುವ ಜೊತೆಗೆ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುತ್ತದೆ.

ಹಾಗಾಗಿ ಉದ್ಯೋಗದಾತರಿಗೆ ಉದ್ಯೋಗಾಕಾಂಕ್ಷಿ ಸಲ್ಲಿಸಿರುವ ಪ್ರಮಾಣ ಪತ್ರಗಳ ನೈಜತೆಯನ್ನು ಎಲೆಕ್ಟ್ರಾನಿಕ್ ರೂಪದಲ್ಲಿ ಪರಿಶೀಲಿಸಲು ಯಾವುದೇ ಫ್ಲಾಟ್ ಫಾರ್ಮ್ ಇಲ್ಲದಿದ್ದುದು ದೊಡ್ಡ ಕೊರತೆಯಾಗಿತ್ತು. ಅಲ್ಲದೆ ದಾಖಲೆಗಳ ಪರಿಶೀಲನಾ ಪ್ರಕ್ರಿಯೆಯು ಅತಿ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುತ್ತಿದ್ದುದರಿಂದ ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ನೀಡುವುದೂ ವಿಳಂಬವಾಗುತಿತ್ತು.

ಆದರೆ ಎಲ್ಲಾ ಸಮಸ್ಯೆಗಳ ನಿವಾರಣೆಗಾಗಿ ರಾಜ್ಯ ಸರ್ಕಾರವು **'ನ್ಯಾಷನಲ್ ಇನ್ಫಾರ್ಮೆಟಿಕ್ಸ್ ಸೆಂಟ್' (ಎನ್‌ಐಸಿ) ಅಭಿವೃದ್ಧಿ ಪಡಿಸಿರುವ ಇ-ಸಹಮತಿ** ಎಂಬ ಸಾಫ್ಟ್‌ವೇರ್ ಅನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆವತಿಯಿಂದ ಅನುಷ್ಠಾನಗೊಳಿದೆ. ಈ ಇ-ಸಹಮತಿ ತಂತ್ರಾಂಶದಲ್ಲಿ ಎಲ್ಲಾ ಪ್ರಕ್ರಿಯೆಯೂ ಎಲೆಕ್ಟ್ರಾನಿಕ್ ರೂಪದಲ್ಲಿ ನಡೆಯುವುದರಿಂದ ಹೆಚ್ಚಿನ ಸಮಯ ತೆಗೆದುಕೊಳ್ಳುವುದಿಲ್ಲ. ಹಾಗೆಯೇ ಇದರ ಮೂಲಕ ಉದ್ಯೋಗಾಕಾಂಕ್ಷಿ ಯಾವುದೇ ಉದ್ಯೋಗದಾತರೊಂದಿಗೆ ಸುರಕ್ಷಿತವಾದ ರೀತಿಯಲ್ಲಿ ತನ್ನ ಪ್ರಮಾಣಪತ್ರಗಳನ್ನು/ ದಾಖಲೆಗಳನ್ನು ಸಹಮತಿ ನೀಡುವ ಮೂಲಕ ಸುಲಲಿತವಾಗಿ ಹಂಚಿಕೊಳ್ಳಬಹುದು.



Downloaded From: www.kpscvaani.com

ಈ ಸಾಫ್ಟ್‌ವೇರ್‌ನಿಂದ ಪ್ರಮುಖವಾಗಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ. ಇ-ಸಹಮತಿಯು ವಿವಿಧ ಕಂಪನಿಗಳು, ವಿಶ್ವವಿದ್ಯಾಲಯಗಳು, ಪರೀಕ್ಷಾ ಮಂಡಳಿಗಳ ನಡುವೆ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸುತ್ತದೆ. ನೇಮಕಾತಿಯ ಸಂದರ್ಭದಲ್ಲಿ ಕಂಪನಿಯು ಉದ್ಯೋಗಾಂಕ್ಷಿಯ ಶೈಕ್ಷಣಿಕ ಪ್ರಮಾಣ ಪತ್ರಗಳನ್ನು ಪರಿಶೀಲಿಸಲು ಬಯಸಿದಾಗ ವಿಶ್ವವಿದ್ಯಾಲಯಗಳು ಅಥವಾ ಪರೀಕ್ಷಾ ಮಂಡಳಿಗಳಿಂದ ಲಭ್ಯವಿರುವ ಶೈಕ್ಷಣಿಕ ಪ್ರಮಾಣಪತ್ರಗಳ ನೈಜತೆಯನ್ನು ವಿದ್ಯಾರ್ಥಿಯ ಒಪ್ಪಿಗೆ ಇದ್ದಲ್ಲಿ ಮಾತ್ರ ಇ-ಸಹಮತಿ ಮೂಲಕ ಪರಿಶೀಲಿಸಬಹುದು.

**ವಿದ್ಯಾರ್ಥಿಯು ಇದರಲ್ಲಿ ಲಾಗಿನ್ ಆಗಿ ಆಧಾರ್ ಸಂಖ್ಯೆಯನ್ನು ನಮೂದಿಸಿದರೆ ಒಟಿಪಿ ಸಂದೇಶ ಬರುತ್ತದೆ. ವಿದ್ಯಾರ್ಥಿಯು ಆ ಒಟಿಪಿಯನ್ನು ದಾಖಲಿಸಿದಾಗ ಮಾತ್ರವಷ್ಟೇ ನೋಂದಾಯಿಸಿದ ಕಂಪನಿಯು ಆಯಾ ಪರೀಕ್ಷಾ ಮಂಡಳಿ ಅಥವಾ ಶಿಕ್ಷಣ ಸಂಸ್ಥೆಗಳಿಂದ ವಿದ್ಯಾರ್ಥಿ ಕುರಿತಂತೆ ದತ್ತಾಂಶವನ್ನು ಪಡೆಯಬಹುದು.**

ಯಾವುದೇ ದತ್ತಾಂಶ ಅಭಿರಕ್ಷಕ ಸಂಸ್ಥೆ (Data Fiduciary) ಯು ಇ-ಸಹಮತಿಯಡಿ ಸೇರ್ಪಡೆಗೊಳ್ಳಲು ಮತ್ತು ಯಾವುದೇ ಮಾಹಿತಿ ಒಡೆಯರ ದತ್ತಾಂಶವನ್ನು ಇ-ಸಹಮತಿ ಮೂಲಕ ಅನ್ಯ ಸೇವಾ ಸಂಸ್ಥೆ (Third Party Service Provider ) ಗೆ ನೀಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ (ಇ-ಆಡಳಿತ) ಇಲಾಖೆ ಇವರ ಅಧ್ಯಕ್ಷತೆಯ ಸಮಿತಿಯಿಂದ ಅನುಮೋದನೆಯನ್ನು ಪಡೆಯಬೇಕಾಗಿರುವುದರಿಂದ ದತ್ತಾಂಶವು ಯಾವುದೇ ಕಾರಣಕ್ಕೂ ದುರುಪಯೋಗವಾಗುವುದಿಲ್ಲ.

ಕರ್ನಾಟಕ ರಾಜ್ಯವು ವಿವಿಧ ಸಂಸ್ಥೆಗಳು (ಸರ್ಕಾರಿ, ಅರೆ ಸರ್ಕಾರಿ, ಖಾಸಗಿ, ಮಂಡಳಿಗಳು, ಶಿಕ್ಷಣ ಸಂಸ್ಥೆ ಗಳು, ಕಾರ್ಖಾನೆ)ಗಳನ್ನು ಹೊಂದಿದ್ದು, ವಿಫುಲವಾದ ಉದ್ಯೋಗವಕಾಶಗಳಿದ್ದರೂ ಸಹ, ಗ್ರಾಮೀಣ ಅಭ್ಯರ್ಥಿಗಳನ್ನು ಸೇರಿದಂತೆ ಸೂಕ್ತವಾದ ಅಭ್ಯರ್ಥಿಯನ್ನು ಹುಡುಕುವುದು ಕಷ್ಟಕರವಾಗಿತ್ತು. ಆದರೆ ಈ ತಂತ್ರಾಂಶದ ಮೂಲಕ ನೋಂದಾಯಿತ ಉದ್ಯೋಗದಾತರು ತಮ್ಮ ಅವಶ್ಯಕತೆಗೆ ಅನುಗುಣವಾಗಿ ವಿದ್ಯಾರ್ಹತೆಯನ್ನು ಹಾಗೂ ನಿಪುಣತೆ ಹೊಂದಿರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಬಹುದು.

ದತ್ತಾಂಶದ ಒಡೆಯರ ಒಪ್ಪಿಗೆ ಅಥವಾ ಕೋರಿಕೆಯಾಧಾರದ ಒಪ್ಪಿಗೆ ಮೇರೆಗೆ ಮಾಹಿತಿ ಒಡೆಯನ ದತ್ತಾಂಶವನ್ನು ಒದಗಿಸುವುದು ಖಾಸಗಿ/ಸಾರ್ವಜನಿಕ ಕಂಪನಿ ಅಥವಾ ಸಂಸ್ಥೆ ಅಥವಾ ಸರ್ಕಾರೇತರ ಸಂಸ್ಥೆ ಅಥವಾ ಸಾರ್ವಜನಿಕ ವಲಯದ ಉದ್ಯಮವಾದ ಅನ್ಯ ಸೇವಾ ಸಂಸ್ಥೆಯ (Third Party Service Provider) ಕರ್ತವ್ಯವಾಗಿರುತ್ತದೆ. ಅನ್ಯ ಸೇವಾ ಸಂಸ್ಥೆಯು ದತ್ತಾಂಶ ಸಂರಕ್ಷಣೆ ಕುರಿತಾಗಿ ಹೊರಡಿಸಿರುವ ಮಾರ್ಗಸೂಚಿಗಳು, ಕಾನೂನು ಮತ್ತು ನಿಯಮಗಳನ್ನು ಹಾಗೂ ಕಾಲಕಾಲಕ್ಕೆ ಹೊರಡಿಸುವ ಹೆಚ್ಚುವರಿ ಮಾರ್ಗಸೂಚಿಗಳನ್ನು ತಪ್ಪದೇ ಪಾಲಿಸಬೇಕು. ಹಾಗೇ ಕರ್ನಾಟಕ ಸರ್ಕಾರವು ನಿಗದಿ ಪಡಿಸುವ ಹಾಗೂ ಕಾಲಕಾಲಕ್ಕೆ ಪರಿಷ್ಕರಿಸಬಹುದಾದ ನೋಂದಣಿ ಶುಲ್ಕವನ್ನು ಪಾವತಿಸಬೇಕಾಗುತ್ತದೆ.

ವಿಧಿಸಲಾಗಿರುವ ಮಾರ್ಗಸೂಚಿಗಳು, ಷರತ್ತು ಅಥವಾ ನಿಬಂಧನೆಗಳನ್ನು ಪರಿಪಾಲನೆ ಮಾಡದೇ ಇದ್ದಲ್ಲಿ, ಅಥವಾ ಉಲ್ಲಂಘಿಸಿದಲ್ಲಿ ಸರ್ಕಾರವು ಯಾವುದೇ ಕಾರಣವನ್ನು ನೀಡದೆ ತನ್ನ ವಿವೇಚನೆಯಲ್ಲಿ ಅನ್ಯ ಸೇವಾ ಸಂಸ್ಥೆಯನ್ನು ವಜಾಗೊಳಿಸುವ/ ನೋಂದಣಿಯನ್ನು ರದ್ದುಗೊಳಿಸುವ ಅಧಿಕಾರವನ್ನು ಹೊಂದಿದೆ.

ಒಪ್ಪಿಗೆಯಾಧಾರದ ಮೇರೆಗೆ ದತ್ತಾಂಶ ಅಭಿರಕ್ಷಕ ಸಂಸ್ಥೆ (Data Fiduciary) ಯಿಂದ ಸ್ವೀಕೃತವಾದ ದತ್ತಾಂಶವನ್ನು ಅನ್ಯ ಸೇವಾ ಸಂಸ್ಥೆಯೊಂದಿಗೆ ಮಾತ್ರ ಗೌಪ್ಯ ರೂಪದಲ್ಲಿ ಹಂಚಿಕೊಳ್ಳಲಾಗುವುದರಿಂದ ಎಲ್ಲಿಯೂ ದತ್ತಾಂಶ ಸೋರಿಕೆಯಾಗುವುದಿಲ್ಲ.

ಸದ್ಯ ಈ ತಂತ್ರಾಂಶದಲ್ಲಿ 2003ರ ನಂತರದ ಎಸ್.ಎಸ್.ಎಲ್.ಸಿ ಪರೀಕ್ಷೆಗಳ ಮತ್ತು 2008 ರ ನಂತರದ ಪಿಯುಸಿ ಪರೀಕ್ಷೆಗಳ ವಿವರಗಳನ್ನು ಸಂಗ್ರಹಿಸಲಾಗಿದೆ. ವಿದ್ಯಾರ್ಥಿಯು ಲಾಗಿನ್ ಆಗಿ ತನ್ನ ಆಧಾರ್ ಸಂಖ್ಯೆಯನ್ನು ನಮೂದಿಸಿದಾಗ ಅವರ ಮೊಬೈಲ್‌ಗೆ ಒಟಿಪಿ ಬರುತ್ತದೆ. ಆ ಒಟಿಪಿ ಯನ್ನು ದಾಖಲಿಸಿದರಷ್ಟೇ ನೋಂದಾಯಿಸಿಕೊಂಡಿರುವ ಕಂಪನಿಯು ಆಯಾ ಪರೀಕ್ಷಾ ಮಂಡಳಿ ಅಥವಾ ಶಿಕ್ಷಣ ಸಂಸ್ಥೆಗಳಿಂದ ದತ್ತಾಂಶವನ್ನು ಪಡೆದುಕೊಳ್ಳುತ್ತದೆ.

ಈಗಾಲೇ ರಾಜ್ಯದ ಸುಮಾರು 63 ವಿಶ್ವವಿದ್ಯಾಲಯಗಳು, ಶಿಕ್ಷಣ ಸಂಸ್ಥೆಗಳು ಇ-ಸಹಮತಿಯಲ್ಲಿ ನೋಂದಾಯಿಸಿ ಕೊಂಡಿವೆ. ಈ ಡಿಜಿಟಲ್ ವೇದಿಕೆಯಿಂದ ಮಾಹಿತಿಯನ್ನು ಪಡೆದುಕೊಳ್ಳುವುದು ಅತ್ಯಂತ ಸಲಲಿತವಾಗಿದೆಯಲ್ಲದೆ, ಕಾಗದ ರಹಿತ ನೈಜ್ಯ ದಾಖಲೆಯನ್ನು ಪಡೆದುಕೊಳ್ಳಬಹುದು. ಅಲ್ಲದೆ ಉದ್ಯೋಗಾಕಾಂಕ್ಷಿಗಳು ಕಂಪನಿಗಳಿಗೆ ದಾಖಲೆ ಪತ್ರಿಗಳನ್ನು ಸಲ್ಲಿಸುವ ಪ್ರಮೇಯವೇ ಬರುವುದಿಲ್ಲ.

ದತ್ತಾಂಶ ಒಡೆತನದ ಇಲಾಖೆಗಳು ಇ-ಸಹಮತಿಯ ಪ್ರಯೋಜನವನ್ನು ಪಡೆಯಲು ಸಿಬ್ಬಂದಿ ಆಡಳಿತ ಸುಧಾರಣಾ ಇಲಾಖೆಯನ್ನು ಸಂಪರ್ಕಿಸಬಹುದು. ■

**ನ್ಯಾಷನಲ್ ಇನ್ಫಾರ್ಮೆಟಿಕ್ಸ್ ಸೆಂಟರ್ ಅವರು ಅಭಿವೃದ್ಧಿ ಪಡಿಸಿರುವ ಈ ತಂತ್ರಾಂಶವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಅನುಷ್ಠಾನಗೊಳಿಸುತ್ತಿದೆ. ಈ ದತ್ತಾಂಶ ಹಂಚಿಕೊಳ್ಳುವ ಇ-ಸಹಮತಿಯು ಉದ್ಯೋಗಾಂಕ್ಷಿಗಳು ಮತ್ತು ಉದ್ಯೋಗದಾತರಿಗೆ ಹೆಚ್ಚು ಅನುಕೂಲವಾಗಲಿದೆ. ಅದರಲ್ಲೂ ವಿದ್ಯಾರ್ಥಿಗಳಿಗೆ ಈ ಸಾಫ್ಟ್‌ವೇರ್‌ನಿಂದ ಹೆಚ್ಚು ಅನುಕೂಲ. ಇದರಲ್ಲಿ ವಿದ್ಯಾರ್ಥಿಯ ಒಪ್ಪಿಗೆ ಇದ್ದರಷ್ಟೇ ಅವರ ದತ್ತಾಂಶವನ್ನು ಪಡೆಯಬಹುದು.**

**ರಾಜೀವ್ ಚಾವ್ಲಾ,**
ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ



Downloaded From: www.kpscvaani.com



### ಆಂಗ್ಲರ ದುರಾಡಳಿತದ ವಿರುದ್ಧ

# ಕೊಡಗಿನ ಆಂದೋಲನ

**ಆಂಗ್ಲರ ದುರಾಡಳಿತದ ವಿರುದ್ಧ ಸಿಡಿದೆದ್ದ ಕೊಡಗಿನ ರೈತರು ಕೆಲಕಾಲ ಆಂಗ್ಲರ ನಿದ್ದೆಗೆಡಿಸಿದ್ದ ಆಂದೋಲನ ಅತ್ಯಂತ ರೋಚಕವಾದದ್ದು.**

ಜಗನ್ನಾಥ್ ಪ್ರಕಾಶ್

ಪಶ್ಚಿಮ ಘಟ್ಟ ಶ್ರೇಣಿಗಳಿಂದ ಅವೃತ್ತವಾಗಿರುವ ಕೊಡಗು ನಿತ್ಯ ಹರಿದ್ವರ್ಣದ ಕಾಡುಗಳು, ಆಕರ್ಷಕ ಇಳಿಜಾರುಗಳು, ವ್ಯವಸಾಯ ಯೋಗ್ಯ ಭೂಪ್ರದೇಶ, ಕಣ್ಣು ಹಾಯಿಸಿದಷ್ಟೂ ದೂರ ನಗೆ ಸೂಸುವ ಹಸಿರಿನ ಆಹ್ಲಾದಕರ ವಾತಾವರಣ ಇರುವ ಸ್ವರ್ಗ. ಇಂತಹ ಫಲವತ್ತಾದ ಭೂಮಿ ಮನೋಲ್ಲಾಸ ನೀಡುವ ತಾಣಗಳಿರುವ ಕೊಡಗಿನ ಮೇಲೆ ಆಗ ಭಾರತಕ್ಕೆ ಕಾಲಿಟ್ಟಿದ್ದ ಬ್ರಿಟಿಷರ ಕಣ್ಣು ಬಿದ್ದಿದ್ದರಲ್ಲಿ ಅಚ್ಚರಿ ಇಲ್ಲ. ಜನರೆಲ್ಲ ತನ್ನ ಅಂಕೆಯಲ್ಲೆ ಇರಬೇಕು, ಆಡಳಿತವೂ ತಮ್ಮ ವಶದಲ್ಲಿಯೇ ಇರಬೇಕೆಂದು ಬಿಳಿಯರು ಆ ಕಾಲ ಘಟ್ಟದಲ್ಲಿ ಜನತೆಯನ್ನು ನೆಮ್ಮದಿಯಿಂದ ಬದುಕುವಂತೆ ಮಾಡಿದ್ದ ರಾಜ ಮಹಾರಾಜರನ್ನು ಅಧಿಕಾರದಿಂದ ಕೆಳಗಿಳಿಸಿ, ಆಡಳಿತವನ್ನು ತಮ್ಮ ವಶಕ್ಕೆ ಪಡೆಯಬೇಕೆಂದು ಬಯಸಿದ ಬ್ರಿಟಿಷರು ತಮಗೆ ಅನುಕೂಲವಾದ ಹಲವು ಕಾನೂನು ಕಾಯ್ದೆಗಳನ್ನು ಜಾರಿಗೆ ತರುತ್ತಿದ್ದ ಸಮಯ ಅದು.

ಜನಹಿತ ಕಾಯುವ ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಮೈಸೂರಿನ ಒಡೆಯರ್ ಅರಸ ಮುಮ್ಮಡಿ ಕೃಷ್ಣರಾಜರನ್ನು ಪದಚ್ಯುತಗೊಳಿಸಿ ಅಧಿಕಾರವನ್ನು ತಮ್ಮ ಕೈಗೆತ್ತಿಕೊಂಡು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಗಮನ ಹಾಕಿದ್ದು, ನಿಸರ್ಗದ ಭೂರಮೆ ಕೊಡಗಿನ ಕಡೆಗೆ. ಕೊಡಗಿನ ಅರಸು ಚಿಕ್ಕವೀರರಾಜೇಂದ್ರರು ಒಳ್ಳೆಯ ಆಡಳಿತ ಕೊಡುತ್ತಿದ್ದರು. ಪ್ರಜೆಗಳಿಗೂ ಅವರ ಬಗ್ಗೆ ಗೌರವಾದರಗಳಿದ್ದವು.

ಕೊಡಗನ್ನು ಕಬಳಿಸುವ ಬ್ರಿಟಿಷರ ಪ್ರಯತ್ನಗಳಿಗೆ ಬೋಪು ದಿವಾನರು ಕೈಜೋಡಿಸಿದರು. ಜನಪ್ರೀತಿ ಗಳಿಸಿದ್ದ ರಾಜರ ಬಗ್ಗೆ ಬೇರೇನೂ ಗಂಭೀರ ಆರೋಪಗಳಿರಲಿಲ್ಲ. ಬೋಪು ದಿವಾನರ ಪಿತೂರಿ ನಿಲ್ಲಲಿಲ್ಲ. ಸಣ್ಣ ಪುಟ್ಟ ವಿಷಯಗಳನ್ನೇ ದೊಡ್ಡದು ಮಾಡುತ್ತಿದ್ದ ಅವರಿಗೆ ವೀರರಾಜೇಂದ್ರರ ಸಹೋದರಿ ದೇವಮ್ಮಾಜಿ ಹಾಗೂ ಆಕೆಯ ಪತಿ ಚನ್ನಬಸಪ್ಪನವರಿಗೆ ಅಧಿಕಾರ ಮಾಡುವ ಆಕಾಂಕ್ಷೆ. ವೀರರಾಜೇಂದ್ರರಿಗೆ ವಿರೋಧವಾಗಿದ್ದ ಬೋಪು ದಿವಾನ ಹಾಗೂ ಕೆಲವು ಸ್ವಾಮಿ ದ್ರೋಹಿಗಳು ಸಂಚು ಮಾಡಿ ಬ್ರಿಟಿಷರಿಗೆ ಕುಮ್ಮಕ್ಕು ಕೊಟ್ಟರು. ಇದರ ಪರಿಣಾಮ ವೀರರಾಜೇಂದ್ರರು ಅರಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಸಮಯದಲ್ಲಿ ಬ್ರಿಟಿಷ್ ಸೈನ್ಯ ಅರಮನೆಗೆ ಮುತ್ತಿಗೆ ಹಾಕುತ್ತದೆ. ದಿವಾನ ಬೋಪು ಕೂಡ ಪ್ರತಿರೋಧ



Downloaded From: www.kpscvaani.com

ತೋರದೆ ಬಿಳಿಯರಿಗೆ ನೆರವು ನಿಡಿದ್ದರಿಂದ ವೀರರಾಜೇಂದ್ರರ ಬಂಧನ ಬಹಳ ಸುಲಭವಾಗಿ ನಡೆದುಹೋಗುತ್ತದೆ.

ಬಂಧಿಸಲ್ಪಟ್ಟ ವೀರರಾಜೇಂದ್ರರು ಹಾಗೂ ಅವರ ಕುಟುಂಬ ಸದಸ್ಯರನ್ನು ಬ್ರಿಟಿಷರು ಮೊದಲಿಗೆ ವೆಲ್ಲೂರು ಜೈಲಿಗೆ ಅಟ್ಟುತ್ತಾರೆ. ನಂತರ ಅವರನ್ನು ಕಾಶಿಗೆ ಕಳುಹಿಸಿ, ಗೃಹ ಬಂಧನಕ್ಕೆ ಒಳಪಡಿಸುತ್ತಾರೆ. ಬ್ರಿಟಿಷರು ಅನಾಯಾಸವಾಗಿ ಕೊಡಗಿನ ಕೋಟೆ ಮೇಲೆ ತಮ್ಮ ಧ್ವಜ ಹಾರಿಸುತ್ತಾರೆ. ದೇಶದ್ರೋಹಿಗಳ ನೆರವಿನಿಂದಲೇ ರಾಜನನ್ನು ಬಂಧಿಸಿ ಅಧಿಕಾರ ಗಳಿಸಿಕೊಂಡ ಬ್ರಿಟಿಷರು ಇವೆಲ್ಲವನ್ನು ಗುಟ್ಟಾಗಿ ಇಡುವುದರಲ್ಲಿ ಯಶಸ್ವಿಯಾಗುತ್ತಾರೆ.

ಮೈಸೂರು ಜಿಲ್ಲೆಯ ಪರಿಯಾಪಟ್ಟಣ, ಹಾಸನದ ಸಖಲೇಶಪುರ, ಪುತ್ತೂರು, ಸುಳ್ಯ, ಪಾಣಿಮಂಗಳೂರು, ಕುಕ್ಕೆ ಸುಬ್ರಮಣ್ಯ, ಬೆಳ್ಳಾರೆ ಇವೆಲ್ಲವನ್ನು ಒಳಗೊಂಡ ಕೊಡಗು ಪ್ರಾಂತ್ಯದಲ್ಲಿ ಬೇಸಾಯವೇ ಮುಖ್ಯ ಕಸುಬು. ರೈತಾಪಿ ಜನರೇ ಕೃಷಿಯಿಂದ ಈ ಸೀಮೆಯನ್ನು ಸಂಪದ್ಭರಿತಗೊಳಿಸಿದ್ದರು. ತಾವು ನೆಮ್ಮದಿ ಕಂಡುಕೊಳ್ಳುವುದರ ಜೊತೆಗೆ ಆಡಳಿತಾಂಗವನ್ನು ಸೂಕ್ತ ತೆರಿಗೆ ನೀಡುವ ಮೂಲಕ ಶ್ರೀಮಂತಗೊಳಿಸಿದ್ದರು.

ನಿಸರ್ಗದತ್ತವಾದ ಇಡೀ ಕೊಡಗು ಪ್ರಾಂತ್ಯವನ್ನೇ ತಮ್ಮದೆಂದು ಘೋಷಿಸಿಕೊಂಡ ಬ್ರಿಟಿಷರು ತಮ್ಮ ಮೂಗಿನ ನೇರಕ್ಕೆ ಕಾಯಿದೆಗಳನ್ನು ಹೇರಲು ಮೊದಲಿಟ್ಟರು. ರೈತರ ಮೇಲೆ ಹೆಚ್ಚಿನ ತೆರಿಗೆ ಹೇರಲು ಮುಂದಾದರು. ಅವರಿಗೆ ತಾವು ಬೆಳೆದ ದವಸ ಧಾನ್ಯಗಳನ್ನು ತೆರಿಗೆ ರೂಪದಲ್ಲಿ ಕೊಡುತ್ತಿದ್ದ ರೈತರಿಗೆ ನಗದು ರೂಪದಲ್ಲೇ ತೆರಿಗೆ ಸಂದಾಯ ಮಾಡಬೇಕೆಂಬ ಆದೇಶ ಹೊರಟಿತು.

ರೈತ ಸಮುದಾಯಕ್ಕೆ ಇದೊಂದು ದೊಡ್ಡ ಹೊಡೆತ. ಅವರಿಗೆ ತಮ್ಮನ್ನು ಆಳುತ್ತಿದ್ದ ರಾಜನನ್ನು ಬ್ರಿಟಿಷರು ಮೋಸದಿಂದ ಬಂಧಿಸಿ ಸೆರೆಗೆ ಕಳುಹಿಸಿದ್ದಾರೆಂಬ ಗುಟ್ಟು ರಟ್ಟಾಗಲು ಹೆಚ್ಚು ಕಾಲ ಬೇಕಾಗಲಿಲ್ಲ. ರೈತರು ಪ್ರತಿರೋಧ ತೋರಲು ಸಜ್ಜಾಗತೊಡಗಿದರು. ಬಿಳಿಯರ ವಿರುದ್ಧ ಸಿಡಿದೇಳಲು ನಿರ್ಧಾರ ಕೈಗೊಂಡ ರೈತರಿಗೆ ಮುಂದಾಳುಗಳಾಗಿ ಹುಲಿಕೊಂದ ನಂಜಯ್ಯ, ಪುಟ್ಟ ಬಸವರಾಜು, ಮಾಚಯ್ಯ, ಕುತ್ತುಕುಡಿಯಾ, ಚೆಟ್ಟಿ ಕುಡಿಯಾ ಮುಂತಾದವರು ಸಿದ್ಧರಾಗುವರು. ಇವರಿಗೆ ಗುಡ್ಡೆ ಮನೆ ಅಪ್ಪಯ್ಯಗೌಡರ ನೇತೃತ್ವವೂ ಸಿಗುತ್ತದೆ.

ಕೊಡಗು ಸೀಮೆಯಲ್ಲಿ ಸಂಘಟಿತ ಗುಂಪು ಓಡಾಡುತ್ತ ಬ್ರಿಟಿಷರ ವಿರುದ್ಧ ದಂಗೆ ಏಳಲು ಜನರನ್ನು ಪ್ರೇರೇಪಿಸಲು ತೊಡಗುತ್ತದೆ. ರಾಜ ಪ್ರತಿನಿಧಿಯೊಬ್ಬನ ಮುಂದಾಳತ್ವದಲ್ಲಿ ದಂಗೆ ನಡೆದರೆ ಇನ್ನೂ ಹೆಚ್ಚು ಪರಿಣಾಮಕಾರಿ ಎಂಬ ನಿರ್ಧಾರಕ್ಕೆ ಬಂದ ಸಂಘಟಿತ ಗುಂಪು ಪುಟ್ಟ ಬಸವರಾಜುಗೆ ಕಲ್ಯಾಣ ಸ್ವಾಮಿ ಎಂಬ ಹೊಸ ನಾಮಧೇಯದೊಂದಿಗೆ ದಂಗೆಯ ಮಂಚೂಣಿಗೆ ತರುವುದು ನಡೆಯುತ್ತದೆ.

ಬ್ರಿಟಿಷರ ದುರಾಡಳಿತವನ್ನು ವಿರೋಧಿಸುತ್ತಿರುವ ಹೊತ್ತಿನಲ್ಲೇ ಬ್ರಿಟಿಷರ ಪರವಾಗಿ ಕೆಲಸ ಮಾಡುವವರು ಇದ್ದರು. ದಂಗೆಗೆ ಸಿದ್ಧಗೊಳ್ಳುವ ವಿಚಾರಗಳನ್ನು ಇವರು ಬ್ರಿಟಿಷರಿಗೆ ಮುಟ್ಟಿಸುತ್ತಿರುವುದು ಗೊತ್ತಾಗಿ ಕೆಲವು ಮಂದಿಗೆ ಶಿಕ್ಷೆ ವಿಧಿಸಲು ದಂಗೆ ನಾಯಕರು ಹಿಂದೆ ಬೀಳಲಿಲ್ಲ.

ಕೊಡಗು ಪ್ರಾಂತ್ಯದ ಎಲ್ಲ ಭಾಗಗಳಿಂದ ಜನರನ್ನು ದಂಗೆಗೆ ತಯಾರುಗೊಳಿಸಿ ಎಲ್ಲರೂ ಸಂಘಟಿತರಾಗಿ ಸುಳ್ಯದಲ್ಲಿ ಸೇರಿ ಮುಂದಿನ ಕಾರ್ಯಾಚರಣೆಗೆ ಹೊರಡುತ್ತಾರೆ. 1838 ರ ಮಾರ್ಚ್ 5 ರಂದು ಯುಗಾದಿ ಹಬ್ಬ, ಅಂದೇ ಬ್ರಿಟಿಷರನ್ನು ಬಗ್ಗು ಬಡಿಯಲು ಕಾರ್ಯಾಚರಣೆ ಶುರುವಾಗುತ್ತದೆ.

ಗುಡ್ಡೆ ಮನೆ ಅಪ್ಪಯ್ಯ ಗೌಡರ ಮುಂದಾಳತ್ವದ ಗುಂಪು ಕೊಡಗಿನತ್ತ ಹೊರಡುತ್ತದೆ. ಉತ್ಸಾಹಿ ಸ್ವಾತಂತ್ರ್ಯ ಸಮರ ಪಡೆಗಳು ಬೆಳ್ಳಾರೆ ಕೋಟೆಯನ್ನು ವಶಮಾಡಿಕೊಳ್ಳುತ್ತದೆ. ಪುತ್ತೂರಿನ ಖಜಾನೆಯನ್ನು ವಶಮಾಡಿಕೊಳ್ಳುತ್ತದೆ. ಮಡಿಕೋಟೆಗೂ ಲಗ್ಗೆ ಹಾಕಲು ಸೇನೆ ತೀರ್ಮಾನ ಮಾಡುತ್ತದೆ.

ಕಲ್ಯಾಣ ಸ್ವಾಮಿ ನೇತೃತ್ವದ ಸಮರಪಡೆ ಪುತ್ತೂರು ಖಜಾನೆ ವಶಪಡಿಸಿಕೊಂಡು ಮುಂದುವರೆದು ಮಂಗಳೂರಿನಲ್ಲೂ ಖಜಾನೆ ವಶಮಾಡಿಕೊಂಡು ಅಲ್ಲಿನ ಸೆರೆಯಲ್ಲಿದ್ದ ಖೈದಿಗಳನ್ನೂ ಬಿಡುಗಡೆಗೊಳಿಸುತ್ತದೆ. ಅಲ್ಲಿದ್ದ ಬ್ರಿಟಿಷ್ ಸೇನೆಯನ್ನು ಹೊಡೆದುರುಳಿಸುವಲ್ಲಿ ಕಲ್ಯಾಣಸ್ವಾಮಿ ಯಶಸ್ವಿಯಾಗುತ್ತಾರೆ.

ಮಂಗಳೂರಿನಲ್ಲಿ ಕಲ್ಯಾಣಸ್ವಾಮಿ ಅಧಿಕಾರಕ್ಕೆ ಬರುತ್ತಾರೆ. ಈ ವಿಚಾರ ತಿಳಿದ ಆಸುಪಾಸಿನ ಪ್ರದೇಶಗಳಲ್ಲಿ ಬ್ರಿಟಿಷರಿಗೆ ಪ್ರತಿರೋಧ ವ್ಯಕ್ತಮಾಡುತ್ತಿದ್ದ ಅಸಂಖ್ಯರು ಸೇನೆ ಸೇರಲು ಉತ್ಸಾಹ ತೋರುತ್ತಾರೆ.

ಈ ವಿಚಾರಗಳನ್ನು ತಿಳಿದುಕೊಂಡ ಬ್ರಿಟಿಷರು ಅತ್ಯಾಧುನಿಕ ಶಸ್ತ್ರಗಳನ್ನೊಳಗೊಂಡ ಸೇನೆಯನ್ನು ಕೊಡಗು ಸೀಮೆಗೆ ಕಳಿಸುತ್ತಾರೆ. ಕೊಡಗಿನ ಸ್ವಾತಂತ್ರ್ಯ ಪಡೆಗಳಿಗೂ– ಬ್ರಿಟಿಷ್ ಸೇನೆಗೂ ಯುದ್ಧ ನಡೆಯುತ್ತದೆ. ಆಂಗ್ಲರಿಗೆ ಕೆಲವು ಸ್ವಾಮಿಗಳ ಸಹಾಯ ಸಿಗುತ್ತದೆ. ಹೀಗಾಗಿ ಸ್ವತಂತ್ರ್ಯ ಪಡೆ ಮಣಿಯುತ್ತದೆ. ಹಲವರು ಸೆರೆಯಾಗುತ್ತಾರೆ. ಸ್ವಾತಂತ್ರ್ಯ ಪಡೆಗಳ ದಳಪತಿಗಳಾಗಿದ್ದ ಚೆಟ್ಟಿಕುಡಿಯಾ, ಹುಲಿಕೊಂದ ನಂಜಯ್ಯ, ಚಟ್ಟಿಕುಡಿಯರು ಬ್ರಿಟಿಷರಿಂದ ಬಂಧಿತರಾಗಿ ಮಡಿಕೇರಿ ಜೈಲು ಸೇರುತ್ತಾರೆ.

ಗುಡ್ಡೆ ಮನೆ ಅಪ್ಪಯ್ಯಗೌಡರೊಂದಿಗೆ ಸೆರೆಸಿಕ್ಕ ಕೃಷ್ಣಯ್ಯ, ಚೆಟ್ಟಿಕುಡಿಯಾ, ನಾಲ್ಕುನಾಡು ಉತ್ತು, ಶಾಂತಳಿಯ ಮಲ್ಲಯ್ಯ ಕುರ್ತುಕುಡಿಯರ ವಿರುದ್ಧ ಆಂಗ್ಲರು ವಿಚಾರಣೆ ನಡೆಸಿ ವಿವಿಧ ರೀತಿಯ ಶಿಕ್ಷೆಗಳನ್ನು ವಿಧಿಸುತ್ತಾರೆ.

ಗುಡ್ಡೆಮನೆ ಅಪ್ಪಯ್ಯ ಗೌಡರನ್ನು ಬಹಿರಂಗವಾಗಿ ನೇಣಿಗೇರಿಸಬೇಕೆಂದು ತೀರ್ಪು ಬರುತ್ತದೆ. ಅತ್ತ ಮಂಗಳೂರಿನಲ್ಲಿ ಕಲ್ಯಾಣಸ್ವಾಮಿ, ಲಿಂಗರಾಜ ಅಣ್ಣೇಗೌಡ ಮತ್ತು ರಮಗೌಡರನ್ನು ಗಲ್ಲಿಗೇರಿಸುತ್ತಾರೆ.

ಬ್ರಿಟಿಷ್ ಕೋರ್ಟ್ ತೀರ್ಪಿಗೆ ಅನುಸಾರವಾಗಿ ಸ್ವಾತಂತ್ರ್ಯ ಸಮರ ಸೇನಾನಿ ಗುಡ್ಡೆ ಮನೆ ಅಪ್ಪಯ್ಯ ಗೌಡರನ್ನು ಮಡಿಕೇರಿ ಕೋಟೆ ಮುಂಭಾಗದಲ್ಲಿ ಬಹಿರಂಗವಾಗಿ 1837ರ ಅಕ್ಟೋಬರ್ 30 ರಂದು ನೇಣಿಗೇರಿಸಲಾಗುತ್ತದೆ.

ಆಂಗ್ಲರ ದುರಾಡಳಿತದ ವಿರುದ್ಧ ಸಿಡಿದೆದ್ದ ಕೊಡಗಿನ ಪ್ರಾಂತ್ಯದ ಹೋರಾಟವನ್ನು ಭಾರತೀಯ ಸ್ವಾತಂತ್ರ್ಯ ಸಮರ ಇತಿಹಾಸದಲ್ಲಿ ಸರಿಯಾಗಿ ಗುರುತಿಸಿಲ್ಲ. ಹೆಚ್ಚಾಗಿ ರೈತರೇ ಇದ್ದ ಕೊಡಗು ಸ್ವಾತಂತ್ರ್ಯ ಸಮರ ಕೆಲಕಾಲ ಆಂಗ್ಲರ ನಿದ್ದೆಗೆಡಿಸಿದ್ದಂತು ನಿಜ. ಮಂಗಳೂರನ್ನು ಬಿಳಿಯರ ಕೈಯಿಂದ ಬಿಡಿಸಿ ಹದಿಮೂರು ದಿನ ಆಳಿದ್ದು ಕೊಡಗಿನ ಸಮರ ಸೇನೆಯ ಹೆಗ್ಗಳಿಕೆ. ■



Downloaded From: www.kpscvaani.com




# ಸಾರಿಗೆ ಇಲಾಖೆಯಲ್ಲಿ ಆನ್‌ಲೈನ್ ಸೇವಾಸೌಲಭ್ಯ

**ಸಾರಿಗೆ ಇಲಾಖೆಯಲ್ಲಿ ವಾಹನ ನೋಂದಣಿ, ಕಲಿಕಾ ಚಾಲನಾ ಪರವಾನಗಿ ಸೇರಿದಂತೆ ಸುಮಾರು ೩೦ ಸೇವೆಗಳನ್ನು ಆನ್‌ಲೈನ್ ಮೂಲಕ ಪಡೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.**

ಬಿ.ಜಿ.ಪೂರ್ಣಿಮ

ರಾಜ್ಯ ಸರ್ಕಾರವು ಜನಸ್ನೇಹಿ ಸೇವೆಯಡೆಗೆ ಕಾರ್ಯಪ್ರವೃತ್ತವಾಗಿದೆ. ಹಾಗಾಗಿ ಸಾರಿಗೆ ಇಲಾಖೆಯಲ್ಲಿಯೂ ಆರ್.ಟಿ.ಓ ಕಚೇರಿಗಳಿಗೆ ಭೇಟಿ ನೀಡದೆಯೇ ಸಂಪರ್ಕರಹಿತವಾಗಿ ವಾಹನ ಮಾರಾಟಗಾರರ ಹಂತದಲ್ಲಿಯೇ ನೋಂದಣಿ ಪ್ರಕ್ರಿಯೆ, ರಹದಾರಿ ಹಾಗೂ ಚಾಲನಾ ಪರವಾನಗಿ ಸೇರಿದಂತೆ ಇನ್ನಿತರ ಸೇವೆಗಳನ್ನು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಪಡೆದುಕೊಳ್ಳುವ ಸೇವಾ ಸೌಲಭ್ಯ ವ್ಯವಸ್ಥೆಯನ್ನು ಒದಗಿಸಿದೆ.

ಇತ್ತೀಚೆಗೆ ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ಸಾರಿಗೆ ಇಲಾಖೆಯ ಈ ಸೇವೆಗಳಿಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಸಾರಿಗೆ ಸಚಿವರಾದ ಬಿ. ಶ್ರೀರಾಮುಲು ಅವರು ಸಾರಿಗೆ ಇಲಾಖೆಯು ಜನಸ್ನೇಹಿ ಸೇವೆಯಡೆಗೆ ಕಾರ್ಯಪ್ರವೃತ್ತವಾಗಿರುವುದನ್ನು ಹಂಚಿಕೊಂಡರು. ಆನ್‌ಲೈನ್ ಸೇವೆಯನ್ನು ಒದಗಿಸುವುದರಿಂದ ಸಾರ್ವಜನಿಕರಿಗೆ ಸಮಯದ ಉಳಿತಾಯ ಮತ್ತು ಅನವಶ್ಯಕ ಓಡಾಟ ತಪ್ಪುತ್ತದೆ. ಈಗ ಸಾರಿಗೆ ಇಲಾಖೆಯಲ್ಲಿ ಸುಮಾರು 30 ಸೇವೆಗಳನ್ನು ಆನ್‌ಲೈನ್‌ನಲ್ಲಿ ಒದಗಿಸುತ್ತಿರುವುದರಿಂದ ಸಾರ್ವಜನಿಕರಿಗೆ ಬಹಳ ಅನುಕೂಲವಾಗಿದೆ.

ಸಾರಥಿ ಸೇವೆಗಳಲ್ಲಿ ಕಲಿಕಾ ಚಾಲನಾ ಪರವಾನಗಿ ಮತ್ತು ಹೊಸ ವರ್ಗಗಳನ್ನು ಸೇರ್ಪಡೆಗೊಳಿಸುವಿಕೆ, ಕಲಿಕಾ ಚಾಲನಾ ಪರವಾನಗಿ ಪತ್ರದಲ್ಲಿ ಹೆಸರು ಬದಲಾವಣೆ, ವಿಳಾಸ ಬದಲಾವಣೆ, ನಕಲು ಕಲಿಕಾ ಚಾಲನಾ ಪರವಾನಗಿ ಪತ್ರ, ನಿರ್ವಾಹಕ ಚಾಲನಾ ಪರವಾನಗಿ ಪತ್ರ, ನಿರ್ವಾಹಕ ಚಾಲನಾ ಪರವಾನಗಿ ಪತ್ರದಲ್ಲಿ ಹೆಸರು ಮತ್ತು ವಿಳಾಸ ಬದಲಾವಣೆ, ನಕಲು ನಿರ್ವಾಹಕ ಚಾಲನಾ ಪರವಾನಗಿ ಪತ್ರ, ನಕಲು ನಿರ್ವಾಹಕ ಚಾಲನಾ ಪರವಾನಗಿ ನವೀಕರಣ, ಅಂತರರಾಷ್ಟ್ರೀಯ ಚಾಲನಾ ಪರವಾನಗಿ, ಚಾಲನಾ ಪರವಾನಗಿ ಪತ್ರ ವಹಿ ಮುಂತಾದ ಸೇವೆಗಳನ್ನು ಆನ್‌ಲೈನ್ ಮೂಲಕ ಮಾಡಿಕೊಳ್ಳುವ ಅವಕಾಶ ಕಲ್ಪಿಸಲಾಗಿದೆ.

ವಾಹನ ಸೇವೆಗಳಲ್ಲಿ ಮಾರಾಟಗಾರರ ಹಂತದಲ್ಲಿ ಹೊಸ ವಾಹನಗಳ ನೋಂದಣಿ (ಸಾರಿಗೇತರ ವಾಹನ), ವಾಹನ ಮಾಲೀಕತ್ವ ವರ್ಗಾವಣೆ, ನೋಂದಣಿ ಪ್ರಮಾಣಪತ್ರದಲ್ಲಿ ವಿಳಾಸ ಬದಲಾವಣೆ, ನಕಲು ನೋಂದಣಿ ಪ್ರಮಾಣಪತ್ರ, ವಾಹನದ ಕಂತು-ಕರಾರು ಒಪ್ಪಂದ ನಮೂದು, ವಾಹನದ ಕಂತು-ಕರಾರು ಮುಂದುವರಿಕೆ, ತಾತ್ಕಾಲಿಕ ನೋಂದಣಿ ಪ್ರಮಾಣಪತ್ರ, ಆಕ್ಷೇಪಣಾ ರಹಿತ ಪ್ರಮಾಣಪತ್ರ (ಎನ್ ಒ ಸಿ)/ ತೀರುವಳಿ ಪ್ರಮಾಣಪತ್ರ (ಸಿಸಿ) ನೀಡುವಿಕೆ, ವಾಹನ ಬಿ ವಹಿ, ಮೋಟಾರು ಕ್ಯಾಬ್ ರಹದಾರಿ ನೀಡುವಿಕೆ, ಸರಕು ಸಾಗಣೆ ವಾಹನ ರಹದಾರಿ ನೀಡುವಿಕೆ, ಮೋಟಾರು ಕ್ಯಾಬ್ ರಹದಾರಿ ನವೀಕರಣ, ಸರಕು ಸಾಗಣೆ ರಹದಾರಿ ನವೀಕರಣ, ಆಟೋರಿಕ್ಷಾ ಕ್ಯಾಬ್ ನಕಲು ರಹದಾರಿ ನವೀಕರಣ, ನಕಲು ರಹದಾರಿ ನೀಡುವಿಕೆ (ಸರಕು ಸಾಗಣೆ ಮತ್ತು ಮೋಟಾರು ಕ್ಯಾಬ್), ಆಟೋರಿಕ್ಷಾ ಕ್ಯಾಬ್ ನಕಲು ರಹದಾರಿ ನೀಡುವಿಕೆ, ರಹದಾರಿ ರದ್ಧತಿ (ರಹದಾರಿ ಅಧ್ಯರ್ಪಣ), ರಾಷ್ಟ್ರೀಯ ರಹದಾರಿ ಅಧಿಕಾರಿತ ಪತ್ರ, ಕರ್ನಾಟಕ ರಾಜ್ಯದ ವಾಹನಗಳ ಅಧಿಕಾರಿತ ಪತ್ರ ನೀಡುವಿಕೆ/ ನವೀಕರಣ ಇವೇ ಮುಂತಾದ ಸೇವೆಗಳು ಆನ್‌ಲೈನ್‌ನಲ್ಲಿ ದೊರೆಯಲಿದೆ.

ಈ ಎಲ್ಲಾ ಆನ್‌ಲೈನ್ ಸೇವೆಗಳನ್ನು ಆನ್‌ಲೈನ್ ಸೇವಾ ಕಾರ್ಯವಿಧಾನಗಳನ್ನು ಅನುಸರಿಸಿ ಅರ್ಜಿ ಸಲ್ಲಿಸಿ, ನಿಗದಿತ ಶುಲ್ಕ ಹಾಗೂ ತೆರಿಗೆ ಪಾವತಿಸಿ ಪಡೆಯ ಬಹುದು. ಇನ್ನೂ ಹೆಚ್ಚಿನ ಮಾಹಿತಿ ಮತ್ತು ವಿವರಗಳಿಗೆ https://parivahan.gov.in ಗೆ ಭೇಟಿ ನೀಡಬಹುದು.



Downloaded From: www.kpscvaani.com



# ಸಾಲ ಮರುಪಾವತಿಗಾಗಿ ಮೊಬೈಲ್ ಆ್ಯಪ್

**ರಾಜ್ಯದಲ್ಲೇ ಪ್ರಪ್ರಥಮ ಬಾರಿಗೆ ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮವು ಫಲಾನುಭವಿಗಳು ಇದ್ದ ಸ್ಥಳದಿಂದಲೇ ಸುಲಲಿತವಾಗಿ ಮೊಬೈಲ್ ಮೂಲಕ ಸಾಲ ಮರುಪಾವತಿ ಮಾಡಬಹುದಾದಂತಹ ಮೊಬೈಲ್ ಆ್ಯಪ್ ಸೇವೆಯನ್ನು ಒದಗಿಸಿದೆ.**

ಎಸ್. ಹರ್ಷಿತಾ



ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮ ಸ್ಥಾಪನೆಯಾಗಿ ಕೆಲವು ವರ್ಷಗಳೇ ಕಳೆದಿದ್ದರೂ ಕೂಡ ಆಧುನಿಕ ತಂತ್ರಜ್ಞಾನಕ್ಕೆ ಅನುಗುಣವಾಗಿ ತನ್ನ ಕಾರ್ಯವೈಖರಿಯನ್ನು ಬದಲಾವಣೆ ಮಾಡಿಕೊಳ್ಳುತ್ತಾ ನಿಗಮವು ಜನಸ್ನೇಹಿಯಾಗಿ ಹೆಜ್ಜೆ ಇರಿಸಿದೆ.

ನಿಗಮದಿಂದ ಸೇವೆಯನ್ನು ಪಡೆದುಕೊಳ್ಳುವ ಫಲಾನುಭವಿಗಳು ತಾವು ಇರುವ ಸ್ಥಳದಿಂದಲೇ ಸುಲಲಿತವಾಗಿ ಸಾಲ ಮರುಪಾವತಿಯನ್ನು ಮಾಡಬಹುದಾದ ಮೊಬೈಲ್ ಆ್ಯಪ್ ಸೇವೆಯನ್ನು ಒದಗಿಸಿದೆ. ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ಇತ್ತೀಚೆಗಷ್ಟೇ ಈ ಸೇವೆಗೆ ಚಾಲನೆ ನೀಡಿದ್ದಾರೆ.



Downloaded From: www.kpscvaani.com

ನಿಗಮವು ಪ್ರಾರಂಭಿಕ ಹಂತದಿಂದಲೂ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಆಹ್ವಾನಿಸಿದ್ದಲ್ಲದೇ, ಅರ್ಜಿಗಳ ಪರಿಶೀಲನೆ ಮತ್ತು ಪ್ರಕ್ರಿಯೆಯನ್ನು ಸಹ ಆನ್‌ಲೈನ್ ಮೂಲಕವೇ ಮಾಡಿರುವುದು ನಿಜಕ್ಕೂ ಶ್ಲಾಘನೀಯ ವಿಷಯವಾಗಿದೆ. ಪೇಪರ್ ಲೆಸ್ ಆಫೀಸ್ ಮಾಡುವ ಉದೇಶದಿಂದ ಸರ್ಕಾರಿ ಕಚೇರಿಗಳಲ್ಲಿ ಪ್ರಾರಂಭಿಸಲಾಗಿರುವ ಇ-ಆಫೀಸ್ ಅನ್ನು ನಿಗಮವು ಈಗಾಗಲೇ ಅಳವಡಿಸಿಕೊಂಡಿದೆ.

ಅಂದಿನ ನಿಗಮದ ಅಧ್ಯಕ್ಷರಾಗಿದ್ದ ಮತ್ತು ಪ್ರಸ್ತುತ ಎಂ.ಎಲ್.ಸಿ ಆಗಿರುವ ಡಿ.ಎಸ್. ಅರುಣ್ ಅವರು ಪ್ರವಾಸ ಕೈಗೊಂಡ ಸಂದರ್ಭದಲ್ಲಿ ನಿಗಮದಿಂದ ಸಾಲ-ಸೌಲಭ್ಯಗಳನ್ನು ಪಡೆದಿರುವ ಫಲಾನುಭವಿಗಳು ಸಾಲ ಮರುಪಾವತಿಸಲು ಪ್ರತಿ ತಿಂಗಳು ದೂರದ ಜಿಲ್ಲಾ ಕಚೇರಿಗಳಿಗೆ ಹೋಗಿ ಬರಲು ಸಮಯ ಮತ್ತು ಆರ್ಥಿಕ ವೆಚ್ಚವಾಗುವುದಾಗಿ ತಮ್ಮ ಅಳಲನ್ನು ತೋಡಿಕೊಂಡಿದ್ದರು. ಹಾಗಾಗಿ ಫಲಾನುಭವಿಗಳ ಈ ತೊಂದರೆಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಅಧ್ಯಕ್ಷರು ಕಾರ್ಯಪ್ರವೃತ್ತರಾಗುವ ಮೂಲಕ ಮೊಬೈಲ್ ಆ್ಯಪ್ ಹಾಗೂ ಆರ್ಯ ವೈಶ್ಯ ಪೋರ್ಟಲ್ ಅನ್ನು ಸಿದ್ಧಪಡಿಸಲು ಕಾರಣ ಕರ್ತರಾದರು.

ಫಲಾನುಭವಿಗಳು ಸಾಲ ಮರುಪಾವತಿಯನ್ನು ಫೋನ್ ಪೇ, ಗೂಗಲ್ ಪೇ, ಪೇಟಿಎಂ ಇವೇ ಮುಂತಾದ ಆ್ಯಪ್‌ಗಳ ಮೂಲಕ ಮಾಡುವಂತೆ ಈ ಮೊಬೈಲ್ ಆ್ಯಪ್ ಸೇವೆಯನ್ನು ಸಿದ್ಧಪಡಿಸಲಾಗಿದೆ. ಅದಲ್ಲದೇ ರೇಜರ್ ಪೇ ಮತ್ತು ಕೇಂದ್ರ ಸರ್ಕಾರದ ಪೇ-ಗೌ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಂಡು ಫಲಾನುಭವಿಗಳಿಗೆ ಅನುಕೂಲವಾಗುವಂತೆ ಕಡಿಮೆ ದರದಲ್ಲಿ ಸೇವಾ ಶುಲ್ಕವನ್ನು ನಿಗದಿಪಡಿಸಲಾಗಿದೆ.

ಇನ್ನು ನಿಗಮದ ಕಾರ್ಯಕ್ರಮಗಳ ವ್ಯಾಪಕ ಪ್ರಚಾರಕ್ಕಾಗಿ ಹಾಗೂ ಆರ್ಯ ವೈಶ್ಯ ಸಮುದಾಯದವರ ಅಂಕಿ-ಅಂಶಗಳ ಮಾಹಿತಿಯನ್ನು ಸಂಗ್ರಹಿಸುವ ಸಂಬಂಧ "ಆರ್ಯ ವೈಶ್ಯ ಪೋರ್ಟಲ್" ಅನ್ನು ಸಿದ್ಧಪಡಿಸಿ ಚಾಲನೆ ನೀಡಲಾಗಿದೆ. ಅಲ್ಲದೆ ಪರಿಸರ ಪ್ರೇಮಿಯಾಗಿದ್ದ ಡಿ.ಎಸ್




**ನಿಗಮದ ಯೋಜನೆಗಳ ಮಾಹಿತಿಯನ್ನು ಡಿಜಿಟಲೈಸ್ ಮೂಲಕ ವ್ಯಾಪಕ ಪ್ರಚಾರ ನೀಡುವ ಸಲುವಾಗಿ ಆರ್ಯ ವೈಶ್ಯ ಪೋರ್ಟಲ್ ಅನ್ನು ಸಿದ್ಧಪಡಿಸಲಾಗಿದೆ. ಮುಂದಿನ ದಿನಗಳಲ್ಲಿ ಸಮುದಾಯದವರಿಗೆ ಅವಶ್ಯಕವಿರುವ ನೂತನ ಯೋಜನೆಗಳನ್ನು ರೂಪಿಸಲು ಅನುಕೂಲವಾಗುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಆರ್ಯ ವೈಶ್ಯ ಸಮುದಾಯದವರ ಅಂಕಿ ಅಂಶಗಳ (ಕುಟುಂಬದ ವಿವರ, ವಿಳಾಸ, ಅಕ್ಷರಸ್ಥರು/ಅನಕ್ಷರಸ್ಥರು, ಲಿಂಗ, ಉದ್ಯೋಗಸ್ಥರು, ನಿರುದ್ಯೋಗಿಗಳು, ವ್ಯಾಪಾರಸ್ಥರು ಇತ್ಯಾದಿ) ಮಾಹಿತಿಗಳನ್ನು ಸಂಗ್ರಹಿಸಲಾಗುತ್ತಿದೆ. ಹಾಗಾಗಿ ಆರ್ಯ ವೈಶ್ಯ ಸಮುದಾಯದವರು ತಮ್ಮ ಮೊಬೈಲ್‌ನಿಂದಲೇ ನಿಗಮದ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಆರ್ಯ ವೈಶ್ಯ ಪೋರ್ಟಲ್ ಮೂಲಕ ತಮ್ಮ ಎಲ್ಲಾ ಮಾಹಿತಿಯನ್ನು ಸಲ್ಲಿಸಬಹುದು.**

**"ಸಾಲ ಮರುಪಾವತಿಯನ್ನು ಫೋನ್ ಪೇ, ಗೂಗಲ್ ಪೇ, ಪೇಟಿಎಂ ಇವೇ ಮುಂತಾದ ಆ್ಯಪ್‌ಗಳ ಮೂಲಕವಲ್ಲದೆ, ರೇಜರ್ ಪೇ ಮತ್ತು ಕೇಂದ್ರ ಸರ್ಕಾರದ ಪೇ-ಗೌ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಂಡು ಕಡಿಮೆ ದರದ ಸೇವಾ ಶುಲ್ಕದೊಂದಿಗೆ ಈ ಮೊಬೈಲ್ ಆ್ಯಪ್ ಸೇವೆಯನ್ನು ಒದಗಿಸಲಾಗಿದೆ."**

ಅರುಣ್ ಅವರು ನಿಗಮವನ್ನು ಸಂಪೂರ್ಣವಾಗಿ ಕಾಗದ ರಹಿತ ಮಾಡಿದ್ದಾರೆ.

ನಿಗಮದ ಸಹಾಯವಾಣಿಯಲ್ಲೂ ಸಹ ಫಲಾನುಭವಿಗಳು ಆನ್‌ಲೈನ್ ಮೂಲಕ ಸಾಲ ಮರುಪಾವತಿಗೆ ಅವಕಾಶ ಕಲ್ಪಿಸುವಂತೆ ಬೇಡಿಕೆ ಸಲ್ಲಿಸಿದರಿಂದ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ದೀಪಶ್ರೀ.ಕೆ ಅವರು ಅಧ್ಯಕ್ಷರ ಪ್ರೋತ್ಸಾಹದ ಮೇರೆಗೆ ನಿಗಮದ ಲೆಕ್ಕಪರಿಶೋಧಕ ರೊಂದಿಗೆ ಸತತವಾಗಿ 10 ತಿಂಗಳ ಕಾಲ ಸಮಾಲೋಚನೆ ನಡೆಸಿದ ಪ್ರಯತ್ನದ ಫಲವೇ ವಿ.ಎಸ್.ಇನ್ಫೋಟೆಕ್ ಸಂಸ್ಥೆಯ ಸಹಯೋಗದಿಂದ ಮೊಬೈಲ್ ಆ್ಯಪ್ ಅನ್ನು ಸಿದ್ಧಪಡಿಸಲಾಗಿದೆ.

ಸ್ವಯಂ ಉದ್ಯೋಗ ನೇರ ಸಾಲ ಯೋಜನೆಯಡಿ ಸಾಲ ಪಡೆದಂತಹ ಫಲಾನುಭವಿಗಳು ಸಾಲದ ಮೊತ್ತವನ್ನು ಮರುಪಾವತಿಸಲು ಆಂಡ್ರಾಯ್ಡ್ ಅಪ್ಲಿಕೇಷನ್ ಸಿದ್ಧಪಡಿಸಿದ್ದು, ಪ್ಲೇಸ್ಟೋರ್‌ನಲ್ಲಿ ಕೆ.ಎ.ಸಿ.ಡಿ.ಸಿ ಎಂದು ಲಭ್ಯವಿರುತ್ತದೆ. ಫಲಾನುಭವಿಗಳು ಸದರಿ ನೂತನ ಆ್ಯಪ್ ಮುಖಾಂತರ ಸಾಲದ ಕಂತನ್ನು ಆನ್‌ಲೈನ್ ಪೇಮೆಂಟ್‌ಗಳಾದ ಯು.ಪಿ.ಐ, ಕ್ರೆಡಿಟ್‌ಕಾರ್ಡ್, ಡೆಬಿಟ್ ಕಾರ್ಡ್, ನೆಟ್ ಬ್ಯಾಂಕಿಂಗ್ ಇತ್ಯಾದಿ ಮುಖಾಂತರ ಮರುಪಾವತಿಸಬಹುದಾಗಿದೆ. ಫಲಾನುಭವಿಗಳಿಗೆ ಅನುಕೂಲವಾಗುವಂತೆ ಕಡಿಮೆ ದರದಲ್ಲಿ ಸೇವಾ ಶುಲ್ಕವನ್ನು ನಿಗಧಿ ಪಡಿಸಲಾಗಿರುವುದರಿಂದ ಫಲಾನುಭವಿಗಳು ಈ ಸೌಲಭ್ಯವನ್ನು ಬಳಸಿಕೊಳ್ಳುವ ಮೂಲಕ ತಮ್ಮ ಸಮಯ ಮತ್ತು ಆರ್ಥಿಕ ವೆಚ್ಚವನ್ನು ಉಳಿತಾಯ ಮಾಡಿಕೊಳ್ಳಬಹುದು.



Downloaded From: www.kpscvaani.com







## ತುರ್ತು ಆರೋಗ್ಯ ಪರಿಸ್ಥಿತಿ ಎದುರಿಸಲು

# ಕೋವಿಡ್ ಕ್ರಾಶ್ ಕೋರ್ಸ್

ಬಿ.ಎಸ್. ಪಲ್ಲವಿ

**ಕೊರೊನಾ ರೂಪಾಂತರಿಯಾದ ಓಮಿಕ್ರಾನ್ ಸೇರಿದಂತೆ ಎಲ್ಲಾ ತುರ್ತು ಆರೋಗ್ಯ ಪರಿಸ್ಥಿತಿಯನ್ನು ಎದುರಿಸಲು ಸಜ್ಜಾಗುವ ನಿಟ್ಟಿನಲ್ಲಿ ಕೆ.ಎಸ್.ಡಿ.ಸಿಯು ಖಾಸಗಿ ಸಹಯೋಗದೊಂದಿಗೆ ಕ್ರಾಶ್ ಕೋರ್ಸ್‌ಗಳನ್ನು ನಡೆಸುತ್ತಿದೆ.**

ಕೋವಿಡ್-19 ಮೊದಲ ಹಾಗೂ ಎರಡನೇ ಅಲೆ ನಂತರ ರೂಪಾಂತರಿ ಓಮಿಕ್ರಾನ್ ಕಳವಳವುಂಟು ಮಾಡಿದೆ. ಕೋವಿಡೋತ್ತರದಲ್ಲಿ ಆರೋಗ್ಯ ವಲಯದಲ್ಲಿ ಎಚ್ಚರಿಕೆ ಗಂಟೆ ಭಾರಿಸುತ್ತಿದೆ. ಪ್ರತಿನಿತ್ಯ ಹೊಸ ಹೊಸ ಸೋಂಕು, ಆರೋಗ್ಯ ಸಮಸ್ಯೆಗಳು ಜಗತ್ತಿನಾದ್ಯಂತ ಕಾಣಿಸಿಕೊಳ್ಳುತ್ತಿವೆ. ಭವಿಷ್ಯದ ಆರೋಗ್ಯ ತುರ್ತು ಪರಿಸ್ಥಿತಿ ಎದುರಿಸಲು ಸನ್ನದ್ಧಗೊಳ್ಳುವುದು ಅಗತ್ಯವಾಗಿದೆ. ಕೋವಿಡ್ ಸಾಂಕ್ರಾಮಿಕದ ನಂತರ ತರಬೇತಿ ಪಡೆದ ನುರಿತ ಆರೋಗ್ಯ ಕಾರ್ಯಕರ್ತರಿಗೆ ಬೇಡಿಕೆ ಹೆಚ್ಚುತ್ತಿದೆ.

ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಆರೋಗ್ಯ ವಿಪತ್ತುಗಳನ್ನು ಎದುರಿಸಲು ಸಜ್ಜಾಗುತ್ತಿದೆ. ಹಾಗೆಂದ ಮಾತ್ರಕ್ಕೆ ಚಿಕಿತ್ಸೆಗಾಗಿ ವೈದ್ಯರನ್ನು, ಅರೆ ವೈದ್ಯಕೀಯ ಸಿಬ್ಬಂದಿಯನ್ನು ಏಕಾಏಕಿ ಸೃಷ್ಟಿಸಲು ಸಾಧ್ಯವಿಲ್ಲ. ನರ್ಸಿಂಗ್ ಶಿಕ್ಷಣಕ್ಕೆ ತನ್ನದೇ ಆದ ನಿಯಮಾವಳಿಗಳಿದ್ದು, ಬಿಗಿಯಾದ ಪಠ್ಯ ಕ್ರಮ ಅನುಸರಿಸಲಾಗುತ್ತದೆ. ವೈದ್ಯಕೀಯ ಶಿಕ್ಷಣಕ್ಕೆ ಶಾಸನಬದ್ಧ ವೈದ್ಯಕೀಯ ಮಂಡಳಿ ಇದೆ. ಆದರೆ ವೈದ್ಯಕೀಯ ಸಹಾಯಕರನ್ನು ರೂಪಿಸಲು ಇಂತಹ ಕಟ್ಟುಪಾಡುಗಳಿಲ್ಲ. ಹೀಗಾಗಿಯೇ ನುರಿತ ಕುಶಲ ಸಂಪನ್ಮೂಲವನ್ನು ರಾಜ್ಯದಲ್ಲೂ ನಿರ್ಮಿಸಲಾಗುತ್ತಿದೆ.

ಅನಿರೀಕ್ಷಿತ ಆರೋಗ್ಯ ಸಂಬಂಧಿ ಸಮಸ್ಯೆಗಳನ್ನು ಎದುರಿಸುವ ಸಲುವಾಗಿಯೇ ಪ್ರಧಾನಮಂತ್ರಿ ಕೌಶಲ್ಯ ವಿಕಾಸ ಯೋಜನೆಯಡಿ ದೇಶಾದ್ಯಂತ ಆರೋಗ್ಯ ಕಾರ್ಯಕರ್ತರನ್ನು ಸಜ್ಜುಗೊಳಿಸಲಾಗುತ್ತಿದೆ. ರಾಜ್ಯದಲ್ಲಿ 8ನೇ ತರಗತಿ ಓದಿದವರು, ಎಸ್.ಎಸ್.ಎಲ್.ಸಿ ಉತ್ತೀರ್ಣ, ಅನುತ್ತೀರ್ಣರಾದವರು. ಪಿಯುಸಿ ಶಿಕ್ಷಣ ಪಡೆದವರಿಗೆ ಕೆ.ಎಸ್.ಡಿ.ಸಿ ಹಾಗೂ ಖಾಸಗಿ ಸಹಯೋಗದಲ್ಲಿ ಕೋವಿಡ್ ಕ್ರಾಶ್ ಕೋರ್ಸ್‌ಗಳನ್ನು ಪ್ರತಿಯೊಂದು ಜಿಲ್ಲೆಯಲ್ಲೂ ಆರಂಭಿಸಲಾಗುತ್ತಿದೆ. ನರ್ಸಿಂಗ್ ಕೋರ್ಸ್‌ಗಳನ್ನು ಮಾಡಲು ಸಾಧ್ಯವಾಗದ ಮಹಿಳೆಯರು ಒಳಗೊಂಡಂತೆ ಎಲ್ಲರಿಗೂ ಈ ಕೋರ್ಸ್ ಬದುಕು ಕಟ್ಟಿಕೊಡುತ್ತಿದೆ. ಸರ್ಕಾರದ ಜತೆ ಖಾಸಗಿ ವಲಯ ಕೂಡ ಕೈಜೋಡಿಸಿದ್ದು, ಆರೋಗ್ಯ ವಲಯದಲ್ಲಿ ಭವ್ಯ ಭವಿಷ್ಯದತ್ತ ಮುನ್ನಡೆಯಲು ಸಹಕಾರಿಯಾಗಿವೆ.

ರಾಷ್ಟ್ರೀಯ ಕೌಶಲ್ಯ ಅರ್ಹತಾ ನೀತಿ – ಎನ್.ಎಸ್.ಕ್ಯೂ.ಎಫ್ ಸಂಬಂಧಿ ಕೋರ್ಸ್‌ಗಳನ್ನು ಲಾಕ್ ಡೌನ್ ಸಮಯದಲ್ಲಿ ಆನ್ ಲೈನ್ ಮೂಲಕ ಆಯೋಜಿಸಲಾಗಿತ್ತು. ಈಗ ಕೆ.ಎಸ್.ಡಿ.ಸಿ ನಿರುದ್ಯೋಗ ಯುವ ಜನತೆಗೆ ತರಬೇತಿ ನಂತರ ಉದ್ಯೋಗ ಕೊಡಿಸಲು ಜಾಗತಿಕ ಮಟ್ಟದ ಎಂ.ಎನ್.ಸಿ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಈ ಪೈಕಿ ವಿಪ್ರೋ– ಜಿ.ಇ ಪ್ರಮುಖ ಕಂಪನಿಯಾಗಿದೆ. ಪ್ರತಿಯೊಂದು ಜಿಲ್ಲೆಯಲ್ಲಿ ಕೆ.ಎಸ್.ಡಿ.ಸಿ ಮತ್ತು ವಿಪ್ರೋ–ಜಿಇ ಮತ್ತಿತರ ಖಾಸಗಿ ಸಹಭಾಗಿತ್ವದಲ್ಲಿ "ಕೋವಿಡ್ ಕ್ರಾಶ್ ಕೋರ್ಸ್" ಗಳನ್ನು ಆರಂಭಿಸಲಾಗುತ್ತಿದೆ.

ಕೇಂದ್ರ ಕೌಶಲ್ಯ ಅಭಿವೃದ್ಧಿ ಮಂತ್ರಾಲಯವು ಕೆ.ಎಸ್.ಡಿ.ಸಿ ವತಿಯಿಂದ ರಾಜ್ಯದಲ್ಲಿ 15,000 ಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ ತರಬೇತಿ ಜತೆಗೆ ಉದ್ಯೋಗ ನೀಡುವ ಗುರಿ ಹೊಂದಲಾಗಿದೆ. ಇದನ್ನು ಸಾಧಿಸಲು ಈಗಾಗಲೇ 24 ಡಿ.ಟಿ.ಸಿ ಜಿಲ್ಲಾ ತರಬೇತಿ ಕೇಂದ್ರಗಳಲ್ಲಿ ತರಬೇತಿ ಕೋರ್ಸ್‌ಗಳು ನಡೆಯುತ್ತಿವೆ. ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಸಕ್ತಿ ತೋರುವ ಆಸ್ಪತ್ರೆಗಳಿಗೂ ಅವಕಾಶ ಕಲ್ಪಿಸಿದ್ದು, ಇದರಿಂದ ಆಸ್ಪತ್ರೆಗಳಿಗೂ ಅನುಕೂಲವಾಗಲಿದೆ.



Downloaded From: www.kpscvaani.com




ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ವಿಪ್ರೋ ಜಿಇ ಸಹಭಾಗಿತ್ವದಲ್ಲಿ ಬೆಂಗಳೂರು ನಗರ, ಗ್ರಾಮಾಂತರ, ಬೀದರ್, ಬಳ್ಳಾರಿ, ಬೆಳಗಾವಿ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹುಬ್ಬಳ್ಳಿ- ಧಾರವಾಡ, ಹಾಸನ, ಮೈಸೂರು, ತುಮಕೂರು, ಕೋಲಾರ, ಕೊಡಗು, ವಿಜಯಪುರ, ರಾಮನಗರ, ಮಂಡ್ಯ, ಶಿವಮೊಗ್ಗ, ಕಲಬುರಗಿ, ದಕ್ಷಿಣ ಕನ್ನಡ, ಉತ್ತರ ಕನ್ನಡ, ರಾಯಚೂರು ಮತ್ತು ಗದಗ ಜಿಲ್ಲೆಯಲ್ಲಿ ತರಬೇತಿ ಕೇಂದ್ರಗಳನ್ನು ತೆರೆಯಲಾಗಿದೆ. ವಿಪ್ರೊ ಟೆಕ್ನಾಲಜೀಸ್ ಭಾರತೀಯ ಮಾಹಿತಿ ತಂತ್ರಜ್ಞಾನ ವಲಯದ ಪ್ರಮುಖ ಸಂಸ್ಥೆ. ಇದರ ಸಹಭಾಗಿತ್ವದಿಂದ ಆರೋಗ್ಯ ಕ್ಷೇತ್ರದಲ್ಲೂ ತಂತ್ರಜ್ಞಾನ ಅಳವಡಿಕೆಗೆ ಸಹಕಾರಿಯಾಗಲಿದ್ದು. ಹೊಸ ಮನ್ವಂತರಕ್ಕೆ ನಾಂದಿಯಾಗುವ ನಿರೀಕ್ಷೆ ಮೂಡಿಸಿದೆ.

ಇಲ್ಲಿ 3 ತಿಂಗಳ ಕಾಲ “ನೋಡಿ ಮಾಡಿ ಕಲಿ” ಎನ್ನುವ ತತ್ವದ ಆಧಾರದ ಮೇಲೆ ತರಬೇತಿ ನೀಡಲಾಗುತ್ತಿದೆ. ಕೋವಿಡ್ ಚಿಕಿತ್ಸೆ ಮತ್ತು ಪ್ರಾಮಾಣೀಕೃತ ಸೇವೆ ಒದಗಿಸಲು ಸಹಕಾರಿಯಾಗಲಿದೆ. ಜತೆಗೆ ಮೂರು ತಿಂಗಳ ಕಾಲ ಪ್ರಾಯೋಗಿಕ ವೃತ್ತಿ ತರಬೇತಿ ಸಂದರ್ಭದಲ್ಲಿ ಪ್ರತಿಯೊಬ್ಬ ತರಬೇತುದಾರರಿಗೆ ಪ್ರತಿ ದಿನಕ್ಕೆ 125 ರೂಪಾಯಿ ಶಿಷ್ಯ ವೇತನ ನೀಡಲಾಗುತ್ತದೆ. ತರಬೇತಿ ಸಮಯದಲ್ಲಿ ಊಟ, ಅಗತ್ಯವಿರುವವರಿಗೆ ವಸತಿ ಸೌಲಭ್ಯ ಕಲ್ಪಿಸಲಾಗಿದೆ. ಶಿಬಿರಾರ್ಥಿಗಳನ್ನು ಆರೋಗ್ಯ ಮತ್ತು ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮ ಶೀಲತೆ ಹಾಗೂ ಜೀವನೋಪಾಯ ಇಲಾಖೆಗಳು ಸೇರಿ ನೇರ ಸಮಾಲೋಚನೆ ಮೂಲಕ ಆಯ್ಕೆ ಮಾಡಿಕೊಳ್ಳುತ್ತಿವೆ.

ಬೆಂಗಳೂರು ಗ್ರಾಮಾಂತರದ ಹೊಸಕೋಟೆಯಲ್ಲಿ ವಿಪ್ರೋ- ಜಿಇ ಸಹಯೋಗದಲ್ಲಿ ಸುಸಜ್ಜಿತ ತರಬೇತಿ ಕೇಂದ್ರದಲ್ಲಿ ನುರಿತ ಮಾಸ್ಟರ್ ಟ್ರೈನರ್‌ಗಳು ತರಬೇತಿ ನೀಡುತ್ತಿದ್ದಾರೆ. ವಿಶೇಷವೆಂದರೆ ಇಲ್ಲಿ ಮಹಿಳೆಯರಿಗೇ ಹೆಚ್ಚು ಆದ್ಯತೆ ದೊರೆತಿದೆ. ರೋಗಿಗಳನ್ನು ಆರೈಕೆ ಮಾಡುವ ವಿಧಾನ, ವೈದ್ಯರಿಗೆ ಎಲ್ಲಾ ಹಂತಗಳಲ್ಲೂ ಸೂಕ್ತವಾಗಿ ನೆರವಾಗುವ, ಆರೋಗ್ಯ ವಿಪತ್ತಿನಲ್ಲಿ ಹೇಗೆ ಸಜ್ಜಾಗಿರಬೇಕು, ರೋಗಿಗಳನ್ನು ಆರೈಕೆ ಮಾಡಬಹುದಾದ ಎಲ್ಲಾ ಹಂತಗಳ ಬಗ್ಗೆಯೂ ಇಲ್ಲಿ ತರಬೇತಿ ನೀಡಲಾಗುತ್ತಿದೆ. ವಿಶೇಷ ಎಂದರೆ ತರಬೇತಿ ಪಡೆದ ಎಲ್ಲರಿಗೂ ಶೇ 100 ರಷ್ಟು ಉದ್ಯೋಗ ದೊರೆಯಲಿದೆ ಎನ್ನುವುದು ಈ ಕೋರ್ಸ್‌ನ ಮತ್ತೊಂದು ವಿಶೇಷ. ಕರ್ನಾಟಕವಷ್ಟೇ ಅಲ್ಲದೇ ದೇಶ ವಿದೇಶಗಳಲ್ಲೂ ಅರೆ ವೈದ್ಯಕೀಯ ಸಿಬ್ಬಂದಿಗೆ ಇಲ್ಲಿ ವಿಪುಲ ಅವಕಾಶಗಳಿವೆ.

ಇಲ್ಲಿ ತರಬೇತಿ ಪಡೆಯುತ್ತಿರುವ ಪ್ರಭುಸ್ವಾಮಿ ಮಾತನಾಡಿ, ಈ ಕೋರ್ಸ್‌ನಿಂದ ವಿದೇಶಗಳಲ್ಲಿ ಕೆಲಸ ಮಾಡುವ ಕನಸು ನನಸು ಮಾಡಿಕೊಳ್ಳಬಹುದಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ಮನೆಗಳಲ್ಲಿಯೂ ರೋಗಿಗಳ ಆರೈಕೆಯನ್ನು ವೃದ್ಧಿಸಿಕೊಳ್ಳಬಹುದು ಎನ್ನುತ್ತಾರೆ.

ವಿಪ್ರೋ ಸಂಸ್ಥೆಯಿಂದ ತರಬೇತಿಗೆ ನಿಯೋಜಿಸಿರುವ ಅಧಿಕಾರಿ ವಂಶಿರಾಜ್ ಮಾಹಿತಿ ನೀಡಿ, 350 ಗಂಟೆಗಳ ಅವಧಿಯ ಥಿಯರಿ ತರಬೇತಿಯ ಜೊತೆಗೆ ಮೂರು ವರ್ಷಗಳ ನರ್ಸಿಂಗ್ ತರಬೇತಿ ಮಾದರಿಯಲ್ಲಿಯೇ ಪ್ರಾಯೋಗಿಕ ತರಬೇತಿಯನ್ನು ಇಲ್ಲಿ ಸಮಗ್ರವಾಗಿ ನೀಡಿ ವೃತ್ತಿಪರರನ್ನು ಸಜ್ಜುಗೊಳಿಸಲಾಗುತ್ತದೆ. ಹಾಗಾಗಿ ಇಲ್ಲಿ ತರಬೇತಿ ಪಡೆದವರನ್ನು ಉದ್ಯೋಗಕ್ಕೆ ತೆಗೆದುಕೊಳ್ಳಲು ಈಗಾಗಲೇ ಬೇಡಿಕೆ ಬರುತ್ತಿದೆ ಎಂದು ಅಭಿಪ್ರಾಯಪಡುತ್ತಾರೆ.

ಚಾಮರಾಜನಗರದಲ್ಲಿಯೂ ಇದೇ ರೀತಿಯ ಮತ್ತೊಂದು ತರಬೇತಿ ಕೇಂದ್ರ ಭರಣಿ ಫೌಂಡೇಷನ್ ನಿಂದ ನಡೆಯುತ್ತಿದೆ. ಗಡಿ ಜಿಲ್ಲೆಯಲ್ಲಿ ಈ ತರಬೇತಿ ಕೇಂದ್ರವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ವರ್ಚುವಲ್ ಮೂಲಕ ಇತ್ತೀಚೆಗೆ ಉದ್ಘಾಟನೆ ಮಾಡಿರುವುದು ವಿಶೇಷವಾಗಿದೆ. ಎನ್.ಎಸ್.ಡಿ.ಸಿ ಮಾರ್ಗಸೂಚಿಗೆ ಅನುಗುಣವಾಗಿ ಭರಣಿ ಫೌಂಡೇಷನ್‌ನಲ್ಲಿ ತರಬೇತಿ ನೀಡಲಾಗುತ್ತಿದೆ. ಮೊದಲ ಹಂತದಲ್ಲಿ ಆರು ಕೋರ್ಸ್‌ಗಳನ್ನು ವಿನ್ಯಾಸಗೊಳಿಸಿ ತರಬೇತಿ ನೀಡಲಾಗುತ್ತಿದೆ. ತರಬೇತಿ ಹಂತದ ಮಾಹಿತಿಯನ್ನು ಸ್ಕಿಲ್ ಇಂಡಿಯಾ ಪೋರ್ಟಲ್‌ಗೆ ಅಪ್‌ಲೋಡ್ ಮಾಡಲಾಗುತ್ತಿದೆ.

ಭರಣಿ ಫೌಂಡೇಷನ್‌ನಲ್ಲಿ ಥಿಯರಿ ತರಬೇತಿ ನಂತರ ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಆನ್‌ಜಾಬ್ ಟ್ರೈನಿಂಗ್ ಪಡೆಯುತ್ತಿದ್ದಾರೆ. ರೋಗಿಗಳ ನೋಂದಣಿ, ಆರೈಕೆ, ಪ್ರಯೋಗಾಲಯಗಳಲ್ಲಿ ವಿವಿಧ ಪರೀಕ್ಷೆಗಳಿಗೆ ರೋಗಿಗಳನ್ನು ತಜ್ಞರ ಬಳಿಗೆ ಕಳುಹಿಸುವ ವಿಧಾನ, ವಾರ್ಡ್‌ಗಳಲ್ಲಿ ಬೆಡ್‌ಗಳನ್ನು ಸಿದ್ಧಪಡಿಸುವ, ರೋಗಿಗಳಿಗೆ ಆಹಾರ ಸೇವಿಸಲು ನೆರವಾಗುವ, ರಕ್ತದೊತ್ತಡ, ಮಧುಮೇಹ ತಪಾಸಣೆ, ವಾರ್ಡ್‌ಗಳಲ್ಲಿ ಶುಚಿತ್ವ ಕಾಪಾಡುವ, ವೈದ್ಯರಿಗೆ ನೆರವಾಗುವುದು ಹೀಗೆ ಎಲ್ಲಾ ಹಂತಗಳಲ್ಲಿಯೂ ತರಬೇತಿ ನೀಡಲಾಗುತ್ತಿದೆ.

ಮೈಸೂರಿನ ಕೆ.ಎಸ್.ಡಿ.ಸಿಯ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಸಿ. ಜಗನ್ನಾಥ್ ಮಾತನಾಡಿ, ಇಲ್ಲಿ ಕಲಿತವರಿಗೆ ಕೇಂದ್ರ ಸರ್ಕಾರದಿಂದ ಪ್ರಮಾಣ ಪತ್ರ ದೊರೆಯಲಿದ್ದು, ವಿದೇಶಗಳಲ್ಲಿಯೂ ಉದ್ಯೋಗ ಪಡೆಯಲು ಸಹಕಾರಿಯಾಗಲಿದೆ. ಈಗಾಗಲೇ ಕೆನಡಾದಿಂದ ಉದ್ಯೋಗಕ್ಕಾಗಿ ಬೇಡಿಕೆ ಬರುತ್ತಿದೆ. ಬರುವ ದಿನಗಳಲ್ಲಿ ಆರೋಗ್ಯ ಕಾರ್ಯಕತರ ಬೇಡಿಕೆ ವ್ಯಾಪಕವಾಗಿ ವೃದ್ಧಿಸಲಿದೆ ಎನ್ನುತ್ತಾರೆ.

ವೈದ್ಯಕೀಯ ಕ್ಷೇತ್ರದಲ್ಲಿ ಮಾನವೀಯ ಸೇವೆ ಸಲ್ಲಿಸಲು ಹಾಗೂ ಬರುವ ದಿನಗಳಲ್ಲಿ ರೂಪಾಂತರಿ ಓಮಿಕ್ರಾನ್ ಸೇರಿದಂತೆ ಎಲ್ಲಾ ರೀತಿಯ ಆರೋಗ್ಯ ಸವಾಲುಗಳನ್ನು ಎದುರಿಸಲು ತರಬೇತಿ ಪಡೆದ ಈ ಆರೋಗ್ಯ ಪಡೆ ಜೀವ ಮತ್ತು ಜೀವನೋಪಾಯವನ್ನು ರಕ್ಷಿಸಲು ಸಜ್ಜಾಗುತ್ತಿದೆ.



Downloaded From: www.kpscvaani.com



# ರೂಫ್‌ಟಾಪ್ ಸೋಲಾರ್ ಉತ್ತೇಜನ ನೀಡುತ್ತಿರುವ ಸರಕಾರ

**ರಾಜ್ಯದಲ್ಲಿ 2021–22 ನೇ ಸಾಲಿಗೆ ಸೌರ ಚಾವಣಿ (ರೂಫ್ ಟಾಪ್ ಸೋಲಾರ್) ಮೂಲಕ 37.20 ಕೋಟಿ ಯುನಿಟ್ ವಿದ್ಯುತ್ ಉತ್ಪಾದನೆ ಮಾಡುವ ಗುರಿಯನ್ನು ಸರಕಾರವು ಹೊಂದಿದೆ.**

ಡಾ. ವರಪ್ರಸಾದ್ ರಾವ್

ನವೀಕರಿಸಬಹುದಾದ ಇಂಧನ, ಇಂಧನ ಸಂರಕ್ಷಣೆ, ಶಕ್ತಿ ಸಂವರ್ಧನೆ ಹಾಗೂ ಪರಿಸರ ಕಾಪಾಡುವುದು ನಮ್ಮೆಲ್ಲರ ಕರ್ತವ್ಯ. ಸುಸ್ಥಿರ ಅಭಿವೃದ್ಧಿ ಎಲ್ಲರ ಗುರಿಯಾಗಬೇಕು. ಹಾಗೆಯೇ ಯಾವುದೇ ಅಭಿವೃದ್ಧಿ ಕಾರ್ಯವು ಪರಿಸರಕ್ಕೆ ಧಕ್ಕೆಯಾಗದಂತೆ ಎಚ್ಚರ ವಹಿಸುವುದೂ ಮುಖ್ಯ. ಪರಿಸರ ಸ್ನೇಹಿ ವಿಚಾರದಲ್ಲಿ ಸೋಲಾರ್ ವಿದ್ಯುತ್ ಉತ್ಪಾದನೆ ವ್ಯವಸ್ಥೆ ಪ್ರಮುಖವಾದುದು. ಹಾಗಾಗಿ ರೂಫ್‌ಟಾಪ್ ಸೋಲಾರ್ ವ್ಯವಸ್ಥೆಗೆ ಕೇಂದ್ರ, ರಾಜ್ಯ ಸರಕಾರಗಳಿಂದ ಉತ್ತೇಜನ ನೀಡಲಾಗುತ್ತಿದೆ.

ದೇಶದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕಲ್ಲಿದ್ದಲಿನ ಮೂಲಕ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಮುಂದೊಂದು ದಿನ ಈ ಸಂಪನ್ಮೂಲ ಬರಿದಾಗುತ್ತದೆ. ಆಗ ಮುಂದೇನು ಮಾಡಬೇಕು? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದಕ್ಕೆ ಪರ್ಯಾಯವಾಗಿ ಸೌರಶಕ್ತಿಯಿಂದ ವಿದ್ಯುತ್ ಉತ್ಪಾದನೆ ಮಾಡುವುದರಿಂದ ಸಮಸ್ಯೆ ನಿವಾರಣೆಯಾಗುತ್ತದೆ. ಜೊತೆಗೆ ಇದು ಪರಿಸರ ಸ್ನೇಹಿಯಾಗಿದೆ. ನವೀಕರಿಸಬಹುದಾದ ಇಂಧನ, ಸೌರಶಕ್ತಿ, ಪವನಶಕ್ತಿ ಮೂಲಕ ವಿದ್ಯುತ್ ಉತ್ಪಾದನೆಗೆ ಜಗತ್ತಿನ ಬಹುತೇಕ ರಾಷ್ಟ್ರಗಳು ಮಹತ್ವ ನೀಡುತ್ತಿವೆ. ಸೌರಶಕ್ತಿಯಿಂದ ಮನೆ ಬಳಕೆ, ಕೃಷಿ ಚಟುವಟಿಕೆಗೆ ವಿದ್ಯುತ್ ಬಳಸಬಹುದು. ಈ ಕ್ರಮಗಳ ಅನುಷ್ಠಾನದಿಂದ ದೇಶದಲ್ಲಿ ಗಣನೀಯ ಪ್ರಮಾಣದ ಇಂಗಾಲ ಆಮ್ಲ ಹೊರಸೂಸುವಿಕೆಯನ್ನು ತಡೆಯಬಹುದು.

ಕರ್ನಾಟಕವು ಸರಾಸರಿ ವಾರ್ಷಿಕ ಬಿಸಿಲೂಡಿಕೆ ಪ್ರಮಾಣ 5.55 ಕಿ.ವ್ಯಾ.ಘ/ಚ.ಮೀ/ದಿನ ಹೊಂದಿದೆ. ಕೊಡಗನ್ನು (5 ದಿಂದ 5.5 ಕಿ.ವ್ಯಾ.ಘ/ಚ.ಮೀ/ದಿನ) ಹೊರತುಪಡಿಸಿ ರಾಜ್ಯದ ಎಲ್ಲಾ ಜಿಲ್ಲೆಗಳು ವಾರ್ಷಿಕ 5.5 ರಿಂದ 6.5 ಕಿ.ವ್ಯಾ.ಘ/ಚ.ಮೀ/ದಿನ ಬಿಸಿಲೂಡಿಕೆ ಹೊಂದಿವೆ. ಇದು ಸೌರ ಶಕ್ತಿ ಆಧಾರಿತ ವಿದ್ಯುತ್ ಉತ್ಪಾದನೆಯ ಬೇಡಿಕೆಯನ್ನು ಪೂರೈಸಬಲ್ಲದು ಎಂಬುದನ್ನು ತೋರಿಸುತ್ತದೆ.

ರಾಜ್ಯದ ಇಂದಿನ ಮತ್ತು ಭವಿಷ್ಯತ್ತಿನ ವಿದ್ಯುತ್ ಬೇಡಿಕೆಯನ್ನು ಪೂರೈಸಲು ವಿಕೇಂದ್ರೀಕೃತ, ಮೇಲ್ಛಾವಣಿ ಉತ್ಪಾದನೆಗಾಗಿ ಸರ್ಕಾರದ ನೆರವು ಮತ್ತು ಪ್ರೋತ್ಸಾಹವು ಗಣನೀಯವಾಗಿ ಕೊಡುಗೆ ನೀಡುತ್ತದೆ. ಪ್ರತಿ ಮನೆಯ ಮೇಲ್ಛಾವಣಿಗಳಲ್ಲಿ ವಿಕೇಂದ್ರೀಕೃತ ವಿದ್ಯುತ್ ಉತ್ಪಾದನೆಯನ್ನು ಪ್ರೋತ್ಸಾಹಿಸುತ್ತದೆ.

ರೂಫ್‌ಟಾಪ್ ಸೋಲಾರ್ ಯೋಜನೆ



Downloaded From: www.kpscvaani.com



ಅಳವಡಿಕೆಯಲ್ಲಿ ಕರ್ನಾಟಕ ಉತ್ತಮ ಅವಕಾಶಗಳನ್ನು ಹೊಂದಿರುವ ರಾಜ್ಯವಾಗಿದೆ. ಹೀಗಾಗಿ ಈಗಾಗಲೇ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಿರುವ ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಕೆಲವು ಸರಕಾರಿ ಕಟ್ಟಡಗಳ ಮೇಲೆ ರೂಫ್‌ಟಾಪ್ ಸೋಲಾರ್ ವ್ಯವಸ್ಥೆ ಅಳವಡಿಕೆ ಯೋಜನೆ ರೂಪಿಸಿ ಜಾರಿಗೆ ತಂದಿದೆ. ಇದೇ ರೀತಿ ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮೀಣ ಭಾಗದಲ್ಲಿ 'ಸಮಗ್ರ ಸೋಲಾರ್ ನೀತಿ' ಜಾರಿಗೆ ತರುವ ಜೊತೆಗೆ ಅಮೃತ ಯೋಜನೆಯಡಿ ಸೋಲಾರ್ ಬೀದಿ ದೀಪ ವ್ಯವಸ್ಥೆಗೆ ಮುಂದಾಗಿದೆ.

ಗ್ರಾಮ ಪಂಚಾಯಿತಿಯ ಮೇಲ್ಛಾವಣಿಗಳ ಮೇಲೆ ಸೌರ ವಿದ್ಯುತ್ ಫಲಕ ಅಳವಡಿಸಿ ಪಂಚಾಯಿತಿಗಳಿಗೆ ಬೇಕಾದ ವಿದ್ಯುತ್ ಪಡೆಯುವುದು, ಗ್ರಾಮೀಣ ಪ್ರದೇಶದ ಮನೆಗಳಿಗೆ ಕನಿಷ್ಠ ಒಂದು ಸೋಲಾರ್ ಲೈಟ್ ಒದಗಿಸುವುದು ರಾಜ್ಯದ ಕೇಂದ್ರೀಕೃತ ಸೌರ ವಿದ್ಯುತ್ ಯೋಜನೆಯ ಉದ್ದೇಶವಾಗಿದೆ.

ರಾಷ್ಟ್ರೀಯ ಸೋಲಾರ್ ಮಿಷನ್‌ನ ಗುರಿಯಂತೆ ದೇಶದಲ್ಲಿ 2021-22ರ ವೇಳೆಗೆ ರೂಫ್‌ಟಾಪ್ ಸೋಲಾರ್ ವ್ಯವಸ್ಥೆಯಿಂದ 40,000 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಗುರಿ ಇರಿಸಿಕೊಳ್ಳಲಾಗಿದೆ. ರಾಜ್ಯದಲ್ಲಿ ಸರಕಾರದ ಸೌರಶಕ್ತಿ ನೀತಿ 2014-21 ರ ಅನ್ವಯ 2021ರ ವೇಳೆಗೆ 2400 ಮೆ.ವ್ಯಾ. ರೂಫ್‌ಟಾಫ್ ಸೌರ ವಿದ್ಯುತ್ ಉತ್ಪಾದನೆಯ ಗುರಿ ಇರಿಸಿಕೊಳ್ಳಲಾಗಿದೆ. ಹಾಗೆಯೇ ರೂಫ್‌ಟಾಪ್ ಸೋಲಾರ್ ವ್ಯವಸ್ಥೆಯಲ್ಲಿ ಸರಕಾರಿ ವಿದ್ಯುತ್ ಕಂಪನಿಯ ವತಿಯಿಂದ 1,000 ಕಿಲೋ ವ್ಯಾಟ್ ಸಾಮರ್ಥ್ಯದ ಸೌರಶಕ್ತಿ ಉತ್ಪಾದನೆಯ ಗುರಿಯನ್ನು ಇರಿಸಿಕೊಳ್ಳಲಾಗಿದೆ.

ಗ್ರಾಮ ಪಂಚಾಯಿತಿ ಕಚೇರಿಯೂ ಸೇರಿದಂತೆ ಸರ್ಕಾರಿ ಕಚೇರಿ ಕಟ್ಟಡಗಳ ಚಾವಣಿಯಲ್ಲಿ ಸೌರ ಶಕ್ತಿ ವಿದ್ಯುತ್ ಉತ್ಪಾದನೆಗೆ ಕ್ರಮಕೈಗೊಳ್ಳಲಾಗುತ್ತಿದೆ. ಗುರಿ ತಲುಪಲು ಎಲ್ಲ ಪ್ರಯತ್ನ ಮಾಡಲಾಗುವುದು ಎಂದು ಇಂಧನ ಸಚಿವರಾದ ವಿ. ಸುನಿಲ್ ಕುಮಾರ್ ಅವರು ಹೇಳಿದ್ದಾರೆ.

ವಿಕಾಸಸೌಧದ ಚಾವಣಿಯ ಮೇಲೆ ಈಗಾಗಲೇ 100 ಕಿಲೋ ವ್ಯಾಟ್ ಸಾಮರ್ಥ್ಯದ ಸೌರ ಘಟಕಗಳನ್ನು ಅಳವಡಿಸಲಾಗಿದೆ. 13ನೇ ಹಣಕಾಸು ಆಯೋಗದ ಅನುದಾನದ ಅಡಿಯಲ್ಲಿ ವಿಧಾನಸೌಧ ಮತ್ತು ಎಂ.ಎಸ್ ಬಿಲ್ಡಿಂಗ್ ಚಾವಣಿಯ ಮೇಲೆ ಸೌರ ಶಕ್ತಿ ಘಟಕ ಅಳವಡಿಸಲು ಸಮೀಕ್ಷೆ ಕಾರ್ಯ ಪೂರ್ಣಗೊಂಡಿದೆ ಎಂದೂ ಸಚಿವರು ಮಾಹಿತಿ ನೀಡಿದ್ದಾರೆ.

ಗ್ರಾಮ ಪಂಚಾಯಿತಿಗಳಲ್ಲಿ ವಿದ್ಯುತ್ ಸಮಸ್ಯೆಯೇ ದೊಡ್ಡ ಸವಾಲು. ಪರ್ಯಾಯ ವ್ಯವಸ್ಥೆ ಇಲ್ಲದ ಕಾರಣ ಅಲ್ಲಿಯ ಕಚೇರಿ ಕೆಲಸ ಕಾರ್ಯಗಳು ಸ್ಥಗಿತಗೊಳ್ಳುತ್ತವೆ. ಆದರೆ ರಾಜ್ಯದ ಹಲವು ಗ್ರಾಮ ಪಂಚಾಯಿತಿ ಕಚೇರಿಗಳು ಈ ಸಮಸ್ಯೆಯಿಂದ ಈಗ ಹೊರಬಂದಿದ್ದು, ಸೋಲಾರ್ ವಿದ್ಯುತ್ ಉತ್ಪಾದನೆಯಿಂದ ಸ್ವಾವಲಂಬಿಯಾಗಿವೆ. ಅಲ್ಲದೆ ಹೆಚ್ಚುವರಿ ವಿದ್ಯುತ್ ಅನ್ನು ವಿದ್ಯುತ್ ಸರಬರಾಜು ನಿಗಮಕ್ಕೆ ಮಾರಾಟ ಮಾಡಲು ಮುಂದಾಗಿವೆ. 14ನೇ ಹಣಕಾಸು ಯೋಜನೆಯಡಿ ಪ್ರತಿ ಪಂಚಾಯಿತಿ ಕಚೇರಿಯಲ್ಲಿ 4 ಲಕ್ಷ 98 ಸಾವಿರ ರೂಪಾಯಿ ವೆಚ್ಚದಲ್ಲಿ ಪಂಚಾಯತಿ ಕಚೇರಿಗಳ ಮೇಲೆ ಸೋಲಾರ್ ಘಟಕಗಳನ್ನು ಸ್ಥಾಪಿಸಲಾಗಿದೆ. ಇದರಿಂದಾಗಿ ಗ್ರಾಮ ಪಂಚಾಯಿತಿ ಕಚೇರಿಗಳು ಪ್ರತಿನಿತ್ಯ ಸರಾಸರಿ 12 ಯೂನಿಟ್ ಸೋಲಾರ್ ವಿದ್ಯುತ್ ಉತ್ಪಾದಿಸಿ ಸ್ವಾವಲಂಬನೆ ಸಾಧಿಸಿವೆ.

ಟಿಸಿ ಸುಟ್ಟಾಗ ಮೂರ್ನಾಲ್ಕು ದಿನ ವಿದ್ಯುತ್ ಹೋಗುತಿತ್ತು. ಆನ್‌ಲೈನ್ ಇಂಟರ್‌ನೆಟ್ ಕೆಲಸಗಳು ನಿಂತು ಹೋಗುತಿತ್ತು. ಮಳೆ, ಗಾಳಿ, ಸಿಡಿಲು, ಮಿಂಚು ಸಂಭವಿಸಿದಾಗ ಯಾವುದೇ ವಿದ್ಯುತ್ ಚಾಲಿತ ಕೆಲಸಗಳು ಆಗುತ್ತಿರಲಿಲ್ಲ. ಆದರೆ ಈ ಸೌರ ವಿದ್ಯುತ್ ಪ್ರಾರಂಭವಾದಾಗಿನಿಂದ ಈ ಸಮಸ್ಯೆಗಳು ದೂರಾಗಿವೆ ಎಂಬುದು ಗ್ರಾಮ ಪಂಚಾಯಿತಿಯ ಹಲವು ಸದಸ್ಯರು, ಸಿಬ್ಬಂದಿಗಳ ಅಭಿಪ್ರಾಯ.

ಸೌರಶಕ್ತಿಯಿಂದ ಉತ್ಪಾದನೆಯಾದ ವಿದ್ಯುತ್ ಅನ್ನು ಗ್ರಾಮ ಪಂಚಾಯಿತಿ ಕಚೇರಿಯ ಕಂಪ್ಯೂಟರ್, ಬಲ್ಬ್, ಫ್ಯಾನ್, ನೀರಿನ ಫಿಲ್ಟರ್, ಹಾಗೂ ಪಂಚಾಯ್ತಿ ಆವರಣದ ಕೊಳವೆಬಾವಿಯ ನೀರೆತ್ತಲು ಬಳಸಿಕೊಳ್ಳಲಾಗುತ್ತಿದೆ. ಒಟ್ಟಿನಲ್ಲಿ ದಿನದ 24 ಗಂಟೆಯೂ ಸೌರ ವಿದ್ಯುತ್ ಬಳಸಿಕೊಂಡು ಗ್ರಾಮ ಪಂಚಾಯಿತಿಯ ಎಲ್ಲ ಕಾರ್ಯಗಳು ಸರಾಗವಾಗಿ ನಡೆಯುತ್ತಿದೆ.

ಮೊದಲ ಹಂತದಲ್ಲಿ ರಾಜ್ಯದ 6021 ಗ್ರಾಮ ಪಂಚಾಯಿತಿ ಕಚೇರಿಯ ಮೇಲ್ಛಾವಣಿಗಳ ಮೇಲೆ ಸೋಲಾರ್ ಪ್ಯಾನೆಲ್ ಅಳವಡಿಸಿ ದೈನಂದಿನ ಅಗತ್ಯತೆಗೆ ಬೇಕಾದ ವಿದ್ಯುತ್ ಪಡೆಯುವುದು, ಎರಡನೇ ಹಂತದಲ್ಲಿ ಎಲ್ಲಾ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಕೇಂದ್ರೀಕೃತ ಸೌರ ವಿದ್ಯುತ್ ಘಟಕಗಳ ಮೂಲಕ ಬೀದಿ ದೀಪಗಳಿಗೆ ಸೌರವಿದ್ಯುತ್ ಅಳವಡಿಸುವುದು. 3ನೇ ಹಂತದಲ್ಲಿ ರಾಜ್ಯದ ಗ್ರಾಮೀಣ ಪ್ರದೇಶದ ಪ್ರತಿ ಮನೆಗೆ ಕನಿಷ್ಠ ಒಂದು ಸೋಲಾರ್ ಲೈಟಿಂಗ್ ಒದಗಿಸುವುದು ಮತ್ತು 4ನೇ ಹಂತದಲ್ಲಿ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಕನಿಷ್ಠ ಒಂದು ಕುಡಿಯುವ ನೀರು ಪೂರೈಸುವ ಪಂಪ್‌ಸೆಟ್ಟಿಗೆ ವಿದ್ಯುತ್ ಮೂಲದಿಂದ ಸೌರ ವಿದ್ಯುತ್ ಒದಗಿಸುವುದು ಈ ನೀತಿಯ ಪ್ರಮುಖ ಆಶಯವಾಗಿದೆ. ಒಟ್ಟಿನಲ್ಲಿ ಗ್ರಾಮ ಪಂಚಾಯಿತಿಯಲ್ಲಿ ಜನರ ದೈನಂದಿನ ಕೆಲಸಗಳು ಸರಾಗವಾಗಿ ನಡೆಯಲು ಈ ಯೋಜನೆ ಸಹಕಾರಿಯಾಗಿದೆ.



Downloaded From: www.kpscvaani.com



# ಅಂತಃಕರಣದ ಅವದೂತ ಸ್ವಾಮಿ ವಿವೇಕಾನಂದ

ಪ್ರೊ॥ ರಾಜಕುಮಾರ ಬಡಿಗೇರ

**ಸ್ವಾಮಿ ವಿವೇಕಾನಂದರು ಭಾರತ ಕಂಡ ಓರ್ವ ಪ್ರಬುದ್ಧ ಚಿಂತಕ ಹಾಗೂ ಮಹಾ ಮಾನವತಾವಾದಿ. ಸಕಲ ಧರ್ಮಗಳ ಸಾರವನ್ನು ಅರಿತುಕೊಂಡ ಮೇಧಾವಿ**

ವಿವೇಕಾನಂದರ ಪಾಂಡಿತ್ಯಕ್ಕೆ ಜಗತ್ತಿನ ಪ್ರಖ್ಯಾತ ಚಿಂತಕರೆಲ್ಲರು ತಲೆ ಬಾಗಿದ್ದಾರೆ. ಹಾಗಾಗಿಯೇ ಜಗತ್ತಿನ ಶ್ರೇಷ್ಠ ಚಿಂತಕರ ಸಾಲಿನಲ್ಲಿ ಮೊದಲ ಸ್ಥಾನದಲ್ಲಿ ನಿಲ್ಲುವ ಇವರು, ಅಂತಃಕರಣದ ಅವದೂತ ಎಂದು ಕಂಗೊಳಿಸುತ್ತಾರೆ. ಏಕೆಂದರೆ ತಳ ವರ್ಗದ ವ್ಯಕ್ತಿಯಿಂದ ಮೇಲ್ವರ್ಗದ ವ್ಯಕ್ತಿಯವರೆಗೆ ಒಂದೇ ಅಂತಃಕರಣವನ್ನು ಹೊಂದಿದ್ದವರು.

ಕೋಲ್ಕತ್ತಾದಲ್ಲಿ 1863 ರ ಜನವರಿ 12 ರಂದು ಜನಿಸಿದ ವಿವೇಕಾನಂದರು ಬಾಲ್ಯದಲ್ಲಿಯೇ ದೀನ ಅನಾಥರ ಬಗೆಗೆ ಕನಿಕರ ಹೊಂದಿದ್ದರು. ಇವರ ಮೂಲ ಹೆಸರು ನರೇಂದ್ರನಾಥ ದತ್ತಾ. ಶ್ರೀಮಂತ ಬಂಗಾಳಿ ಕುಟುಂಬದಲ್ಲಿ ಜನಿಸಿದ್ದ ನರೇಂದ್ರನಾಥ ದತ್ತರು ದೇವರ ಬಗೆಗಿನ ಸಂಶಯಗಳನ್ನು ನಿವಾರಿಸಿಕೊಳ್ಳುವ ಸನ್ನಾಹದಲ್ಲಿದ್ದಾಗ ರಾಮಕೃಷ್ಣ ಪರಮಹಂಸರ ಸಂಪರ್ಕಕ್ಕೆ ಬಂದರು. ಕಾಲ ಕ್ರಮೇಣ ಅವರ ಶಿಷ್ಯರಾದರು. ಬಾಲ್ಯದಿಂದಲೇ ಆಧ್ಯಾತ್ಮದತ್ತ ಹೆಚ್ಚು ಒಲವು ಹೊಂದಿದ್ದ ಇವರು ಆ ಬಳಿಕ ಲೌಕಿಕ ಸುಖಗಳನ್ನು ತ್ಯಜಿಸಿ ಸನ್ಯಾಸಿಯಾದರು. ದಿನಗಳೆದಂತೆ ಮಾನವೀಯತೆಯ ಸೇವೆಗೆ ದೇಶ ಪರ್ಯಟನೆ ಆರಂಭಿಸಿದರು. ವಿವೇಕಾನಂದರು ಭಾರತೀಯ ವೇದಾಂತ ಮತ್ತು ಯೋಗದ ತತ್ವ ಚಿಂತನೆಗಳನ್ನು ಜಗತ್ತಿಗೆ ಪರಿಚಯಿಸುವಲ್ಲಿ ಪ್ರಮುಖರಾಗಿ ಹೊರಹೊಮ್ಮಿದರು.



Downloaded From: www.kpscvaani.com

1893 ರಲ್ಲಿ ಚಿಕಾಗೋದಲ್ಲಿ ನಡೆದ ವರ್ಲ್ಡ್ ಪಾರ್ಲಿಮೆಂಟ್ ಆಫ್ ರಿಲಿಜನ್ಸ್‌ನಲ್ಲಿ ಭಾರತದ ಅಧ್ಯಾತ್ಮದ ಕುರಿತು ಬಹಳ ಮಹತ್ವದ ಉಪನ್ಯಾಸ ನೀಡಿದರು. ಈ ಸಮಾರಂಭ ಮತ್ತು ಉಪನ್ಯಾಸ ಭಾರತದಲ್ಲಿನ ಧರ್ಮದ ಆಚರಣೆ ಮತ್ತು ಸಂಸ್ಕೃತಿಗಳ ವಿಶ್ಲೇಷಣೆಗಳ ವಿಷಯವನ್ನೊಳಗೊಂಡಿತ್ತು. ಈ ಪರಿಣಾಮವಾಗಿ ಪಾಶ್ಚಿಮಾತ್ಯರಲ್ಲಿ ವಿವೇಕಾನಂದರ ಬಗೆಗಿನ ನಿಲುವು ನಿರ್ಧಾರಗಳು ಬದಲಾದವು. ಸಮ್ಮೇಳನ ಪೂರ್ಣಗೊಳಿಸಿ ಮರಳಿ ಭಾರತಕ್ಕೆ ಬರುವ ಸಂದರ್ಭದಲ್ಲಿ ಹೆಣ್ಣು ಗಂಡು ಎನ್ನದೆ ಎಲ್ಲರೂ ಗೌರವ ಆದರಗಳಿಂದ ನಡೆದುಕೊಂಡರು. ಕೆಲವೊಂದಿಷ್ಟು ಜನರು ಶಿಷ್ಯರಾದರು.

ರಾಮಕೃಷ್ಣ ಪರಮಹಂಸರ ಪ್ರೀತಿಯ ಶಿಷ್ಯರಾದ ವಿವೇಕಾನಂದರು, ಭಾರತದ ಆಧ್ಯಾತ್ಮಿಕ ಸಂಪ್ರದಾಯದ ಸತ್ವವನ್ನು ವಿಶ್ವದಾದ್ಯಂತ ಪ್ರಚಾರ ಮಾಡುವ ಗುರಿ ಉದ್ದೇಶವನ್ನು ಹೊಂದಿದಂತ ರಾಮಕೃಷ್ಣ ಮಿಷನ್ ಸಂಸ್ಥೆಯನ್ನು ಸ್ಥಾಪಿಸಿದರು. ಇದೊಂದು ಬಾರತದ ಮಟ್ಟಿಗೆ ಮೈಲುಗಲ್ಲು.

ವಿವೇಕಾನಂದರು ನಿರ್ವಿಕಲ್ಪ ಸಮಾಧಿಯನ್ನು ಪಡೆದು ಹಿಮಾಲಯಕ್ಕೆ ಹೋಗಲಿಲ್ಲ. ಬದಲಿಗೆ ಸಮಾಜದ ಜನರ ನಡುವೆಯೇ ನಿಂತು, ದೀನ ಅನಾಥರ ಕಲ್ಯಾಣಕ್ಕಾಗಿ ಕಾಯಕಯೋಗಿ ಎನಿಸಿಕೊಂಡರು. ಮಹತ್ವದ ಕಾರ್ಯಗಳನ್ನು ಕೈಗೊಂಡರು. ಜೀವಿತದ ಕುರಿತು ಅವರು ಹೇಳಿದ ಮಾತುಗಳೆಲ್ಲ ಮನುಕುಲದ ಒಳತಿಗಾಗಿ ಸೃಷ್ಟಿಗೊಂಡ ಶ್ರೇಷ್ಠ ಚಿಂತನೆಗಳಾಗಿ ಕಂಗೊಳಿಸುತ್ತವೆ.

ವಿವೇಕಾನಂದರು ಭಾಷಣಗಳ ಮೂಲಕ ಆಡಿದ ಮಾತುಗಳು ಜಗತ್ತು ಭಾರತವನ್ನು ನೋಡುವ ರೀತಿಯನ್ನು ಶಾಶ್ವತವಾಗಿ ಬದಲಾಯಿಸಿತು. ಯುವ ಜನತೆಗೆ ಸ್ಫೂರ್ತಿಯ ಚಿಲುಮೆಯಂತಿದ್ದ ವಿವೇಕಾನಂದರ ಚಿಂತನೆಗಳು, ಸಂದೇಶಗಳು ಎಲ್ಲ ಕಾಲಕ್ಕೂ ಪ್ರಸ್ತುತವೆನಿಸುತ್ತವೆ. ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶಗಳಲ್ಲಿ ವಿಶೇಷವಾಗಿ ಯುವಜನರ ಮೇಲೆ ಪ್ರಭಾವ ಬೀರುವ, ಬಾಳು ಬೆಳಗಿಸುವ ಅಂಶಗಳಿವೆ. ಈ ಹಿನ್ನೆಲೆಯಲ್ಲಿ ವೀರ ಸನ್ಯಾಸಿಯ ಹುಟ್ಟಿದ ದಿನವನ್ನು ರಾಷ್ಟ್ರವ್ಯಾಪಿ "ರಾಷ್ಟ್ರೀಯ ಯುವ ದಿನ"ವನ್ನಾಗಿ ಆಚರಿಸಲಾಗುತ್ತಿದೆ. ರಾಷ್ಟ್ರದ ಬಗೆಗಿನ ಪ್ರೀತಿ, ಭಾರತೀಯ ಸಂಸ್ಕೃತಿಯ ಅಪಾರ ಜ್ಞಾನ ಹೊಂದಿದ್ದ ವಿವೇಕಾನಂದರು ದೇಶದ ಮೂಲೆ ಮೂಲೆಗೆ ಸಂಚರಿಸಿ ಎಲ್ಲರಲ್ಲಿ ಸ್ಫೂರ್ತಿ ತುಂಬಿದರು. ಇಂತಹ ಶ್ರೇಷ್ಠ ಸನ್ಯಾಸಿ ತಮ್ಮ ತತ್ವ, ಆದರ್ಶ, ಚಿಂತನೆಗಳ ಮೂಲಕ ಇಂದಿಗೂ ಪ್ರಸ್ತುತ ಎನಿಸುತ್ತಾರೆ. ನಮ್ಮ ಭಾರತ ದೇಶ ಕಂಡ ಇಂತಹ ಅಪ್ರತಿಮ ಆಧ್ಯಾತ್ಮಿಕ ಚಿಂತಕರನ್ನು ಭಾರತದ ದ್ರುವ ತಾರೆ ಎನ್ನುವುದು ಅಭಿಮಾನದ ಸಂಗತಿ. ಅವರ ಕೆಲವು ಚಿಂತನೆಗಳನ್ನು ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ.



ಸಮಾಜವನ್ನು ಆವರಿಸಿಕೊಂಡ ಮೂಢನಂಬಿಕೆಗಳನ್ನು ಅಳಿಸಿ ಹಾಕುವ ಪ್ರಯತ್ನ ಮಾಡಿದ ಮೇಧಾವಿ. ಮೂಢನಂಬಿಕೆಗಳು ಮನುಷ್ಯನ ನಿತ್ಯ ಜೀವನವನ್ನು ನಿಯಂತ್ರಿಸುತ್ತವೆ. ಮನುಷ್ಯರು ವೈಚಾರಿಕರಾಗದ ಹೊರತು ಒಂದು ಪ್ರಬುದ್ಧ ಸಮಾಜವನ್ನು ರೂಪಿಸಲು ಸಾಧ್ಯವಾಗುವುದಿಲ್ಲ.

ವಿವೇಕಾನಂದರು ಸ್ವಾಸ್ಥ್ಯ ಸಮಾಜಕ್ಕೆ ಏನು ಕಾರಣ ಎಂಬುದನ್ನು ಗುರುತಿಸುತ್ತಾರೆ. "ಮೂಢನಂಬಿಕೆಗಳು ಸಮಾಜದ ವಿಕಸನಕ್ಕೆ ಅಡ್ಡಿಯಾಗುತ್ತವೆ. ಅವುಗಳನ್ನು ಊರಾಚೆ ಅಟ್ಟ ಬೇಕು ಎಂದು ಪ್ರೇರೇಪಿಸುತ್ತಾರೆ. ಜನರನ್ನು ವೈಚಾರಿಕರಾಗಲು ಪ್ರಯತ್ನಿಸುತ್ತಾರೆ. ವ್ಯಕ್ತಿಯ ಮಾನಸಿಕ ಆರೋಗ್ಯವೇ ಸಮಾಜದ ಆರೋಗ್ಯ. ಹಾಗೆಯೇ ಸಮಾಜದಲ್ಲಿ ಮನೆ ಮಾಡಿಕೊಂಡ ಧರ್ಮದ ವಿರೂಪವನ್ನು ಒಳಗಣ್ಣಿನಿಂದ ಕಾಣಬೇಕು ಎನ್ನುವ ವಿವೇಕಾನಂದರು ಧರ್ಮದ ವಿರೂಪವನ್ನು ಕಂಡು ದಿಗ್ಭ್ರಾಂತರಾಗುತ್ತಾರೆ. ಸಹಜವಾಗಿ ಜನಮುಖಿಗೊಂಡ ವ್ಯಕ್ತಿಗಳು ಬರುಬರುತ್ತಾ ಭಾವನಾತ್ಮಕ ವ್ಯತ್ಯಾಸಗಳನ್ನು ಅನುಸರಿಸುವ ನಿಲುವುಗಳನ್ನು ಬಳಸಲು ಬಯಸುತ್ತಾರೆ. ಆದರೆ ವಿವೇಕಾನಂದರು ಜನಮುಖಿಗೊಂಡಂತೆ ಬಹಳ ಸರಳವಾದರೂ. ಯಾವತ್ತೂ ಎಲ್ಲರ ಕಷ್ಟ ಕಾರ್ಪಣ್ಯಗಳನ್ನು ಕಳಕಳಿಯಿಂದ ಕಿತ್ತೆಸೆಯಲು ಕಟಿ ಬದ್ಧರಾದರು.

ಜನಹಿತ ಸರಕಾರ ಮತ್ತು ಆಡಳಿತ ಅಸ್ತಿತ್ವದಲ್ಲಿರಬೇಕು ಎಂಬ ಹಂಬಲ



Downloaded From: www.kpscvaani.com



ಹೊತ್ತ ಉದಾತ್ತ ವ್ಯಕ್ತಿ. ಭಾರತದ ಚರಿತ್ರೆಯನ್ನು ಸರಿಯಾಗಿ ಬಲ್ಲಂತ ವಿವೇಕಾನಂದರು, ಕಾಲಘಟ್ಟಕ್ಕೆ ಅನುಗುಣವಾಗಿ ಇಲ್ಲಿನ ಶೈಕ್ಷಣಿಕ ವ್ಯವಸ್ಥೆ ಬದಲಾಗಿರುವುದನ್ನು ಕಂಡು ಮಮ್ಮಲ ಮರಗುತ್ತಾರೆ. ಜನರಿಗೆ ನಿಜವಾದ ಅರಿವನ್ನುಂಟು ಮಾಡುವ ವಿದ್ಯೆ ಕೊಡುವ ಶಾಸನಗಳು ರಚಿಸುವುದರ ಬಗೆಗೆ ಒಲವು ತೋರುತ್ತಾರೆ. "ಹಿಂದಿನ ರಾಜರುಗಳು ಶಾಸನಗಳನ್ನು ಮಾಡುತ್ತಿದ್ದರು. ಈಗ ರಾಜರಿಲ್ಲ. ಪ್ರಜಾಪ್ರಭುತ್ವದ ಹಿನ್ನೆಲೆಯಲ್ಲಿ ಸರ್ಕಾರಗಳು ರುಪಗೊಂಡರೂ, ಆರೋಗ್ಯಕರವಾದ, ಬಲವಾದ ಪ್ರಜಾಭಿಪ್ರಾಯವನ್ನು ಸೃಷ್ಟಿಸುವುದಕ್ಕೆ ಏಕೆ ಸಾಧ್ಯವಾಗುತ್ತಿಲ್ಲ ಎನ್ನುವುದರ ಜೊತೆಗೆ ಪ್ರಜಾಭಿಪ್ರಾಯ ರೂಪಿಸಲು ಮುಂದಾದಲ್ಲಿ ದೀರ್ಘ ಸಮಯ ತಗಲುತ್ತದೆ. ಇದು ಸಲ್ಲದು ಎನ್ನುವ ಚಿಂತನೆಗಳನ್ನು ಕಟ್ಟಿಕೊಡುವ ವಿವೇಕಾನಂದರು, ಜನರ ಶಕ್ತಿಗೆ ಬೆಲೆ ಬರುವವರೆಗೆ ಕಾಯಲೇಬೇಕಾಗುತ್ತದೆ ಎನ್ನುತ್ತಾರೆ. ಯಾರಿಗೆ ಸಾಮಾಜಿಕ ಜೀವನದಲ್ಲಿ ಸುಧಾರಣೆ ಬೇಕಾಗಿದೆಯೋ ಅವರು ಮೊದಲು ಸನ್ನದ್ಧರಾಗಬೇಕಿದೆ. ಜನರನ್ನು ವಿದ್ಯಾವಂತರನ್ನಾಗಿ ಮಾಡಿ ಅಧಿಕಾರವನ್ನು ರೂಪಿಸುವುದು ಸೂಕ್ತ.

ಸಾಮಾಜಿಕ ಜೀವನಕ್ಕೆ ವೇದಾಂತದ, ಸಿದ್ಧಾಂತದ ಅವಶ್ಯಕತೆ ಇದೆ ಎನ್ನುವುದಾದರೇ, ಭಾರತದ ವೇದಾಂತ ನಿರ್ಭಯತೆಯನ್ನೂ, ಸ್ವಾತಂತ್ರ್ಯವನ್ನೂ ಸಾರುತ್ತದೆ. ಮೇಲಾಗಿ ನಮ್ಮ ನೈಜ ಸ್ವಭಾವವು ಶಾಶ್ವತವೆಂದೂ ನಾಶ ಹೊಂದದೆಂದೂ ಸಾರುತ್ತದೆ. ಆದರೆ ನಾವೇಕೆ ದುಃಖಿಗಳಾಗಿದ್ದೇವೆ ಮತ್ತು ಭ್ರಷ್ಟ ನಡೆಗಳನ್ನು ಹೊಂದಿದ್ದೇವೆ ಎಂಬುದನ್ನು ವಿವೇಕಾನಂದರು ಜನ ಸಮ್ಮುಖದಲ್ಲಿ ಇಟ್ಟು ಚಿಂತನೆ ಮಾಡುತ್ತಾರೆ. ಇದಕ್ಕೆ ಪೂರಕವಾಗಿ "ಭಾರತದ ಅವನತಿಗೆ ಮುಖ್ಯ ಕಾರಣ ತನ್ನ ಸುತ್ತ ಅದು ದೊಡ್ಡ ಸಂಪ್ರದಾಯದ ಗೋಡೆಯನ್ನು ಕಟ್ಟಿಕೊಂಡಿರುವುದು, ಹೊರಗಿನ ಭಾವನೆಗಳನ್ನು ನಾವು ಬರಗೊಡಲಿಲ್ಲ.

ಇತರ ಜನಾಂಗಗಳಿಂದ ಬೇರೆಯಾಗಿದ್ದುಕೊಂಡು, ಯಾವುದೇ ವ್ಯಕ್ತಿಯಾಗಲಿ, ರಾಷ್ಟ್ರವಾಗಲಿ ಬದುಕಲಾರದು ಎನ್ನುವುದು ನನಗೆ ಖಚಿತವಾಗಿದೆ. ಈ ಸ್ಥಿತಿಗೆ ಏಕಸೂತ್ರ ಪರಿಹಾರವೆಂದರೆ ಜಗತ್ತಿನ ಪ್ರವಾಹಕ್ಕೆ ಮತ್ತೆ ಹಿಂದಿರುಗುವುದು. ವಿಕಾಸವೇ ಜೀವನ, ಸಂಕೋಚವೇ ಮೃತ್ಯು. ವಿವೇಕಾನಂದರು ಒಬ್ಬ ವ್ಯಕ್ತಿಯಾಗಿ ಭಾರತವನ್ನು ಜಗತ್ತಿನ ಸಾಂಸ್ಕೃತಿಕ ಪ್ರವಾಹಕ್ಕೆ ಜೋಡಿಸಿದರು. ಇದರಿಂದ ಪೂರ್ವ ಹಾಗೂ ಪಶ್ಚಿಮಗಳೆರಡೂ ಒಂದನ್ನೊಂದು ಕಂಡುಕೊಂಡವು. ಪಶ್ಚಿಮಕ್ಕೆ ಅವರು ಬೋಧಿಸಿದ್ದು, ಭಾರತದ ವೇದಾಂತವನ್ನು ಭಾರತಕ್ಕೆ ಅವರು ವೇದಾಂತ ತತ್ವಗಳ ಅನುಷ್ಠಾನದ ಮೂಲಕ ಅದರಲ್ಲಿ ಹೊಸಚೈತನ್ಯವನ್ನು ಮೂಡಿಸುವ ಪುರುಷ ನಿರ್ಮಾಣದ ಶ್ರದ್ಧೆಯ ಕಲ್ಪನೆಗಳನ್ನು ಬೋಧಿಸಿದವರು. (ವಿವೇಕಪ್ರಭ, ಲೇ. ಜಿ.ಎಸ್. ಶಿವರುದ್ರಪ್ಪ, ಜನವರಿ 2013 ) ಎನ್ನುವ ಜಿ. ಎಸ್. ಶಿವರುದ್ರಪ್ಪನವರ ಮಾತು ಸರ್ವಕಾಲಿಕವಾಗಿ ಗಮನಾರ್ಹ ವೆನಿಸುತ್ತದೆ.

**ವೇದಾಂತವನ್ನು ಪ್ರತಿಯೊಬ್ಬರ ಮನಕ್ಕು ಮನೆಗೂ ಮುಟ್ಟಿಸಿದ ವೀರ ವೇದಾಂತಿ:**

ಎಲ್ಲರ ಮನಕ್ಕೂ ಮನೆ ಬಾಗಿಲಿಗೂ ಆಚಂದ್ರಾರ್ಕ ಸ್ಥಾಯಿಯಾಗಿ ನಿಲ್ಲುವ ಸಂದೇಶಗಳನ್ನು ಮುಟ್ಟಿಸಿದ ಧೀರ ವೇದಾಂತಿ ಸ್ವಾಮಿ ವಿವೇಕಾನಂದರು. ಎನ್ನವ ಮಾತು ಪ್ರತಿಯೊಬ್ಬರಲ್ಲಿ ಪುಳಕವನ್ನುಂಟು ಮಾಡುತ್ತದೆ. ಆಮೂಲಕ ಸಮಾಜದ ಹಾಗೂ ಮಾನವ ಜನಾಂಗದ ಐಕ್ಯತೆಯನ್ನು ಮತ್ತು ಸಮಾನತೆಯನ್ನು ಸಾಧಿಸಲು ಸಾಧ್ಯ ಎಂದು ಉಚ್ಚ ಸ್ವರದಲ್ಲಿ ಸಾರುತ್ತಾ, ಸಮಾಜದ ಸುಧಾರಣೆಗೆ ಮುಂದಾಗುತ್ತಾರೆ. ಜೀವನವನ್ನು ಸಾಮಾಜಿಕ ಜೀವನದ ಬದ್ಧತೆಯ ಹಿನ್ನೆಲೆಯಲ್ಲಿ ವೇದಾಂತದ ಸತ್ವ ಬಳಸಿಕೊಂಡು ಮಾನವತೆಯ ಮೆರಗನ್ನು ಸರಿದೂಗಿಸಿಕೊಂಡು ಕಟ್ಟಿಕೊಳ್ಳುವುದು ಅತ್ಯವಶ್ಯಕ ಎನ್ನುವ ಮಾತು ವ್ಯಕ್ತ ಪಡಿಸುತ್ತಾರೆ. ಇದೆ ಸಂದರ್ಭದಲ್ಲಿ ಹುಟ್ಟಿಕೊಳ್ಳುವ ಮಹತ್ವದ ಪ್ರಶ್ನೆ ಮಾನವ ಜನಾಂಗದ ಏಕತೆ, ಸರಿಸಮಾನತೆ ಎಂದರೆ ಅದು ಆಧ್ಯಾತ್ಮಿಕ ಪ್ರಪಂಚಕ್ಕೆ ಒಳಪಟ್ಟಿದ್ದು. ಅದನ್ನು ಸಾಮಾಜಿಕವಾಗಿ ನೋಡಲಾಗದು ಎಂದು ವಾದಿಸುವವರ ನಡುವೆ ಜೀವನಕ್ಕೆ ಇಬ್ಬಗೆಯ ನೀತಿ ಮೂಡುತ್ತದೆ. ಹಾಗಾದರೆ ಸಾಮಾಜಿಕ, ರಾಜಕೀಯ ಹಾಗೂ ವೈಜ್ಞಾನಿಕ ವಲಯಗಳಲ್ಲಿ ಭಿನ್ನ ಭಿನ್ನ ವರ್ತನೆಗಳಿರಬೇಕೇ? ಹೀಗಿದ್ದಲ್ಲಿ ವ್ಯಕ್ತಿತ್ವದಲ್ಲಿ ದ್ವಂದ್ವ





Downloaded From: www.kpscvaani.com

ರೂಪಗೊಳ್ಳುವ ಸಾಧ್ಯತೆ ಬರುತ್ತದೆ. ಇದು ಎಂದಿಗೂ ಸರಿ ಹೊಂದುವುದಿಲ್ಲ. ಬದಲಿಗೆ ಅಧ್ಯಾತ್ಮ ತತ್ವವನ್ನು ಈ ವಿಭಾಗಗಳಲ್ಲಿಯೂ ಸೂಕ್ತವಾಗಿ ಅನುಸರಿಸಿ ಜೀವನವನ್ನು ಸಾರ್ಥಕ ಮಾಡಿಕೊಳ್ಳಬೇಕು.

**ಹಸಿವು ಬಾಯಾರಿಕೆ ಅಳಿಯಬೇಕು ಎನ್ನುವ ಛಲಗಾರ:**

ವಿವೇಕಾನಂದರ "ನನ್ನ ಸಮರ ನೀತಿ" ಎಂಬ ಉಪನ್ಯಾಸ ಬಹಳಷ್ಟು ಪ್ರಭಾವಿಪೂರ್ಣ ಉಪನ್ಯಾಸ. ಈ ಉಪನ್ಯಾಸದಲ್ಲಿ ಅವರು ಸಮಾಜದಲ್ಲಿ ತಮಗೆ ಆಮೂಲಾಗ್ರ ಬದಲಾವಣೆಗಳಾಗಬೇಕು ಹಾಗೂ ಸುಧಾರಣೆಯಾಗಬೇಕು" ಎಂಬ ವಿಚಾರವನ್ನು ಚರ್ಚಿಸುತ್ತಾರೆ.

ಹೆಂಡಿರು–ಮಕ್ಕಳು, ಆಸ್ತಿ–ಪಾಸ್ತಿ ಮತ್ತು ದೇಹದ ಸಿರಿ ಮರೆತು ಕೆಲಸ ಮಾಡಲು ಆಸಕ್ತರಾದದ್ದೇ ಆದಲ್ಲಿ ದಾರಿದ್ರ್ಯ ತೊಲಗಿಸಲು ಇದು ಮೊದಲ ಹೆಜ್ಜೆ ಆಗಲಿದೆ, ಇದೇ ಸರಿಯಾದ ಕಾಯಕ ಎಂದು ವಿವೇಕಾನಂದರು ಹೃದಯಾಂತರಾಳದಿಂದ ಹೇಳುತ್ತಿದ್ದರು. ಕೇವಲ ಆಕ್ರೋಶ ಭರಿತ ಮಾತು ಸಾಲದು. ಸೂಕ್ತವಾದ ಪರಿಹಾರೋಪಾಯಗಳನ್ನು ಕಂಡು ಹಿಡಿಯುವುದು ಮುಖ್ಯ. ಜನರನ್ನು, ಪರಿಸ್ಥಿತಿಯನ್ನು ದೂರದೆ, ವರ್ತಮಾನ ಮತ್ತು ಕಾಲ ಕೂಪದಂತ ಸನ್ನಿವೇಶಗಳಿಂದ ಹೊರಬಂದು, ಜನರನ್ನು ಹೊರತಂದು ಸೌಖ್ಯದ ಗಾಳಿ ಬೀಸುವಂತೆ ಪ್ರಯತ್ನಿಸಬೇಕು. ಎಲ್ಲರೂ ದುಃಖ ಶಮನಗೊಳಿಸುವ, ಸಹಾನುಭೂತಿಯುಳ್ಳ ಮಾತು ಆಡುವುದು ಅತ್ಯವಶ್ಯಕ ಎಂದು ನುಡಿಯುತ್ತಿದ್ದರು ಮತ್ತು ಹಾಗೇ ನಡೆಯುತ್ತಿದ್ದರು.

"ಓ ನನ್ನ ತರುಣ ಮಿತ್ರರಿರಾ, ಕಂಕಣಬದ್ಧರಾಗಿ ಸೊಂಟಕಟ್ಟಿ ನಿಲ್ಲಿ , ಮಹತ್ಕಾರ್ಯಕ್ಕಾಗಿಯೇ ದೇವರ ಕರೆ ಬಂದಿದೆ ನನಗೆ...ಮುಂದಿನ ಅಭ್ಯುದಯ ನಿಮ್ಮಲ್ಲಿದೆ. ದೀನರಲ್ಲಿ, ಸರ್ವಸಾಮಾನ್ಯರಲ್ಲಿ ಶ್ರದ್ಧಾನ್ವಿತರಲ್ಲಿ, ಬಡವರಿಗಾಗಿ ಮರುಗಿ, ಕೈಯೆತ್ತಿ ಮೊರೆಯಿಡಿ, ನೆರವು ಬಂದೇ ಬರುತ್ತದೆ. ಹತ್ತು ಹನ್ನೆರಡು ವರ್ಷಗಳ ಕಾಲ ಸುತ್ತಿದ್ದೇನೆ. ಧನಿಕರೆಂಬುವರ ಮತ್ತು ದೊಡ್ಡವರೆಂಬುವರ ಮನೆ ಮನೆಗೆ, ಬಾಗಿಲು ಬಾಗಿಲಿಗೆ ತೊಳಲಿದ್ದೇನೆ. ಎದೆಯ ನೆತ್ತರವನ್ನು ದಾರಿಯುದ್ದಕ್ಕೂ ಸುರಿಸುತ್ತಾ ಪ್ರಪಂಚಾರ್ಧವನ್ನೂ ದಾಟಿ ಈ ಪರಕೀಯ ಪ್ರದೇಶಕ್ಕೆ ಸಹಾಯ ಕೋರಲೆಂದು ಬಂದಿದ್ದೇನೆ .... ದೇವರೇ ... ನನಗೆ ನೆರವಾಗುತ್ತಾನೆ. ಈ ದೇಶದಲ್ಲಿಯೇ ಹಸಿವೆಯಿಂದಲೋ, ಚಳಿಯಿಂದ ನಾನು ಸಾಯಬಹುದು. ಆದರೆ, ತರುಣರಿರಾ... ಈ ನನ್ನ ಹೃದಯದ ಸಹಾನುಭೂತಿಯನ್ನೂ, ಬಡವರಿಗಾಗಿರುವ ಹೋರಾಟವನ್ನೂ, ಅಜ್ಞಾನಿಗಳಿಗಾಗಿ ಕೆಳಗೆ ಬಿದ್ದು ತುಳಿಸಿಕೊಳ್ಳುವವರಿಗಾಗಿರುವ ಮರುಕವನ್ನೂ, ನಿಮಗೆ ದಾನ ಮಾಡಿ ಸಾಯುತ್ತೇನೆ.

ಜಗದೀಶ್ವರನ ಚರಣತಲದಲ್ಲಿ ಮುಖವಿಟ್ಟು ಮಹಾಯಜ್ಞಕ್ಕೆ ಸಿದ್ಧರಾಗಿ. ಸಮಸ್ತ ಜೀವಮಾನವನ್ನೆ ಬಲಿದಾನಗೈಯಲು ಸಿದ್ಧರಾಗಿ. ಅಯ್ಯೋ ಮೂವತ್ತು ಕೋಟಿ ಮಾನವರು ದಿನ ದಿನವೂ ಅಧೋಗತಿಗಿಳಿಯುತ್ತಿದ್ದಾರೆ. ಜಗದೀಶ್ವರನಿಗೆ ಜಯವಾಗಲಿ, ನಾವು ಗೆದ್ದೇ ಗೆಲ್ಲುತ್ತೇವೆ. ಸಾವಿರಾರು ಯೋಧರು ರಣರಂಗದಲ್ಲಿ ಮಡಿಯಬೇಕಾಗುತ್ತದೆ. ಸಾವಿರಾರು ಯೋಧರು ಮತ್ತೆ ಮುಂದೆ ನುಗ್ಗಿ ಬಿದ್ದವರ ಸ್ಥಾನದಲ್ಲಿ ನಿಂತು ಅನುವಾಗುತ್ತಾರೆ. ಶ್ರದ್ಧೆಯಿರಲಿ, ಸಹಾನುಭೂತಿಯಿರಲಿ, ಹೃದಯವಿರಲಿ, ಬಾಳು ತುಚ್ಛವಾಗಲಿ, ಸಾವೂ ತುಚ್ಛವಾಗಲಿ, ಮಹತ್ಕಾರ್ಯದಲ್ಲಿ ಸತ್ತರೇನಂತೆ, ಬದುಕಿದರೇನಂತೆ ... ಜಯ ಜಗದೀಶ್ವರನಿಗೆ ಎಂದು ಮುಂದೆ ನುಗ್ಗಿ, ಜಗದೀಶ್ವರನೆ ನಮ್ಮ ಸೇನಾಪತಿ, ಅವನೇ ಮಾರ್ಗದರ್ಶಿ, ಹಿಂದಿರುಗಿ ನೋಡಬೇಡಿ ಮುಂದೆ ಮುಂದೆ ಮುನ್ನುಗ್ಗಿ" ( ಸ್ವಾಮಿ ವಿವೇಕಾನಂದ, ಲೇ.ಕುವೆಂಪು 1932) ಎಂದು ಕೆಚ್ಚಿನಿಂದ ಕರೆ ನೀಡಿ ಪ್ರಪಂಚವನ್ನು ಆವರಿಸಿಕೊಂಡ ದಾರಿದ್ರ್ಯವನ್ನು ಕಿತ್ತೆಸೆಯಲು ಕರೆ ಕೊಟ್ಟ ಏಕ ಮೇವ ವ್ಯಕ್ತಿ ಸ್ವಾಮಿ ವಿವೇಕಾನಂದರು.

**ಭಾರತದ ಧರ್ಮ ಸಹಿಷ್ಣುತೆಯ ಸ್ವರೂಪ ಮತ್ತು ಸ್ತ್ರೀ ಗೌರವವನ್ನು ನರ ನಾಡಿಗಳಲ್ಲಿ ತುಂಬಿಕೊಂಡ ಕೆಚ್ಚೆದೆಯ ವೀರ:**

ವಿವೇಕಾನಂದರು ಅನ್ಯ ಧರ್ಮದ ಸಹಿಷ್ಣುಗಳಾಗಿದ್ದರು. ವಿರೋಧಿಗಳಾಗಿರಲಿಲ್ಲ. ಆದರೆ ಅವರು ವಿಶ್ಲೇಷಿಸಿದಂತೆ "ಅನೇಕ ಮತ–ಧರ್ಮಗಳು ಮಾನವತೆಯನ್ನು ಛಿದ್ರಗೊಳಿಸಿವೆ. ಈ ದೇಶಕ್ಕೆ ಅನ್ಯಧರ್ಮದವರು ಬಂದು ಇಲ್ಲಿಯವರನ್ನು ಮತಾಂತರಗೊಳಿಸಿದ್ದಕ್ಕೆ ಕಾರಣ, ಉಚ್ಚವರ್ಗದವರು ಕೆಳವರ್ಗದವರನ್ನು ಸಮಾನವಾಗಿ ಕಾಣದೆ ಪ್ರತ್ಯೇಕವಾಗಿ ಕಂಡದ್ದೇ ಕಾರಣವಾಯಿತು. ಪರಮಹಂಸರು ಎಲ್ಲ ಧರ್ಮಗಳ ಸಾಧನೆ ಮಾಡಿ ಅವುಗಳ ತಿರುಳು ಒಂದೇ ಎಂದು ಸಾರಿದವರು. 1898 ರ ಜೂನ್ 10 ರಂದು ತಮ್ಮ ಮುಸ್ಲಿಂ ಮಿತ್ರ ಮಹಮ್ಮದ್ ಸರ್ಫರಜ್ ಅವರಿಗೆ ಬರೆದ ಪತ್ರದಲ್ಲಿ ಸ್ವಾಮೀಜಿ ಹೀಗೆ ಹೇಳುತ್ತಾರೆ : ಎಲ್ಲಿ ವೇದಗಳಾಗಲಿ, ಬೈಬಲ್ ಆಗಲಿ, ಖುರಾನ್ ಆಗಲಿ ಇಲ್ಲವೋ ಅಂಥ ಒಂದು ನೆಲೆಗೆ ಮನುಷ್ಯ ಕುಲವನ್ನು ಕರೆದೊಯ್ಯಬೇಕೆಂಬುದು ನನ್ನ ಬಯಕೆ. ಇನ್ನು ಸ್ತ್ರೀಯರ ಬಗ್ಗೆ: ಇತರ ವರ್ಗದವರು ವೇದವನ್ನು ಓದಲು ಅನರ್ಹರೆಂದು ಮೇಲಿನವರು ತೀರ್ಮಾನಿಸಿದಾಗಲೇ ಸ್ತ್ರೀಯರ ಹಕ್ಕು ಬಾಧ್ಯತೆಗಳು ನಷ್ಟವಾದವು. ಒಂದು ಕಾಲಕ್ಕೆ ಮೈತ್ರೇಯಿ ಗಾರ್ಗಿಯರಂಥ ಬ್ರಹ್ಮಜ್ಞಾನಿಗಳಿದ್ದ ದೇಶ ಇವತ್ತು ಏಕೆ ಮಹಿಳೆಯರನ್ನು ಹೀಗೆ ನಡೆಸಿಕೊಳ್ಳುತ್ತಿದೆ? ಮಹಿಳೆಯರಿಗೆ ಸಲ್ಲಬೇಕಾದ ಗೌರವವನ್ನು ಯಾವ ಜನಾಂಗ ಕೊಟ್ಟಿಲ್ಲವೋ ಅದು ಖಂಡಿತ ಏಳಿಗೆ ಪಡೆಯಲಾರದು. ಸೋದರಿ ನಿವೇದಿತಾಗೆ ಬರೆದ ಪತ್ರದಲ್ಲಿ ಸ್ವಾಮೀಜಿ, ಈ ದೇಶದಲ್ಲಿ ಎರಡು ಪಾಪಗಳಿವೆ. ಒಂದು ಮಹಿಳೆಯ ಶೋಷಣೆ, ಇನ್ನೊಂದು ಶ್ರೀಸಾಮಾನ್ಯರ ಶೋಷಣೆ ಎಂಬುದು ಸ್ತ್ರೀಯರ ಪರವಾಗಿ ಅವರು ವ್ಯಕ್ತಪಡಿಸಿರುವ ಭಾವ. (ಸಹಸ್ರ ಮುಖಿ ವಿವೇಕಾನಂದ, ಸಂ. ಯು ಎನ್ ಸಂಗಮನಾಳ ಮಠ, 2016)

ಒಬ್ಬ ದೇವ ದೂತನಂತಿದ್ದ ವಿವೇಕಾನಂದರು ಸಾಮಾನ್ಯರಲ್ಲಿ ಸಾಮಾನ್ಯರಾಗಿ ಸರಳತೆಯಲ್ಲಿ ಅತಿ ಸರಳವಾಗಿ ಸಹೋದರತ್ವದ ಕಣ್ಣೋಟದಲ್ಲಿಯೇ ಎಲ್ಲವನ್ನೂ ಗ್ರಹಿಸುವ ಮತ್ತು ಎಲ್ಲರ ಏಳಿಗೆಯನ್ನು ಬಯಸುವ ಓರ್ವ ಅಂತಃಕರಣದ ಅವಧೂತ ಭಾರತ ಕಂಡ ಅಪರೂಪದ ನಕ್ಷತ್ರ, ಸೂರ್ಯ ಪ್ರಭೆಗೆ ಸರಿ ಸಮನಾದ ಬೆಳಕು ಹೊತ್ತ ಅವರ್ಣನೀಯ ಜೀವ ಸ್ವಾಮಿ ವಿವೇಕಾನಂದ. ಅವರ ತತ್ವ ಆದರ್ಶಗಳು ಮತ್ತು ಜೀವನದ ಶೈಲಿ ಇಂದು ಭಾರತಕ್ಕೆ ಅತ್ಯವಶ್ಯಕವಾಗಿ ಬೇಕಾಗಿದೆ. ಇವರ ತತ್ವಗಳನ್ನು ಅನುಸರಿಸಿ ಏಳಿಗೆ ಕಂಡು ಕೊಳ್ಳುವ ಜರೂರತ್ತು ಇದೆ.



Downloaded From: www.kpscvaani.com



# ಬಟರ್ ಫ್ರೂಟ್

## ಕೊಲೆಸ್ಟ್ರಾಲ್ ಮುಕ್ತ ಹಣ್ಣು

**ಬಟರ್‌ಫ್ರೂಟ್ ಎಂಬ ಹೆಸರಿನಿಂದ ಕರೆಯಲ್ಪಡುವ ಅವೋಕ್ಯಾಡೋ ಹಣ್ಣುಗಳಲ್ಲೇ ಅತ್ಯಂತ ಕೊಬ್ಬುಭರಿತ ಮತ್ತು ಪೌಷ್ಟಿಕಾಂಶಭರಿತ ಹಣ್ಣಾಗಿದೆ.**

ಡಾ. ಎಸ್. ನಾರಾಯಣ ಸ್ವಾಮಿ

ಬಹು ಹಿಂದಿನಿಂದಲೂ ವೈದ್ಯರು ಹಾಗೂ ಆಹಾರ ತಜ್ಞರು ಅವೋಕ್ಯಾಡೋ ಹಣ್ಣನ್ನು ಒಂದು ಅಪರೂಪದ ಪೌಷ್ಟಿಕಾಂಶಭರಿತ ಹಾಗೂ ಔಷಧೀಯ ಗುಣಗಳನ್ನು ಹೊಂದಿದ ಫಲವೆಂದು ವರ್ಣಿಸಿದ್ದಾರೆ. ಆರೋಗ್ಯ ವರ್ಧನೆಗೆ ಈ ಹಣ್ಣು ತುಂಬ ಸಹಾಯಕಾರಿ. ಅಧಿಕ ಕೊಬ್ಬಿನಾಂಶವನ್ನು ಹೊಂದಿದ ಏಕೈಕ ತೋಟಗಾರಿಕೆ ಫಲವೆಂಬ ಹೆಗ್ಗಳಿಗೆ ಈ ಹಣ್ಣಿಗಿದೆ. ಅವೋಕ್ಯಾಡೋ ಹಣ್ಣು ಹೆಚ್ಚು ಕೊಬ್ಬಿನಾಂಶವನ್ನು ಹೊಂದಿರುವ ಕಾರಣ, ಮತ್ತು ಬೆಣ್ಣೆಯಷ್ಟು ಮೃದುವಾಗಿರುವುದರಿಂದ ಇದನ್ನು ಬಟರ್‌ಫ್ರೂಟ್ ಎಂದು ಕರೆಯುವುದು ವಾಡಿಕೆಯಾಗಿದೆ.

ಪ್ರಸಕ್ತ ಸನ್ನಿವೇಶದಲ್ಲಿ ಬಹುಜನರು, ಅದರಲ್ಲೂ ಮುಖ್ಯವಾಗಿ ತಮ್ಮ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ಉಳ್ಳವರು, ಅಧಿಕ ಕೊಬ್ಬು ಹೊಂದಿರುವ ಆಹಾರ ಪದಾರ್ಥವೆಂದ ತಕ್ಷಣ ಅದನ್ನು ಸೇವಿಸಲು ಹಿಂದೇಟು ಹಾಕುತ್ತಾರೆ. ಆದರೆ ಬಟರ್‌ಫ್ರೂಟ್ ಈ ಕಳಂಕದಿಂದ ಹೊರತಾಗಿದೆ ಎಂದು ಘಂಟಾಘೋಷವಾಗಿ ಹೇಳಬಹುದು, ಏಕೆಂದರೆ ಈ ಹಣ್ಣಿನಲ್ಲಿರುವ ಕೊಬ್ಬು ಸಂಪೂರ್ಣ ಅಪಾಯರಹಿತ ಕೊಬ್ಬಾಗಿರುತ್ತದೆ.





Downloaded From: www.kpscvaani.com




ಈ ಕಾರಣದಿಂದಾಗಿಯೇ ವಿಶ್ವದಾದ್ಯಂತ ಆಹಾರ ತಜ್ಞರು ಬಟರ್‌ಫ್ರೂಟ್ ಅನ್ನು "ಝಿರೋ ಕೊಲೆಸ್ಟ್ರಾಲ್" ಫಲವೆಂದು ಪ್ರಮಾಣೀಕರಿಸಿದ್ದಾರೆ. ಇದಕ್ಕೆ ಮುಖ್ಯ ಕಾರಣವೇನೆಂದರೆ ಈ ಹಣ್ಣಿನಲ್ಲಿನ ಕೊಬ್ಬು ಬರೀ ಮೊನೋ ಅನ್ ಸಾಚ್ಯುರೇಟೆಡ್ ಫ್ಯಾಟೀ ಆಸಿಡ್ (MUFA) ಹಾಗೂ ಪಾಲಿ ಅನ್‌ಸ್ಯಾಚುರೇಟೆಡ್ ಫ್ಯಾಟೀ ಆಸಿಡ್(PUFA)ಗಳನ್ನು ಹೊಂದಿದ್ದು, ಈ ಕೊಬ್ಬು ನೂರಕ್ಕೆ ನೂರರಷ್ಟು ಸುರಕ್ಷಿತ ಕೊಬ್ಬು ಆಗಿರುತ್ತದೆ.

ಸಮಸ್ತ ವಿಶ್ವವನ್ನೇ ತಲ್ಲಣಗೊಳಿಸಿದ ಕೊರೊನಾ ಜಾಗತಿಕ ಪಿಡುಗಿನ ಸಮಯದಲ್ಲಿ ಎಲ್ಲರೂ ದೇಹದ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಲು ಸಹಾಯಕಾರಿಯಾಗುವ ಆಹಾರ ವಸ್ತುಗಳ ಬಗ್ಗೆ ಹೆಚ್ಚು ಚಿಂತನೆ ಮಾಡುತ್ತಿರುವುದು ತಮ್ಮೆಲ್ಲರಿಗೂ ತಿಳಿದೇ ಇದೆ. ಈ ಹಿನ್ನೆಲೆಯಲ್ಲಿ ಬಟರ್‌ಫ್ರೂಟ್ ಬಹು ಪ್ರಾಮುಖ್ಯತೆ ಪಡೆಯುತ್ತಿದೆ ಎಂಬುದು ಒಂದು ವಾಸ್ತವಿಕ ಸಂಗತಿಯಾಗಿರುತ್ತದೆ. ಈ ಕಾರಣದಿಂದಾಗಿಯೇ ಈ ಹಣ್ಣಿಗೆ ಎಲ್ಲಿಲ್ಲದ ಬೇಡಿಕೆ ಬಂದಿರುತ್ತದೆ. ಹಾಗಾಗಿ ಈ ಹಿಂದೆ ಅಜ್ಞಾತವಾಗುಳಿದಿದ್ದ ಬಟರ್ ಫ್ರೂಟ್ ಇತ್ತೀಚಿನಿಂದ ಹೆಚ್ಚು ಸುದ್ದಿಗೆ ಬರುತ್ತಿದೆ. ಮಾರುಕಟ್ಟೆಯಲ್ಲಿ ಈ ಹಣ್ಣಿಗೆ ಬೇಡಿಕೆ ಹೆಚ್ಚಿದಂತೆಲ್ಲಾ ಅನೇಕ ರೈತರು ಇದನ್ನು ಬೆಳೆಸಲು ಉತ್ಸಾಹ ತೋರುತ್ತಿದ್ದಾರೆ. ಈ ಹಣ್ಣಿನ ವೈಜ್ಞಾನಿಕ ಕ್ರಮಬದ್ಧ ಬೇಸಾಯದ ವಿವರಗಳನ್ನು ತಿಳಿದುಕೊಳ್ಳಲು ಪ್ರಯತ್ನ ಪಡುತ್ತಿದ್ದಾರೆ. ಇದೊಂದು ಹೊಸ ಫಲವಾಗಿರುವ ಕಾರಣ ಈ ವಿವರಗಳನ್ನು ರೈತರಿಗೆ ತಿಳಿಸಿಕೊಡುವುದರ ಅವಶ್ಯಕತೆ ಇದೆ. ಅಲ್ಲದೇ ಈ ಹಣ್ಣಿನ ಸಸಿ, ಕಸಿ ಗಿಡಗಳನ್ನು ಉತ್ಪಾದಿಸುವ ನರ್ಸರಿದಾರರಿಗೆ ಸಹ ಅಗತ್ಯ ಮಾರ್ಗದರ್ಶನ ನೀಡುವುದರ ಅಗತ್ಯತೆ ಕಂಡುಬಂದಿದೆ. ಬೇಡಿಕೆ ಹೆಚ್ಚಿರುವ ಕಾರಣ ನರ್ಸರಿ ಗಿಡಗಳ ಬೆಲೆ ಸಹ ಯದ್ವಾತದ್ವಾ ಹೆಚ್ಚುತ್ತಲಿದೆ. ಇದನ್ನೂ ಸಹ ನಿಯಂತ್ರಿಸಬೇಕಾಗಿದೆ.

ಈ ಎಲ್ಲ ಬೆಳವಣಿಗೆಗಳ ಹಿನ್ನೆಲೆಯಲ್ಲಿ ರೈತ ಸಮುದಾಯ ಈ ಹಣ್ಣಿನ ವೈಜ್ಞಾನಿಕ ಬೇಸಾಯದ ವಿವರಗಳು, ನರ್ಸರಿ ಸಸ್ಯ ಸಾಮಗ್ರಿಗಳ ಬಗೆಗೆ ಹೆಚ್ಚಿನ ತಿಳುವಳಿಕೆ, ಕೊಯ್ಲು, ಕೊಯ್ಲು-ನಂತರದ ಅಗತ್ಯ ಕ್ರಮಗಳು, ಮಾರಾಟ ಮಾಡುವಿಕೆ, ಹೀಗೆ ಹತ್ತಾರು ವಿಷಯಗಳ ಬಗ್ಗೆ ತುರ್ತಾಗಿ ಬೆಳಕನ್ನು ಚೆಲ್ಲಿ, ಅಗತ್ಯ ತಿಳುವಳಿಕೆ ನೀಡುವ ನಿಟ್ಟಿನಲ್ಲಿ ಡಾ. ಎಂ.ಹೆಚ್. ಮರೀಗೌಡ ಪ್ರತಿಷ್ಠಾನ, ಆರ್ಬೋರಿಕಲ್ಚರ್ ಅಸೋಸಿಯೇಷನ್ ಆಫ್ ಇಂಡಿಯಾದ ಬೆಂಗಳೂರು ಶಾಖೆ, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಹಳೆಯ ವಿದ್ಯಾರ್ಥಿಗಳ ಸಂಘ, ರಾಷ್ಟ್ರೀಯ ತೋಟಗಾರಿಕೆ ಮಂಡಳಿ, ಮತ್ತು ರಾಜ್ಯ ತೋಟಗಾರಿಕೆ ಇಲಾಖೆ ಸಹಯೋಗದೊಂದಿಗೆ ಕಳೆದ ಮಾಹೆಯಲ್ಲಿ "ಬಟರ್ ಫ್ರೂಟ್" ವೈಜ್ಞಾನಿಕ ಬೇಸಾಯಕ್ಕೆ ಸಂಬಂಧಿಸಿದ ವಿಚಾರ ಸಂಕಿರಣವನ್ನು ಬೆಂಗಳೂರಿನ ಹೆಬ್ಬಾಳದಲ್ಲಿರುವ ಪಶುವೈದ್ಯಕೀಯ ಮಹಾವಿದ್ಯಾಲಯ ಆವರಣದಲ್ಲಿನ ಹಳೇ ವಿದ್ಯಾರ್ಥಿಗಳ ಸಂಘದ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

> **ಬಟರ್ ಫ್ರೂಟ್ ಹಣ್ಣಿನಲ್ಲಿ ವಿಟಮಿನ್ ಎ, ಬಿ ಮತ್ತು ಇ ಅಂಶಗಳು ಯಥೇಚ್ಛವಾಗಿರುವ ಜೊತೆಗೆ ಆರೋಗ್ಯಕ್ಕೆ ಬೇಕಾಗುವ ಪ್ರೋಟೀನ್, ಫೈಬರ್ ಮತ್ತು ಖನಿಜಾಂಶಗಳು ಸಿಗಲಿದೆ.**

ಕರ್ನಾಟಕ ರಾಜ್ಯದಲ್ಲಿ ಈ ವಿಷಯದ ಬಗ್ಗೆ ನಡೆದ ಮೊಟ್ಟ ಮೊದಲನೇ ವಿಚಾರ ಸಂಕಿರಣದ ಪ್ರಯೋಜನವನ್ನು ರೈತರು, ನರ್ಸರಿದಾರರು, ಬಳಕೆದಾರರು, ಮಾರಾಟಗಾರರು, ಸಂಸ್ಕರಣೆಗಾರರು ಸೇರಿದಂತೆ ಸುಮಾರು 350 ಜನರು ಈ ವಿಚಾರ ಸಂಕಿರಣದ ಪ್ರಯೋಜನ ಪಡೆದುಕೊಂಡರು. ಬಟರ್ ಫ್ರೂಟ್ ಬೆಳೆಯಲು ಆಸಕ್ತಿ ಹೊಂದಿರುವ ರೈತರು ಹೆಚ್ಚಿನ ಮಾಹಿತಿಗೆ ರಾಷ್ಟ್ರೀಯ ತೋಟಗಾರಿಕೆ ಮಂಡಳಿ ಅಥವಾ ತೋಟಗಾರಿಕೆ ಇಲಾಖೆಯನ್ನು ಸಂಪರ್ಕಿಸಬಹುದು. ಅಲ್ಲದೆ ನಿವೃತ್ತ ಹೆಚ್ಚುವರಿ ತೋಟಗಾರಿಕೆ ನಿರ್ದೇಶಕರಾದ ಮತ್ತು ತೋಟಗಾರಿಕೆ ತಜ್ಞರಾದ ಡಾ. ಎಸ್.ವಿ. ಹಿತ್ತಲಮನಿ ಅವರನ್ನು 9448999202 ಮೂಲಕ ಸಂಪರ್ಕಿಸಬಹುದು. ■




Downloaded From: www.kpscvaani.com

# ಸಾಕು ಪ್ರಾಣಿಗಳು ರಕ್ತದಾನ ಮಾಡಬಹುದು







**ಇದು ನಿಮಗೆ ಗೊತ್ತೇ... ನಿಮ್ಮ ಸಾಕು ಪ್ರಾಣಿಗಳಾದ ನಾಯಿ, ಬೆಕ್ಕುಗಳನ್ನು ರಕ್ತದಾನಿಗಳಾಗಿ ಮಾಡುವ ಮೂಲಕ, ಅನಾರೋಗ್ಯದಿಂದ ಸಂಕಷ್ಟದಲ್ಲಿರುವ ಮತ್ತೊಂದು ಪ್ರಾಣಿಯ ಜೀವವನ್ನು ಉಳಿಸಲು ಸಾಧ್ಯವಿದೆ.**

ಹರೀಶ್

ನಿಮಗೇ ಗೊತ್ತೇ... ಮಾನವರಂತೆ ಸಾಕು ಪ್ರಾಣಿಗಳೂ ರಕ್ತದಾನಿಗಳಾಗಿ ನೋಂದಾಯಿಸಿಕೊಳ್ಳಬಹುದು. ಹೀಗೆ ನೋಂದಾಯಿಸಿಕೊಳ್ಳುವುದರಿಂದ ಅನಾರೋಗ್ಯದಿಂದ ಬಳಲುತ್ತಿರುವ, ರಕ್ತದ ಅವಶ್ಯಕತೆ ಇರುವ ನಾಯಿ ಅಥವಾ ಬೆಕ್ಕುಗಳಿಗೆ ತುರ್ತಾಗಿ ರಕ್ತದಾನ ಮಾಡಬಹುದು.

ಸಾಕು ಪ್ರಾಣಿಗಳ ಪಾಲಕರು/ಮಾಲೀಕರು ತಮ್ಮ ಸಾಕು ಪ್ರಾಣಿಗಳಾದ ನಾಯಿ ಮತ್ತು ಬೆಕ್ಕುಗಳನ್ನು ರಕ್ತದಾನಿಗಳಾಗಿ ನೋಂದಾಯಿಸಬಹುದು. ರಕ್ತದ ಅಗತ್ಯವಿರುವ ಸಂದರ್ಭದಲ್ಲಿ ಪಶುವೈದ್ಯರು ಸಾಕು ಪ್ರಾಣಿಗಳ ಪಾಲಕರನ್ನು ಹುಡುಕಲು ಆರಂಭಿಸುತ್ತಾರೆ. ನಿಗದಿತ ಸಮಯಕ್ಕೆ ರಕ್ತ ಸಿಗದೆ ಎಷ್ಟೋ ಮಂದಿ ತಮ್ಮ ಸಾಕು ಪ್ರಾಣಿಯನ್ನು ಕಳೆದುಕೊಳ್ಳುತ್ತಾರೆ. ಆದರೆ ತಮ್ಮ ಸಾಕು ಪ್ರಾಣಿಯನ್ನು ರಕ್ತದಾನಿಗಳಾಗಿ ನೋಂದಯಿಸುವ ಮೂಲಕ ಅತ್ಯಂತ ತುರ್ತು ಸಂದರ್ಭದಲ್ಲಿ ಅವಶ್ಯಕತೆ ಇರುವ ಪ್ರಾಣಿಯ ಜೀವವನ್ನು ರಕ್ಷಿಸಬಹುದು.

ಮಾನವರಿಗಾದರೆ ಹಲವಾರು ಬ್ಲಡ್ ಬ್ಯಾಂಕ್‌ಗಳು ಇರುತ್ತವೆ. ಆದರೆ ಪ್ರಾಣಿಗಳಿಗೆ ಈ ರೀತಿಯ ಸೌಕರ್ಯವಿರುವುದಿಲ್ಲ. ಸಾಕು ನಾಯಿ ಅಥವಾ ಬೆಕ್ಕಿಗೆ



Downloaded From: www.kpscvaani.com





**ಬೆಕ್ಕುಗಳಲ್ಲಿ ಎ ರಕ್ತ ಗುಂಪು ಸಾಮಾನ್ಯ ಕಂಡುಬರುತ್ತದೆ. ಸಿ ಮತ್ತು ಎಬಿ ರಕ್ತ ಗುಂಪು ತುಂಬಾ ವಿರಳ. 1–6 ವರ್ಷದ ಒಳಗಿನ, ಮೂರುವರೆ ಕೆ. ಜಿ ಅಥವಾ ಅದಕ್ಕಿಂತಲೂ ಹೆಚ್ಚು ತೂಕವನ್ನು ಹೊಂದಿರುವ ಮತ್ತು ಕಾಲಕಾಲಕ್ಕೆ ಆರೋಗ್ಯ ತಪಾಸಣೆಗೆ ಒಳಗಾಗುತ್ತಿರುವ, ಲಸಿಕೆಯನ್ನು ಹಾಕಿಸಿಕೊಂಡಿರುವ ಬೆಕ್ಕುಗಳನ್ನು ರಕ್ತದಾನಕ್ಕೆ ನೋಂದಾಯಿಸಬಹುದು.**

ರಕ್ತದ ಅಗತ್ಯವಿದ್ದಾಗ ಪಶುವೈದ್ಯರು ಸಾಕು ಪ್ರಾಣಿಗಳ ಪಾಲಕರ ಹುಡುಕಾಟ ನಡೆಸುತ್ತಾರೆ. ಅಲ್ಲದೆ ಹೀಗೆ ಹುಡುಕಾಟ ನಡೆಸುವ ಜೊತೆಗೆ ರಕ್ತದಾನಕ್ಕಾಗಿ ಪಾಲಕರ ಮನವೊಲಿಸಬೇಕಾಗುತ್ತದೆ. ಅಷ್ಟರಲ್ಲಿ ತುರ್ತು ರಕ್ತದ ಅಗತ್ಯವಿರುವ ಪ್ರಾಣಿ ಬದುಕುಳಿಯುವುದು ಕಷ್ಟ.




ಮನುಷ್ಯರಂತೆ ರಕ್ತದಾನ ಪ್ರಕ್ರಿಯೆಯು ಪ್ರಾಣಿಗಳಲ್ಲಿ ಸಾಧ್ಯವಿಲ್ಲ, ಜೊತೆಗೆ ಅದು ಅಷ್ಟು ಸುಲಭವೂ ಅಲ್ಲ. ಈ ವಿಚಾರ ಬಹುಪಾಲು ಸಾಕುಪ್ರಾಣಿಗಳ ಮಾಲೀಕರಿಗೆ ತಿಳಿದಿರುವುದಿಲ್ಲ. ಹಾಗಾಗಿ ಸಮಯಕ್ಕೆ ಸರಿಯಾಗಿ ರಕ್ತ ಸಿಗದ ಕಾರಣ ಸಾಕಷ್ಟು ಪ್ರಾಣಿಗಳು ಪ್ರಾಣ ಕಳೆದುಕೊಳ್ಳುತ್ತವೆ.

'ಡಾಗ್ ಎರಿಥ್ರೋಸೈಟ್ ಆಂಟಿಜೆನ್' ಎಂಬುದು ನಾಯಿಗಳಲ್ಲಿ ಇರುವ ಸಾಮಾನ್ಯವಾದ ರಕ್ತದ ಗುಂಪು. ಇದಲ್ಲದೆ ನಾಯಿಗಳಲ್ಲಿ ಸುಮಾರು 12 ಕ್ಕೂ ಹೆಚ್ಚು ರಕ್ತದ ಗುಂಪುಗಳಿರುತ್ತವೆ. ತೀವ್ರ ರಕ್ತಸ್ರಾವ, ರಕ್ತಹೀನತೆ, ರಕ್ತ ಹೆಪ್ಪುಗಟ್ಟುವಿಕೆ ಅಥವಾ ಮತ್ತಿತರ ಕಾಯಿಲೆ ಇರುವ ನಾಯಿ ಚೇತರಿಸಿಕೊಳ್ಳಬೇಕಾದರೆ ರಕ್ತದ ಅವಶ್ಯಕತೆ ಇರುತ್ತದೆ.

ಆದರೆ ಸಮಯಕ್ಕೆ ಸರಿಯಾಗಿ ಆರೋಗ್ಯವಂತ ನಾಯಿಯಿಂದ ರಕ್ತ ಪಡೆಯಲು ಹೆಚ್ಚು ಸಮಯ ತೆಗೆದುಕೊಳ್ಳುವುದರಿಂದ ರಕ್ತದ ಅವಶ್ಯಕತೆ ಇರುವಂತಹ ನಾಯಿಗಳ ಜೀವ ಸಂಕಷ್ಟದಲ್ಲಿರುತ್ತದೆ. ಇನ್ನು ಸಾಕು ಪ್ರಾಣಿಗಳಲ್ಲಿ ರಕ್ತದಾನ ಮಾಡುವುದು ಸಂಪೂರ್ಣ ಸುರಕ್ಷಿತವಾಗಿದ್ದು, ದಾನಿ ನಾಯಿ ಅಥವಾ ಬೆಕ್ಕಿನ ಆರೋಗ್ಯದ ದೃಷ್ಟಿಯಿಂದಲೂ ಒಳ್ಳೆಯದು ಎಂಬುದು ಮೈಸೂರಿನಲ್ಲಿ ಪೆಟ್ ಕ್ಲಿನಿಕ್ ನಡೆಸುತ್ತಿರುವ ಪಶುವೈದ್ಯರಾದ ಡಾ. ಹೆಚ್.ವಿ.ದೀಪಕ್ ಅವರ ಅಭಿಪ್ರಾಯ. ದೇಸಿ ನಾಯಿಯೊಂದು ಕಳೆದ ಎರಡು ವರ್ಷದಲ್ಲಿ ರಕ್ತದಾನ ಮಾಡಿ ಸುಮಾರು 10 ನಾಯಿಗಳ ಜೀವ ಉಳಿಸಿದೆ ಎಂದು ಅವರು ತಿಳಿಸಿದ್ದಾರೆ.

ದೇಹದ ತೂಕ 25 ಕೆಜಿಗಿಂತ ಹೆಚ್ಚಿರುವ ಮತ್ತು 40 ಕ್ಕಿಂತ ಹೆಚ್ಚು ಪ್ಯಾಕ್ಡ್ ಸೆಲ್ ವಾಲ್ಯೂಮ್ (ಪಿಸಿವಿ) ಹೊಂದಿರುವ 1 ರಿಂದ 8 ವರ್ಷದ ಯಾವುದೇ ಆರೋಗ್ಯಕರವಾದ, ಬಹು ಮುಖ್ಯವಾಗಿ ಲಸಿಕೆ ಪಡೆದಿರುವ ಮತ್ತು ನಿಯಮಿತ ಸಮಯದಲ್ಲಿ ಡಿ-ವರ್ಮ್ಡ್ ಆಗಿರುವ ನಾಯಿಗಳು ರಕ್ತದಾನ ಮಾಡಲು ಸಾಧ್ಯವಿದೆ.

ತಮ್ಮ ಸಾಕು ಪ್ರಾಣಿಗಳನ್ನು ರಕ್ತದಾನಕ್ಕೆ ನೋಂದಾಯಿಸಿದರೆ, ತುರ್ತು ಸಂದರ್ಭದಲ್ಲಿ ಪಶುವೈದ್ಯರು ಅಗತ್ಯವಿರುವ ರಕ್ತದ ಗುಂಪನ್ನು ಹೊಂದಿರುವ ಸಾಕು ಪ್ರಾಣಿಯ ಮಾಲೀಕರನ್ನು ಕೂಡಲೇ ಸಂಪರ್ಕಿಸಲು ಸಾಧ್ಯವಾಗುತ್ತದೆ. ಇದರಿಂದ ರಕ್ತದಾನಕ್ಕಾಗಿ ಹುಡುಕಾಡುವ ಸಮಯ ಉಳಿಯುವ ಜೊತೆಗೆ ಸಂಕಷ್ಟದಲ್ಲಿರುವ ಪ್ರಾಣಿಯ ಪ್ರಾಣವು ಉಳಿಯುತ್ತದೆ. ಹಾಗಾಗಿ ನಾಯಿ ಮತ್ತು ಬೆಕ್ಕು ಸಾಕಿರುವವರು ತಮ್ಮ ಸಮೀಪದ ಪೆಟ್ ಕ್ಲಿನಿಕ್‌ಗಳಲ್ಲಿ ಅಥವಾ ಮೊಬೈಲ್ ನಂಬರ್ 94807–02704 ಗೆ ಕರೆ ಮಾಡಿಯಾದರೂ ತುರ್ತು ರಕ್ತದಾನಿಯಾಗಿ ತಮ್ಮ ಸಾಕು ಪ್ರಾಣಿಯ ಹೆಸರನ್ನು ನೋಂದಾಯಿಸಬಹುದು.

ಹಾಗಾಗಿ ತಪ್ಪದೇ ತಮ್ಮ ಸಾಕು ನಾಯಿ ಮತ್ತು ಬೆಕ್ಕುಗಳನ್ನು ರಕ್ತದಾನಿಗಳಾಗಿ ನೋಂದಾಯಿಸುವ ಮೂಲಕ ಮತ್ತೊಂದು ಪ್ರಾಣಿಯ ಜೀವ ಉಳಿಸಲು ನೆರವಾಗಬಹುದು. ■



Downloaded From: www.kpscvaani.com

# ಜನರನ್ನು ಆಕರ್ಷಿಸುತ್ತಿರುವ
# ಕೋಟಿ ಚೆನ್ನಯ ಥೀಮ್ ಪಾರ್ಕ್

**ಕೋಟಿ ಚೆನ್ನಯರ ಪರಿಚಯ ಮಾಡಿಸುವ ಜೊತೆಗೆ ಸ್ಥಳೀಯ ಸಂಸ್ಕೃತಿಯನ್ನು ತಿಳಿಸಿಕೊಡುವ ನಿಟ್ಟಿನಲ್ಲಿ ಮಾರ್ಪಾಡುಗೊಂಡಿರುವ ಈ ಥೀಮ್ ಪಾರ್ಕ್, ಮತ್ತಷ್ಟು ಜನರನ್ನು ಆಕರ್ಷಿಸುತ್ತಿದೆ.**

ಸೌಮ್ಯ, ಕಾರ್ಕಳ





ಅನಾದಿ ಕಾಲದಿಂದಲೂ ಕರಾವಳಿ ಎಲ್ಲೆಡೆ ಅವಳಿ–ವೀರ ಯೋಧರು ಎಂದೆನಿಸಿಕೊಂಡಿರುವ ಕೋಟಿ–ಚೆನ್ನಯರ ಕಥೆಯನ್ನು ಕೇಳಿದವರಿಲ್ಲ. ಅವರ ಯಶೋಗಾಥೆಯನ್ನು ಪಸರಿಸುವ ನಿಟ್ಟಿನಲ್ಲಿ, ಕಾರ್ಕಳ ನಗರಿಯಲ್ಲಿ **'ಕೋಟಿ ಚೆನ್ನಯ ಥೀಮ್ ಪಾರ್ಕ್'** ಎಂಬ ಭವ್ಯವಾದ ಕಟ್ಟಡ ಒಂದು ನಿರ್ಮಾಣಗೊಂಡಿದೆ.

ಕೋಟಿ–ಚೆನ್ನಯರ ಕುರಿತು ತಿಳಿದುಕೊಳ್ಳಬಹುದಾಂತಹ ವಸ್ತು ಸಂಗ್ರಹಾಲಯದ ಜೊತೆಗೆ ಸ್ಥಳೀಯ ಸಂಸ್ಕೃತಿಯನ್ನು ಪರಿಚಯ ಮಾಡಿಕೊಡುವ ವಿಶಿಷ್ಟ ಥೀಮ್ ಪಾರ್ಕ್ ಆಗಿ ಮಾರ್ಪಾಡುಗೊಂಡಿದೆ. ಹಾಗಾಗಿ ಈಗ ಈ ಥೀಮ್ ಪಾರ್ಕ್‌ಗೆ ಭೇಟಿ ನೀಡುವವರ ಸಂಖ್ಯೆಯು ಅಧಿಕವಾಗಿದ್ದು, ಜನರನ್ನು ಮತ್ತಷ್ಟು ಆಕರ್ಷಿಸುತ್ತಿದೆ.

ಕರಾವಳಿಯ ತುಳುನಾಡಿನ ಚರಿತ್ರೆಯಲ್ಲಿ ಕೋಟಿ–ಚೆನ್ನಯರು ಸುಮಾರು 450 ವರ್ಷಗಳ ಹಿಂದೆ ಪುತ್ತೂರು ತಾಲೂಕಿನ ಪಡುಮಲೆಯಲ್ಲಿ ದೇಯಿಬೈದೆತಿಯ ಗರ್ಭದಲ್ಲಿ ಜನ್ಮ ತಳೆದು, ಸಾಮಾಜಿಕ ವ್ಯವಸ್ಥೆಯ ತಾರತಮ್ಯದ ವಿರುದ್ಧ ಹೋರಾಡಿದಂತಹ ಧೀಮಂತರು. ಇವರ ಜೀವನಗಾಥೆ ತುಳುನಾಡಿನ ಮಣ್ಣಿನಲ್ಲಿ ಇಂದಿಗೂ ಜೀವಂತಗೊಂಡಿದೆ. ಈ ವೀರ ಪುರುಷರ ಕಥೆಯನ್ನು ಆಧಾರವಾಗಿಟ್ಟುಕೊಂಡು ಕಾರ್ಕಳದಲ್ಲಿ ಕೋಟಿ–ಚೆನ್ನಯ ಹೆಸರಿನ ಥೀಮ್ ಪಾರ್ಕ್ ಅನ್ನು 100 ಎಕರೆ ಜಾಗದಲ್ಲಿ, 1.87ಕೋಟಿ ವೆಚ್ಚದಲ್ಲಿ 2012 ನೇ ಇಸವಿಯಲ್ಲಿ ನಿರ್ಮಾಣ ಮಾಡಲಾಯಿತು.

ಕರಾವಳಿಯ ಭಾಗದಲ್ಲಿ ಕೋಟಿ–ಚೆನ್ನಯರನ್ನು ದೇವರು ಎಂದು ಭಕ್ತಿಯಿಂದ ಪೂಜಿಸಿಕೊಂಡು ಬಂದಿದ್ದಾರೆ. ಇವರ ಜೀವನಚರಿತ್ರೆ ಹಾಗೂ





Downloaded From: www.kpscvaani.com



ತುಳುನಾಡಿನ ಪರಂಪರೆಗಳನ್ನು ಥೀಮ್ ಪಾರ್ಕ್ ವಸ್ತು ಸಂಗ್ರಹಾಲಯದಲ್ಲಿ ರೂಪಿಸಲಾಗಿದೆ.

ತುಳು ಜನರು ಕೋಟಿ-ಚೆನ್ನಯರನ್ನು ದೇವರುಗಳೆಂದು ನಂಬಿಕೊಂಡು ಬಂದಿರುವ ಹಿನ್ನೆಯಲ್ಲಿ ಈ ಪಾರ್ಕ್ ತುಳುನಾಡಿನ ಈ ಅದ್ಯಮ ಪರಂಪರೆಯ ನಿಶಾನೆಯಾಗಿ ನಿಂತಿದ್ದು. ಐತಿಹಾಸಿಕ ವಸ್ತು ಸಂಗ್ರಹಾಲಯದೊಂದಿಗೆ, 5 ಅಡಿ ಎತ್ತರದ ಪೀಠದ ಮೇಲೆ ಸ್ಥಾಪಿಸಲಾದ ಹತ್ತು ಅಡಿ ಎತ್ತರವುಳ್ಳ ಕೋಟಿ-ಚೆನ್ನಯರ ಶಿಲಾ ಮೂರ್ತಿಗಳು ಇಲ್ಲಿನ ಪ್ರಮುಖ ಆಕರ್ಷಣೆ. ಕಾರ್ಕಳದ ಶಿಲ್ಪಿ ಜಯರಾಜ ಆಚಾರ್ಯ ಅವರು ಈ ಶಿಲ್ಪಗಳನ್ನು ಕೆತ್ತಿರುತ್ತಾರೆ.

**ಗುತ್ತಿನ ಮನೆಗೆ ಹೋಲಿಸುವ 'ಹೆಬ್ಬಾಗಿಲು ಚಾವಡಿ'**

ಥೀಮ್ ಪಾರ್ಕ್ ವಸ್ತು ಸಂಗ್ರಹಾಲಯ ಪ್ರವೇಶಿಸುತ್ತಿದ್ದಂತೆ ಗುತ್ತಿನಮನೆ ಹೆಬ್ಬಾಗಿಲು ಚಾವಡಿಯನ್ನು ಕಾಣಬಹುದು. ಮೊದಲ ಆವರಣದಲ್ಲಿ ಮುಖ್ಯದ್ವಾರದ ಕಡೆ ಪ್ರವೇಶಿಸುತ್ತಿದ್ದಂತೆ, ಸುತ್ತಲೂ ಗೋಡೆಗಳ ಮೇಲೆ ಜನಪದವನ್ನು ಬಿಂಬಿಸುವಂತಹ ವರ್ಲಿ ಕಲಾಕೃತಿಗಳು ಹಾಗೂ ಸುಂದರ ಹೂವುಗಳಿಂದ ತುಂಬಿರುವ ಉದ್ಯಾವನವನ್ನು ಕಣ್ಣುತುಂಬಿಕೊಳ್ಳಬಹುದು. ಮುಂದೆ ಸಾಗಿದಂತೆ ಗರೋಡಿ ಮಾದರಿ, ಅದರ ಸುತ್ತ ಆವರಣ, ಆವರಣದಲ್ಲಿ ಕೋಟಿ-ಚೆನ್ನಯರ ಹುಟ್ಟಿನಿಂದ ಅವಸಾನದವರೆಗಿನ ಕಥೆ ಹೇಳುವ 34 ತೈಲ ಚಿತ್ರಗಳ ರಚನೆ, ಕೋಟಿ-ಚೆನ್ನಯರ ಬದುಕಿನ ಘಟನಾವಳಿಯನ್ನು ನೆನಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಗೋಡೆಗಳ ಮೇಲೆ ತುಳು ಪರಂಪರೆಯ ಕಂಬಳ (ಕ್ರೀಡೆ) ಹಾಗೂ ಇನ್ನಿತರ ಜೀವನ ಶೈಲಿಗಳ ಚಿತ್ರಗಳನ್ನು ಇಡಲಾಗಿದೆ.

**ಕರಾವಳಿಯ ಕಲೆ:**

ತುಳು ಸಮುದಾಯಗಳಲ್ಲಿ ಕಾಣಬಹುದಾದಂತಹ ಕಾವಿ ಕಳೆ, ಹಾಗೂ ಸಾಂಸ್ಕೃತಿಕ ಮನೆಗಳ ರಚನಾಶೈಲಿಯನ್ನೇ ಇಲ್ಲಿನ ವಸ್ತು ಸಂಗ್ರಹಾಲಯದ ರಚನೆಯಲ್ಲಿ ಬಳಸಲಾಗಿದೆ. ಅಲ್ಲದೆ, ಕನ್ನಡ ಹಾಗೂ ತುಳು ಸಂಸ್ಕೃತಿಗಳ ಪ್ರತೀಕಗಳಾಗಿರುವ ನಂದಿಕೇಶ್ವರ, ವೀರಭದ್ರ, ಗೊಮ್ಮಟ ಮಲ್ಲ, ಸಂಸಾರ



ಬ್ರಹ್ಮ ಹಾಗೂ ಇನ್ನಿತರ ಮೂರ್ತಿಗಳ ಜೊತೆ ದಿನನಿತ್ಯದ ಉಪಯೋಗಕ್ಕೆ ಬಳಸುತ್ತಿದ್ದ ಹಿಂದಿನ ಕಾಲದ ಮರದ ಹಳೆ ಸಾಮಾಗ್ರಿಗಳನ್ನೂ ಓರಣವಾಗಿ ಜೋಡಿಸಲಾಗಿದೆ, ಇದು ಜನರನ್ನು ಮತ್ತಷ್ಟೂ ಆಕರ್ಷಿಸುತ್ತದೆ.

**ಅವಳಿ-ವೀರರ ನೆನಪಿಗಾಗಿ:**

ಅವಳಿ ವೀರರಾದ ಕೋಟಿ-ಚೆನ್ನಯರ ಬೇಟೆಯ ಪರಿಕರಗಳು, ತರ್ಕತ್ತಿ, ಕೈತಲೆ, ಕಾರತಲೆ, ಕೋಲು, ತ್ರಾಮದ ಬುತ್ತಿ, ಕೌಳಿಗೆ, ಕಂಚಿನ ಉರುಳಿ, ಯುದ್ಧಕ್ಕೆ ಬಳಸುತ್ತಿದ್ದ ಖಡ್ಗ, ಚೆನ್ನಮಣೆ, ಬೀಸುಗತ್ತಿ ಬೇಟೆ ಪರಿಕರಗಳು, ಕಂಚಿನ ಬುಟ್ಟಿ, ಮರದ ಶ್ಯಾವಿಗೆ ಸೇರು, ಮೊಸರು ಕಡಿಯುವ ವಿವಿಧ ಮರದ ಸಲಕರಣೆಗಳು, ಕೊಂಬು, ಕಹಳೆ, ವಾಲಗ, ನದಿಯ ದೋಣಿ, ಎತ್ತಿನಗಾಡಿಯ ಚಕ್ರಗಳು, ಹಳೆ ಕಾಲದ ವಿಭಿನ್ನ ಮಾದರಿಯ ವಿಗ್ರಹಗಳು, ಗರಡಿ ಮನೆಗಳ ಜೋಕಾಲಿಗಳು ಇವೆಲ್ಲವೂ ಥೀಮ್ ಪಾರ್ಕ್‌ಗೆ ಕಳೆಕಟ್ಟಿವೆ. ಥೀಮ್ ಪಾರ್ಕ್‌ನಲ್ಲಿ ದೈವರಾಧನೆಯ ಗುಡಿಯಾದ ಗರೋಡಿಯ ಮಾದರಿಯೂ ಇದ್ದು, ಕೋಟಿಚೆನ್ನೆಯರ ಜೀವನವನ್ನು ಬಿಂಬಿಸುವ 143 ಚಿತ್ರಣಗಳನ್ನು ಇಲ್ಲಿ ಕಾಣಬಹುದಾಗಿದೆ.

**ಕೋಟಿ ಚೆನ್ನಯ ಥೀಮ್ ಪಾರ್ಕ್ ಎಲ್ಲಿದೆ:**

ಕೋಟಿ ಚೆನ್ನಯ ಥೀಮ್ ಪಾರ್ಕ್ ಕಾರ್ಕಳದಿಂದ ಐದು ಕಿಲೋಮೀಟರ್ ದೂರದಲ್ಲಿದ್ದು, ಮಂಗಳೂರಿನಿಂದ ಸುಮಾರು 50 ಕಿಲೋ. ಮೀಟರ್ ದೂರದಲ್ಲಿದೆ. ಸಾರ್ವಜನಿಕರಿಗೆ ಉಚಿತ ಪ್ರವೇಶವಿದ್ದು, ಬೆಳಿಗ್ಗೆ 9 ರಿಂದ ಸಂಜೆ 7ರವರೆಗೆ ತೆರೆದಿರುತ್ತದೆ.

ತುಳುನಾಡಿನ ಸಂಸ್ಕೃತಿಯನ್ನು ವೈಭವೀಕರಿಸುವುದು ಥೀಮ್ ಪಾರ್ಕ್‌ನ ಮುಖ್ಯ ಗುರಿಯಾಗಿದೆ. ಧೀರ ವೀರರಿಗೆ ಗೌರವ ಸಲ್ಲಿಸುವುದು ಮತ್ತು ಕರಾವಳಿ ಪ್ರದೇಶದ ಸಂಸ್ಕೃತಿಯನ್ನು ಪ್ರತಿನಿಧಿಸುವುದು ಥೀಮ್ ಪಾರ್ಕ್‌ನ ಉದ್ದೇಶವಾಗಿದೆ. ಈ ತುಳುನಾಡಿಗೆ ತಮ್ಮ ಜೀವನವನ್ನೆ ಮುಡುಪಾಗಿಟ್ಟ ಅವಳಿ ವೀರರ ಜೀವನಕಥೆಯು ಮುಂದಿನ ಪೀಳಿಗೆವರೆಗೂ ಪಸರಿಸುವಂತಾಗಲಿ...



Downloaded From: www.kpscvaani.com



# ಪ್ರಧಾನಮಂತ್ರಿ ಪೋಷಣ್ ಅಭಿಯಾನ:

## ಅಪೌಷ್ಟಿಕತೆ ನಿವಾರಣೆಗೆ ಸೋಪಾನ

ಜಿ.ಎಸ್.ರಮ್ಯಾ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶೇಕಡ 60–40 ಅನುಪಾತದಲ್ಲಿ ವೆಚ್ಚ ಭರಿಸಲಿವೆ. ವಿಶೇಷ ರಾಜ್ಯಗಳ ಯೋಜನೆಯಡಿ ಹಿಂದುಳಿದ, ಗುಡ್ಡಗಾಡಿನ ಕೆಲ ರಾಜ್ಯಗಳಿಗೆ ಶೇಕಡ 90–10 ಅನುಪಾತವೂ ಅನ್ವಯ. ಇದು ಅಪೌಷ್ಟಿಕತೆ ವಿರುದ್ಧ ಸರ್ಕಾರದ ಸಮರ. ಮಕ್ಕಳನ್ನು ಈ ಸಮಸ್ಯೆಯಿಂದ ಹೊರತಂದು, ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಉತ್ತೇಜಿಸುವುದು, ಶಾಲೆಗೆ ಸೇರುವ ಮಕ್ಕಳ ಸಂಖ್ಯೆ ಹೆಚ್ಚಿಸುವುದು, ಶಾಲೆ ತೊರೆಯುವುದಕ್ಕೆ ಮಂಗಳ ಹಾಡುವುದು, ಹೆಣ್ಣು ಮಕ್ಕಳ ಶೈಕ್ಷಣಿಕ ಸಬಲೀಕರಣದ ಮೂಲಕ ದೇಶವನ್ನು ಸಾಕ್ಷರರ ನಾಡನ್ನಾಗಿ ಪರಿವರ್ತಿಸುವುದೇ ಈ ಯೋಜನೆಯ ಮುಖ್ಯ ಉದ್ದೇಶ.

ಒಂದನೇ ತರಗತಿಯಿಂದ ಎಂಟನೇ ತರಗತಿವರೆಗಿನ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ನೀಡಲಾಗುತ್ತಿದ್ದು, ಈಗ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿಯ ಸರ್ಕಾರಿ ಬಾಲವಾಟಿಕ, ಅಂಗನವಾಡಿ ಮಕ್ಕಳಿಗೂ ಇದನ್ನು ವಿಸ್ತರಿಸಲಾಗಿದೆ. ಮಕ್ಕಳ ಹಾಜರಾತಿ ಹೆಚ್ಚಿಸಲು ಮತ್ತು ಅಪೌಷ್ಟಿಕತೆ ಸಮಸ್ಯೆ ನಿವಾರಿಸಲು ಕೇಂದ್ರ ಸರಕಾರ 1995 ರಲ್ಲಿ ಬಿಸಿಯೂಟ ಯೋಜನೆಗೆ ಚಾಲನೆ ನೀಡಿತ್ತು. ಇದೀಗ ಪೌಷ್ಟಿಕಾಂಶದ ಕೊರತೆ ಪ್ರಮಾಣ ಹೆಚ್ಚಿರುವ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ವರ್ಷದ 46 ದಿನ ಮೊಟ್ಟೆ ನೀಡುವ ನಿರ್ಧಾರ ಕೈಗೊಂಡಿರುವುದು ಉತ್ತಮ ಬೆಳವಣಿಗೆಯಾಗಿದೆ.

ದೇಶಾದ್ಯಂತ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಎಂಟನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಪೌಷ್ಟಿಕಾಂಶಯುಕ್ತ ಬಿಸಿಯೂಟ ಒದಗಿಸುವ ಮಹತ್ವಾಕಾಂಕ್ಷಿ ಯೋಜನೆಯೇ



Downloaded From: www.kpscvaani.com

ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ನೀಡುವ ವ್ಯವಸ್ಥೆಗೆ ಪೋಷಣೆಯ ಬಲ ನೀಡಲು ಕೇಂದ್ರ ಸರ್ಕಾರ ಮುಂದಾಗಿದೆ. ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಎಂಟನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪೌಷ್ಟಿಕ ಆಹಾರ ನೀಡುವ ಪ್ರಧಾನಮಂತ್ರಿ ಪೋಷಣ್ ಶಕ್ತಿ ನಿರ್ಮಾಣ್ ಯೋಜನೆ ಅನುಷ್ಠಾನಗೊಳ್ಳಲಿದೆ.



"ಪ್ರಧಾನಮಂತ್ರಿ ಪೋಷಣ್ ಶಕ್ತಿ ನಿರ್ಮಾಣ್". ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ನೀಡುವ ವ್ಯವಸ್ಥೆ ಹಲವು ವರ್ಷಗಳಿಂದ ಚಾಲ್ತಿಯಲ್ಲಿದೆ. ಈ ಮಧ್ಯಾಹ್ನ ಬಿಸಿಯೂಟದ ಯೋಜನೆಯನ್ನು ಪೋಷಣ್ ಯೋಜನೆಯೊಂದಿಗೆ ವಿಲೀನಗೊಳಿಸಲಾಗಿದೆ. ಮಧ್ಯಾಹ್ನದ ಬಿಸಿಯೂಟ ವ್ಯವಸ್ಥೆಯ ಮರುನಾಮಕರಣ ಎಂದೂ ಹೇಳಬಹುದು. ಈ ಯೋಜನೆ ಮಕ್ಕಳು ಶಾಲೆ ತೊರೆಯುವುದನ್ನು ತಪ್ಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ.

ಪ್ರಸಕ್ತ ಸಾಲಿನಿಂದ ಅಂದರೆ 2021–22 ರಿಂದ ಐದು ವರ್ಷಗಳ ಅವಧಿಗೆ ಆರಂಭಿಕವಾಗಿ ಜಾರಿಯಲ್ಲಿರಲಿರುವ ಪೋಷಣ್ ಶಕ್ತಿ ನಿರ್ಮಾಣ್ ಯೋಜನೆಯಿಂದಾಗಿ ಸುಮಾರು 11.80 ಕೋಟಿ ಮಕ್ಕಳಿಗೆ ಪೌಷ್ಟಿಕ ಆಹಾರ ಸಿಗಲಿದೆ ಎಂದು ಅಂದಾಜಿಸಲಾಗಿದೆ. ಈ ಯೋಜನೆಯಿಂದ ದೇಶದ 11.20 ಲಕ್ಷ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ಎಂಟನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಪೌಷ್ಟಿಕ ಆಹಾರ ಸಿಗಲಿದೆ. ಶಾಲೆಗಳಿಗೆ ಹಾಜರಾತಿ ದಿನಗಳಂದು ಮಾತ್ರವಲ್ಲದೇ ಹಬ್ಬ, ಹರಿದಿನಗಳಂದು ಸಹ ಮಕ್ಕಳಿಗೆ ವಿವಿಧ ಬಗೆಯ ಆಹಾರದ ಹೂರಣ ಉಣಬಡಿಸಲಾಗುವುದು. ಶಾಲಾ ಆವರಣದಲ್ಲಿಯೇ ಕೃಷಿ ಚಟುವಟಿಕೆಗೆ ಪ್ರೋತ್ಸಾಹ ನೀಡುತ್ತಿರುವುದು ಇದರ ಮತ್ತೊಂದು ವಿಶೇಷತೆ.

ಮಕ್ಕಳಿಗೆ ಪೌಷ್ಟಿಕ ಆಹಾರ ನೀಡುವ ಕಾರ್ಯದಲ್ಲಿ ಸಮುದಾಯ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುವುದು, ಹಬ್ಬದಂತಹ ವಿಶೇಷ ದಿನಗಳಂದು ವೈವಿಧ್ಯಮಯ ಭಕ್ಷ್ಯ ಸವಿಯಲು ಅವಕಾಶ ಮಾಡಿಕೊಡುವ ವಿಶಿಷ್ಟ ಉಪಕ್ರಮಗಳು ಈ ಯೋಜನೆಯಡಿ ಸೇರಿವೆ. ಬಿಸಿಯೂಟ ತಯಾರಿಗೆ ಶಾಲಾ ಆವರಣದಲ್ಲಿಯೇ ತರಕಾರಿ ಬೆಳೆಯಲಿರುವುದು ಪೌಷ್ಟಿಕತೆಯನ್ನು ಮತ್ತಷ್ಟು ಖಾತರಿಪಡಿಸಲಿದೆ. ಮಕ್ಕಳಲ್ಲಿ ಕೃಷಿಯ ಒಲವು ಮೂಡುವಲ್ಲೂ ಈ ಉಪಕ್ರಮ ಸಹಕಾರಿಯಾಗಲಿದೆ. ಈ ಯೋಜನೆಯ ಅನುಷ್ಠಾನದಲ್ಲಿ ಕೃಷಿ ಸಂಘಟನೆಗಳು ಹಾಗೂ ಮಹಿಳಾ ಸ್ವ-ಸಹಾಯ ಗುಂಪುಗಳನ್ನು ಸಹ ತೊಡಗಿಸಿಕೊಳ್ಳಲಾಗುತ್ತದೆ. ಈ ಮೂಲಕ ಸಂಘಗಳಿಗೂ ಶಕ್ತಿ ತುಂಬುವ ಪ್ರಯತ್ನ ನಡೆದಿದೆ.



ಸಾಂಪ್ರದಾಯಿಕ ಅಡುಗೆ ಸ್ಪರ್ಧೆ ಆಯೋಜನೆಗೆ ಉತ್ತೇಜನವೂ ಈ ಯೋಜನೆಯ ಭಾಗವಾಗಿದೆ. ಸಾಂಪ್ರದಾಯಿಕ ಆಹಾರ ಪದ್ಧತಿಯ ಬಗೆಗೆ ಮಕ್ಕಳಲ್ಲಿ ಅರಿವು ಮೂಡಿಸಲು ಹಾಗೂ ಮಕ್ಕಳೂ ಕೂಡ ಆಹಾರ ತಯಾರಿಕೆಯಲ್ಲಿ ತೊಡಗಿಕೊಳ್ಳುವ ಮೂಲಕ ಪರಂಪರೆಯನ್ನು ಉಳಿಸಿ ಬೆಳೆಸಲು ಈ ಆಹಾರ ಉತ್ಸವ ಸಹಕಾರಿಯಾಗಲಿದೆ. ಈ ಸ್ಪರ್ಧೆಗಳು ಗ್ರಾಮ ಮಟ್ಟದಿಂದ ರಾಷ್ಟ್ರ ಮಟ್ಟದವರೆಗೆ ನಡೆಯಲಿದ್ದು ವೈವಿಧ್ಯಮಯ ಆಹಾರ ಪದ್ಧತಿಗಳ ಪರಿಚಯಕ್ಕೂ ವೇದಿಕೆ ಸಿಗುವಂತಾಗಲಿದೆ.

ಕೇಂದ್ರ ಸರ್ಕಾರದ ಅಂಕಿ–ಅಂಶದನ್ವಯ ಒಟ್ಟು ರೂ.1,30,794.90 ಕೋಟಿ ವೆಚ್ಚದಲ್ಲಿ ಈ ಯೋಜನೆ ಅನುಷ್ಠಾನಗೊಳ್ಳಲಿದೆ. ಪ್ರಸಕ್ತ 2021–22



Downloaded From: www.kpscvaani.com



ನೇ ಸಾಲಿನಿಂದ 2025-26 ನೇ ಸಾಲಿನವರೆಗೆ ಜಾರಿಯಲ್ಲಿರುವ ಈ ಯೋಜನೆಗೆ ಕೇಂದ್ರ ಸರ್ಕಾರ ಐದು ವರ್ಷಗಳಲ್ಲಿ ರೂ.54,061.73 ಕೋಟಿ ನೀಡಲಿದ್ದರೆ, ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ರೂ.31,733.17 ಕೋಟಿ ಭರಿಸಬೇಕಿದೆ. ಆಹಾರ ಧಾನ್ಯಗಳಿಗೆ ತಗುಲುವ ಹೆಚ್ಚುವರಿ ವೆಚ್ಚ ರೂ.45,000 ಕೋಟಿಯನ್ನು ಕೇಂದ್ರ ಸರ್ಕಾರ ಭರಿಸಬೇಕಿದೆ. ಹಿಂದಿನ ಬಿಸಿಯೂಟದ ಯೋಜನೆಗಳಂತೆಯೇ ಕೇಂದ್ರ ಮತ್ತು ರಾಜ್ಯಗಳ ಪಾಲು ಕ್ರಮವಾಗಿ ಶೇಕಡ 60 ಮತ್ತು ಶೇಕಡ 40 ರಷ್ಟೇ ಮುಂದುವರಿಯಲಿದ್ದು, ಎರಡೂ ಆಡಳಿತಗಳ ಸಮನ್ವಯದಿಂದ ಈ ಯೋಜನೆ ಹೊಸ ಹೆಸರಿನೊಂದಿಗೆ ಜಾರಿಯಾಗಿದೆ. ಧಾನ್ಯಗಳ ಹೆಚ್ಚುವರಿ ವೆಚ್ಚ 45 ಸಾವಿರ ಕೋಟಿ ರೂ ಹೊರತುಪಡಿಸಿ ಇತರ ಹೆಚ್ಚುವರಿ ಖರ್ಚುಗಳನ್ನು ಆಯಾ ರಾಜ್ಯಗಳೇ ಭರಿಸಬೇಕಿದೆ. ಪಿ ಎಂ ಪೋಷಣ್ ಶಕ್ತಿ ನಿರ್ಮಾಣ್ ಯೋಜನೆಯಲ್ಲಿ ಹೆಚ್ಚುವರಿಯಾಗಿ ಹೊಸ ಘಟಕಗಳ ಸೇರ್ಪಡೆ ಚಿಂತನೆಯೂ ನಡೆದಿದೆ.

ಅನಿಮಿಯಾ ಅಂದರೆ ರಕ್ತ ಹೀನತೆಯಿಂದ ಬಳಲುತ್ತಿರುವ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿರುವ ಜಿಲ್ಲೆಗಳಲ್ಲಿ ಹೆಚ್ಚುವರಿ ಪೌಷ್ಟಿಕಾಂಶಯುಕ್ತ ಆಹಾರ ನೀಡಲು ಈ ಯೋಜನೆಯಡಿ ಕ್ರಮ ವಹಿಸಲಾಗುತ್ತದೆ. ಈ ಯೋಜನೆಯಡಿ ನೀಡುವ ಆಹಾರ ಯಾವುದು ಎಂಬುದನ್ನು ಆಯಾ ರಾಜ್ಯಗಳೇ ನಿರ್ಧರಿಸಲಿವೆ. ಸ್ಥಳೀಯವಾಗಿ ಬೆಳೆಯುವ ಆಹಾರ ಪದಾರ್ಥಗಳ ಬಳಕೆಗೆ ಒತ್ತು ನೀಡಲಾಗಿದೆ. ಅಕ್ಕಿ, ಗೋಧಿ, ಬೇಳೆ ಮತ್ತು ತರಕಾರಿಗೆ ತಗುಲುವ ವೆಚ್ಚವನ್ನು ಮಾತ್ರ ಕೇಂದ್ರ ಭರಿಸುತಿತ್ತು. ಇದೀಗ ಧಾನ್ಯದ ವೆಚ್ಚವನ್ನೂ ಕೇಂದ್ರ ಸರ್ಕಾರ ಭರಿಸಲಿದೆ. ಊಟದ ಜೊತೆಗೆ ಹಾಲು, ಮೊಟ್ಟೆ ಹೀಗೆ ಇತರೆ ಆಹಾರ ನೀಡಿದ್ದಲ್ಲಿ ಅದರ ವೆಚ್ಚವನ್ನು ಆಯಾ ರಾಜ್ಯಗಳೇ ಭರಿಸಬೇಕಿದೆ.

ಪ್ರತಿ ವಿದ್ಯಾರ್ಥಿಗೆ ಎಷ್ಟು ಪ್ರಮಾಣದ ಪೌಷ್ಟಿಕಾಂಶ ನೀಡಬೇಕು ಎಂಬುದನ್ನೂ ಯೋಜನೆ ತಿಳಿಸಿದೆ. ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ನೀಡುವ ಆಹಾರದಲ್ಲಿ 450 ಕ್ಯಾಲೊರಿ ಹಾಗೂ 12 ಗ್ರಾಂ ಪ್ರೋಟೀನ್ ಹಾಗೂ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಕೊಡುವ ಆಹಾರದಲ್ಲಿ 700 ಕ್ಯಾಲೊರಿ ಹಾಗೂ 20 ಗ್ರಾಂ ಪ್ರೋಟೀನ್ ಇರಬೇಕು ಎಂಬ ನಿಯಮವಿದೆ. ಪ್ರಾಥಮಿಕ ಶಾಲಾ ಮಕ್ಕಳಿಗೆ ನೀಡುವ ಆಹಾರದಲ್ಲಿ 100 ಗ್ರಾಂ ಧಾನ್ಯ, 20 ಗ್ರಾಂ ಬೇಳೆ, 50 ಗ್ರಾಂ ತರಕಾರಿ, 5 ಗ್ರಾಂ ಎಣ್ಣೆ ಸೇರಿದ್ದು ಇದರ ಒಂದೂವರೆ ಪಟ್ಟು ಹೆಚ್ಚಿನ ಪೌಷ್ಟಿಕಾಂಶವನ್ನು ಐದರಿಂದ ಎಂಟನೇ ತರಗತಿ ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳಿಗೆ ಕೊಡಲಾಗುತ್ತದೆ. ಹೀಗೆ ಮಕ್ಕಳಿಗೆ ಅಗತ್ಯವಿರುವಷ್ಟು ಪೌಷ್ಟಿಕಾಂಶಗಳು ದೊರಕುವಂತೆ ಜಾಗ್ರತೆ ವಹಿಸಲಾಗಿದೆ.

ಪಾರದರ್ಶಕತೆ ಖಾತರಿಪಡಿಸುವ ಕ್ರಮವಾಗಿ ಅಡುಗೆ ತಯಾರಿಕೆಗೆ ತಗುಲುವ ವೆಚ್ಚವನ್ನು ಆಯಾ ಶಾಲೆಗಳ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡುವಂತೆ ರಾಜ್ಯಗಳಿಗೆ ಸೂಚನೆ ಕೊಡಲಾಗಿದೆ. ಇನ್ನು ಬಾಣಸಿಗರು ಮತ್ತು ಅಡುಗೆ ಸಹಾಯಕರಿಗೆ ನೀಡುವ ಗೌರವಧನವನ್ನು ಅವರವರ ಖಾತೆಗಳಿಗೇ ಜಮೆ ಮಾಡಲಾಗುತ್ತದೆ. ಈ ಮೂಲಕ ಅನುದಾನದ ಸೋರಿಕೆ ಅಥವಾ ಅಕ್ರಮ ಬಳಕೆ ತಪ್ಪಿಸಲು ಕ್ರಮ ವಹಿಸಲಾಗಿದೆ.

ಮಕ್ಕಳಿಗೆ ಪೌಷ್ಟಿಕ ಆಹಾರ ಸಿಗುವುದನ್ನು ಖಾತರಿಪಡಿಸುವುದರ ಜೊತೆಗೆ ಆಹಾರ ತಯಾರಿಕೆ ವೇಳೆ ಶುಚಿತ್ವ ಕಾಪಾಡಿಕೊಳ್ಳುವಿಕೆ, ರಾಸಾಯನಿಕಗಳು ಹೆಚ್ಚಿಲ್ಲದ ಅಥವಾ ಸಾವಯವ ತರಕಾರಿ-ಹಣ್ಣು ಬಳಕೆ ಮೊದಲಾದ ಕ್ರಮಗಳ ಬಗೆಗೂ ಹೆಚ್ಚಿನ ಗಮನ ಅಗತ್ಯವಿದೆ. ಆಗ ಮಾತ್ರ ಪೌಷ್ಟಿಕಯುಕ್ತ ಆಹಾರದ ಮೂಲಕ





Downloaded From: www.kpscvaani.com

ಆರೋಗ್ಯವಂತ ಪ್ರಜೆಗಳನ್ನು ರೂಪಿಸುವ ಧ್ಯೇಯ ಸಾರ್ಥಕವಾಗಲಿದೆ.

ಪ್ರತಿ ಶಾಲೆಗೂ ಪೌಷ್ಟಿಕಾಂಶ ತಜ್ಞರ ನೇಮಕ ಮಾಡುವ ನಿರ್ಧಾರ ಸ್ವಾಗತಾರ್ಹ. ತಜ್ಞರು ಮಕ್ಕಳಲ್ಲಿನ ಎತ್ತರ-ತೂಕ ಆಧರಿಸಿ ಬಾಡಿ ಮಾಸ್ ಇಂಡೆಕ್ಸ್ ಗುಣಿಸಿ, ಹಿಮೋಗ್ಲೋಬಿನ್ ಪ್ರಮಾಣದ ಬಗೆಗೆ ನಿಗಾ ವಹಿಸುವರು. ಈ ಮೂಲಕ ಮಕ್ಕಳ ಆರೋಗ್ಯದ ಬಗೆಗೆ ಎಲ್ಲ ಹಂತಗಳಲ್ಲೂ ಕಾಳಜಿ ವಹಿಸಲು ಸಾಧ್ಯವಾಗಲಿದೆ.

**ಯೋಜನೆಯ ಪ್ರಯೋಜನ**

ಶಾಲಾ ಮಕ್ಕಳ ಹಾಜರಾತಿ ಹೆಚ್ಚಿಸುವಲ್ಲಿ ಮಧ್ಯಾಹ್ನದ ಬಿಸಿಯೂಟ ವ್ಯವಸ್ಥೆ ಮಹತ್ವದ ಪಾತ್ರ ವಹಿಸಿತ್ತು. ಈ ಮರುನಾಮಕರಣಗೊಂಡಿರುವ ಯೋಜನೆ ಕೂಡ ಶಾಲೆಗೆ ಸೇರುವ ಮಕ್ಕಳ ಸಂಖ್ಯೆ ಹೆಚ್ಚಿಸುವಲ್ಲಿ ಮತ್ತು ಮಕ್ಕಳ ಹಾಜರಾತಿ ಖಾತರಿಪಡಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಲಿದೆ. ಅಲ್ಲದೇ ಹೆಣ್ಣು ಮಕ್ಕಳ ದಾಖಲಾತಿಗೆ ಪ್ರೇರಣೆ ಸಿಗಲಿದೆ. ಪೌಷ್ಟಿಕಾಂಶಯುಕ್ತ ಆಹಾರ ಸಿಗುವುದರಿಂದ ಮಕ್ಕಳು ಆರೋಗ್ಯವಂತರಾಗಿ ಲವಲವಿಕೆಯಿಂದಿರಲು ಸಾಧ್ಯವಾಗಲಿದೆ. ಭವಿಷ್ಯದಲ್ಲಿ ಮಕ್ಕಳಲ್ಲಿ ಆರೋಗ್ಯ ಸಮಸ್ಯೆ ಉಂಟಾಗದಂತೆ ತಡೆಯುವಲ್ಲೂ ಸಹಕಾರಿಯಾಗಲಿದೆ. ಪೌಷ್ಟಿಕ ಆಹಾರ ಸೇವಿಸುವ ಮಕ್ಕಳಲ್ಲಿ ಏಕಾಗ್ರತೆ, ಕಲಿಕಾ ಸಾಮರ್ಥ್ಯ ಹೆಚ್ಚಲಿದೆ. ಇದು ಸಮಾಜದಲ್ಲಿ ಸಮಾನತೆ ತರುವಲ್ಲೂ ಪರಿಣಾಮಕಾರಿ ಪಾತ್ರ ವಹಿಸಲಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಈ ಯೋಜನೆ ಪರೋಕ್ಷವಾಗಿಯೂ ಅನೇಕರಿಗೆ ವರದಾನವಾಗಲಿದೆ. ಸ್ಥಳೀಯ ಮಹಿಳೆಯರ ಪಾಲ್ಗೊಳ್ಳುವಿಕೆ ಉತ್ತೇಜನದ ಜೊತೆಗೆ ತೋಟಗಾರಿಕೆಗೆ ಪ್ರೇರಕವಾಗಲಿದೆ. ಮಕ್ಕಳಲ್ಲಿ ಕೃಷಿಯ ಆಸಕ್ತಿ ಮೂಡಲಿದೆ. ಆಹಾರ ಸ್ಪರ್ಧೆಗಳು ಮಕ್ಕಳಲ್ಲಿ ಪೌಷ್ಟಿಕಾಂಶದ ಬಗ್ಗೆ ಅರಿವು ಮೂಡಿಸುವ ಜೊತೆಗೆ ಪರಂಪರೆಯ ಬಗ್ಗೆ ತಿಳಿಸುವಲ್ಲೂ ಸಹಕಾರಿಯಾಗಲಿದೆ.

**ಕರ್ನಾಟಕದ ಕೊಡುಗೆ**

ಶಾಲಾ ಮಕ್ಕಳ ಹಾಜರಾತಿ ಪ್ರೇರೇಪಿಸಿರುವ ಬಿಸಿಯೂಟ ವ್ಯವಸ್ಥೆಗೆ ಕರ್ನಾಟಕದಲ್ಲಿ ಅಭೂತಪೂರ್ವ ಪ್ರತಿಕ್ರಿಯೆ ವ್ಯಕ್ತವಾಗಿದೆ. ಕರ್ನಾಟಕದ ಇತರೆಡೆಗಳಿಗಿಂತ ಅಪೌಷ್ಟಿಕತೆ ಪ್ರಮಾಣ ಹೆಚ್ಚಿರುವ ರಾಜ್ಯದ ಏಳು ಜಿಲ್ಲೆಗಳಾದ ಬಳ್ಳಾರಿ, ಬೀದರ್, ಕಲಬುರಗಿ, ಕೊಪ್ಪಳ, ಯಾದಗಿರಿ, ರಾಯಚೂರು, ವಿಜಯಪುರಗಳಲ್ಲಿ ಒಟ್ಟು 14.4 ಲಕ್ಷ ಮಕ್ಕಳಿಗೆ ವಾರ್ಷಿಕವಾಗಿ 46 ದಿನ ಮಧ್ಯಾಹ್ನದ ಊಟದಲ್ಲಿ ಮೊಟ್ಟೆ ನೀಡುವ ನಿರ್ಧಾರವನ್ನು ರಾಜ್ಯ ಸರ್ಕಾರ ಕೈಗೊಂಡಿದೆ. ಮೊಟ್ಟೆ ಸೇವಿಸದ ಮಕ್ಕಳಿಗೆ ಪರ್ಯಾಯ ಸಸ್ಯಾಹಾರಿ ಆಹಾರ ನೀಡುವ ಚಿಂತನೆಯೂ ನಡೆದಿರುವುದು ಉತ್ತಮ ಬೆಳವಣಿಗೆಯಾಗಿದೆ. ರಾಜ್ಯದ ಏಳು ಜಿಲ್ಲೆಗಳಲ್ಲಿ ಅಪೌಷ್ಟಿಕತೆಯ ಪ್ರಮಾಣ ಹೆಚ್ಚಿದೆ ಎಂಬ ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಸಮೀಕ್ಷೆ ವರದಿ ಆಧರಿಸಿ ಪೌಷ್ಟಿಕಾಂಶಯುಕ್ತ ಆಹಾರ ಪೂರೈಕೆಗೆ ಕ್ರಮಕೈಗೊಂಡಿರುವುದು ಸಕಾರಾತ್ಮಕ ಬೆಳವಣಿಗೆಯಾಗಿದೆ.

**ರಕ್ತ ಹೀನತೆಯಿಂದ ಬಳಲುತ್ತಿರುವ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿರುವ ಜಿಲ್ಲೆಗಳಲ್ಲಿ ಹೆಚ್ಚುವರಿ ಪೌಷ್ಟಿಕಾಂಶಯುಕ್ತ ಆಹಾರ ನೀಡಲು ಈ ಯೋಜನೆಯಡಿ ಕ್ರಮ ವಹಿಸಲಾಗುತ್ತದೆ. ಈ ಯೋಜನೆಯಡಿ ನೀಡುವ ಆಹಾರ ಯಾವುದು ಎಂಬುದನ್ನು ಆಯಾ ರಾಜ್ಯಗಳೇ ನಿರ್ಧರಿಸಲಿವೆ. ಸ್ಥಳೀಯವಾಗಿ ಬೆಳೆಯುವ ಆಹಾರ ಪದಾರ್ಥಗಳ ಬಳಕೆಗೆ ಒತ್ತು ನೀಡಲಾಗಿದೆ. ಅಕ್ಕಿ, ಗೋಧಿ, ಬೇಳೆ ಮತ್ತು ತರಕಾರಿಗೆ ತಗುಲುವ ವೆಚ್ಚವನ್ನು ಮಾತ್ರ ಕೇಂದ್ರ ಭರಿಸುತಿತ್ತು. ಇದೀಗ ಧಾನ್ಯದ ವೆಚ್ಚವನ್ನೂ ಕೇಂದ್ರ ಸರ್ಕಾರ ಭರಿಸಲಿದೆ.**



ಕರ್ನಾಟಕದಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 1 ರಿಂದ 10 ನೇ ತರಗತಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟ ನೀಡಲಾಗುತ್ತಿದ್ದು ವಾರದಲ್ಲಿ ಮೂರು ದಿನ ಹಾಲು ನೀಡುವ ವ್ಯವಸ್ಥೆಯೂ ಇದೆ. ಅಲ್ಲದೇ ಬೇಸಿಗೆ ರಜೆಯ ಸಂದರ್ಭದಲ್ಲೂ 50 ದಿನ ಬಿಸಿಯೂಟ ನೀಡುವ ಪ್ರಸ್ತಾಪವಿದೆ.

ಅಕ್ಷರ ದಾಸೋಹದ ಮೂಲಕ ಗ್ರಾಮೀಣ ಮಕ್ಕಳಿಗೆ ಕಲಿಕೆಯ ಜೊತೆಗೆ ಆಹಾರ ನೀಡುವ ವ್ಯವಸ್ಥೆಯೂ ಇದೆ. ಕೋವಿಡ್ ಬಿಕ್ಕಟ್ಟಿನ ಸಂದರ್ಭದಲ್ಲಿ ಆಹಾರ ನೀಡಲು ಸಾಧ್ಯವಾಗದೇ ಇದ್ದಾಗ ಆಹಾರ ಧಾನ್ಯಗಳನ್ನು ಮಕ್ಕಳ ಕುಟುಂಬಗಳಿಗೆ ವಿತರಿಸಲಾಗಿತ್ತು. ಈ ಮೂಲಕ ಮಕ್ಕಳಿಗೆ ಮಾತ್ರವಲ್ಲದೇ ಅವರ ಕುಟುಂಬಗಳಿಗೂ ಅಲ್ಪ ನೆರವು ನೀಡುವ ಪ್ರಯತ್ನ ಶ್ಲಾಘನೀಯ.

ಮೊಟ್ಟೆಯಲ್ಲಿ ಪ್ರೋಟೀನ್ ಮಾತ್ರವಲ್ಲದೇ ಅಗತ್ಯ ಅಮೈನೋ ಆಸಿಡ್ ಇದೆ. ಜೊತೆಗೆ ವಿಟಮಿನ್-ಸಿ ಹೊರತುಪಡಿಸಿ ಇತರ ವಿಟಮಿನ್ ಮತ್ತು ಮಿನರಲ್ ಕೂಡ ಇದ್ದು ಪೌಷ್ಟಿಕಾಂಶಯುಕ್ತವಾಗಿದೆ. ಮಕ್ಕಳಿಗೆ ನೀಡಲು ಸರ್ಕಾರ ಮೊಟ್ಟೆ ಖರೀದಿಸುವುದರಿಂದ ಸ್ಥಳೀಯ ಮಾರುಕಟ್ಟೆಗೂ ಉತ್ತೇಜನ ಸಿಗಲಿದೆ. ಮಕ್ಕಳಿಗೆ ಹಾಲು ಕೊಡಲು ಹಾಲು ಉತ್ಪಾದಕರಿಂದ ಹಾಲು ಖರೀದಿಸುವುದರಿಂದ ರೈತರಿಗೆ ಇನ್ನಷ್ಟು ಉತ್ತೇಜನ ನೀಡಲು ಸಾಧ್ಯವಾಗಲಿದೆ.

ಮಧ್ಯಾಹ್ನದ ಬಿಸಿಯೂಟ ಕೇವಲ ಮಕ್ಕಳ ತುತ್ತಿನ ಚೀಲ ತುಂಬಿಸುವ ಪ್ರಯತ್ನವಲ್ಲ. ಅದು ವಿದ್ಯಾರ್ಥಿಗಳ ಭವಿಷ್ಯದ ಅಡಿಪಾಯ. ಪೌಷ್ಟಿಕಾಂಶ ಆಹಾರದಿಂದ ಮಕ್ಕಳಲ್ಲಿ ಲವಲವಿಕೆ, ಕಲಿಕೆಯ ಆಸಕ್ತಿ ಹೆಚ್ಚಲಿದ್ದು ಇದು ಮುಂದಿನ ದಿನಗಳಲ್ಲಿ ಪರೋಕ್ಷವಾಗಿ ವರದಾನವಾಗಿ ಪರಿಣಮಿಸಲಿದೆ. ಮಕ್ಕಳಲ್ಲಿ ಶಕ್ತಿ ತುಂಬುವ ಪಿಎಂ ಪೋಷಣ್ ಶಕ್ತಿ ಅಭಿಯಾನ ದೇಶಕ್ಕೇ ಶಕ್ತಿ ತರುವ ದಿಟ್ಟ ಕ್ರಮ.



Downloaded From: www.kpscvaani.com

# ವೈಶಿಷ್ಟ್ಯ ಪೂರ್ಣ ಕಲೆ
# ಬೋನ್‌ಸಾಯ್



**ತನಗಿಷ್ಟಬಂದಂತೆ ಬೃಹದಾಕಾರವಾಗಿ ಬೆಳೆಯುವ ಮರಗಳನ್ನು ಮನೆಯ ಆವರಣದಲ್ಲಿ ಅದುವೇ ಕುಂಡದಲ್ಲಿ ನಮ್ಮ ನಿಯಂತ್ರಣದಲ್ಲಿ ಕುಬ್ಜವಾಗಿ ಬೆಳೆಸುವ ಒಂದು ವೈಶಿಷ್ಟ್ಯ ಪೂರ್ಣ ಕಲೆಯೇ ಬೋನ್‌ಸಾಯ್.**

ಡಾ. ಹರ್ಷವರ್ಧನ್. ಎಂ



ಜಪಾನಿಯರು ಅಭಿವೃದ್ಧಿಗೊಳಿಸಿದ "ಬೋನ್‌ಸಾಯ್" ಒಂದು ವೈಜ್ಞಾನಿಕ ಕಲೆ. ಬೋನ್‌ಸಾಯ್ ಮರಗಳನ್ನು ಬೆಳೆಸುವುದರಲ್ಲಿ ಜಪಾನಿಯರದೇ ಮೇಲುಗೈ ಎಂದೆನ್ನಬಹುದು. ನಿಮಗೆಲ್ಲಾ ಒಂದು ಬೆರಗಾಗಿಸುವ ವಿಷಯವೇನೆಂದರೇ, ಸುಮಾರು ಒಂದು ನೂರು ವರ್ಷದ ಜೂನಿಪರ್ ಮರವು ಕೇವಲ ಎರಡು ಅಡಿ ಆಸು-ಪಾಸು ಇರುತ್ತದೆ. ಹಾಗಾಗಿ ಬೋನ್‌ಸಾಯ್ ಬೆಳೆಯುವುದು ಮತ್ತು ಬೆಳೆಸುವುದು ಬಹುದೊಡ್ಡ ಕಲೆಯೇ ಸರಿ.

ಆಳವಲ್ಲದ ಪಾತ್ರೆ ಅಥವಾ ಬಟ್ಟಲುಗಳಲ್ಲಿ ಕುಬ್ಜ ವೃಕ್ಷಗಳನ್ನು ಬೆಳೆಸುವ ಒಂದು ಕಲೆಗೆ "ಬೋನ್‌ಸಾಯ್" ಎಂದು ಕರೆಯಲಾಗುತ್ತದೆ. ಬೋನ್‌ಸಾಯ್ ವೃಕ್ಷಗಳನ್ನು ಬೆಳೆಸಲು ಜಾಣತನ, ಕಲಾತ್ಮಕ ವಿವೇಚನೆ ಹಾಗೂ ಬಹಳಷ್ಟು ಸಹನಶೀಲತೆ ಇವುಗಳು ಅತ್ಯವಶ್ಯಕವಾಗಿರುತ್ತವೆ. ಈ ಬೋನ್‌ಸಾಯ್ ವೃಕ್ಷಗಳು ನೋಡಲು ಅತ್ಯಂತ ಮನೋಹರವಾಗಿರುತ್ತವೆ. ಇದರ ಜೊತೆಗೆ ಇವುಗಳನ್ನು ಸಂಗ್ರಹಿಸಿ, ಆಕರ್ಷಕ ರೀತಿಯಲ್ಲಿ ಪರಿಣಾಮಕಾರಿಯಾಗಿ ಪ್ರದರ್ಶಿಸಿದಾಗ ಮನೆಯ ಹಿತ್ತಲು ಅಥವಾ ಅಂಗಳಕ್ಕೆ ಮನಮೋಹಕ ಶೋಭೆ ನೀಡುತ್ತವೆ ಹಾಗೂ ನಿಸರ್ಗದ ಚೆಲುವನ್ನು ಹೆಚ್ಚಿಸುತ್ತವೆ.

ಅನೇಕ ವರ್ಷಗಳನ್ನು ಮೀಸಲಿಟ್ಟಾಗ ಮಾತ್ರ ಈ ಬೋನ್‌ಸಾಯ್ ವೃಕ್ಷಗಳನ್ನು ಬೆಳೆಸಲು ಸಾಧ್ಯವಾಗುತ್ತದೆ. ಪಾಲನೆ-ಪೋಷಣೆಯನ್ನು ಉತ್ತಮವಾಗಿ ಮಾಡಿ ಬೆಳೆಸಿದ ಬೋನ್‌ಸಾಯ್ ವೃಕ್ಷಗಳು "ಓಲ್ಡ್ ಈಜ್ ಗೋಲ್ಡ್" ಎಂಬಂತೆ ವಯಸ್ಸಾದಂತೆಲ್ಲಾ ಸುಂದರತೆಯನ್ನು ದುಗುಣಗೊಳಿಸಿಕೊಳ್ಳುತ್ತಾ ಬರುತ್ತದೆ. ಬೋನ್‌ಸಾಯ್ ವೃಕ್ಷಗಳ ವಿವಿಧ ಭಾಗಗಳಾದ ಎಲೆಗಳು, ಹೂವುಗಳು ಹಾಗೂ ಆಕಾರದಿಂದಾಗಿ ಪ್ರಕೃತಿಯ ಸುಂದರತೆಯನ್ನು ಹೆಚ್ಚಿಸುವುದಲ್ಲದೇ ಇವುಗಳನ್ನು ಸಂಪೂರ್ಣವಾಗಿ ಅಲಂಕಾರಿಕ ವಸ್ತುಗಳನ್ನಾಗಿ ಮನೆಯ ಒಳಗಡೆ ಮತ್ತು ಮನೆಯ ಹೊರಗಡೆ ಇಟ್ಟು ಮನೆಯ ಅಂದ-ಚೆಂದವನ್ನು ಹೆಚ್ಚಿಸಿಕೊಳ್ಳಬಹುದು.



Downloaded From: www.kpscvaani.com

ಈ ಬೋನ್‌ಸಾಯ್ ಮರಗಳನ್ನು ಬೆಳೆಸಲು ಮೊದಲೇ ಹೇಳಿದಂತೆ ಅದರ ಕಲೆಯನ್ನು ತಿಳಿದುಕೊಳ್ಳಬೇಕಾಗುತ್ತದೆ. ಆಳವಲ್ಲದ ಪಾತ್ರೆ ಅಥವಾ ಬಟ್ಟಲು ಅಥವಾ ಚಿಕ್ಕ ಕುಂಡಗಳಲ್ಲಿ ಈ ಮರಗಳನ್ನು ಬೆಳೆಸುವುದರಿಂದ ಅದರ ಬೇರುಗಳ ಬೆಳವಣಿಗೆ ಕಡಿಮೆಯಾಗುತ್ತದೆ. ಹಾಗೂ ಬೋನ್‌ಸಾಯ್ ಮರಗಳಿಗೆ ಆಹಾರವನ್ನು ಕಡಿಮೆ ಕೊಡುವುದರಿಂದ ಬೆಳವಣಿಗೆಯನ್ನು ಕುಂಠಿತಗೊಳಿಸಬಹುದಾಗಿದೆ.

ಪ್ರತಿಯೊಂದರಲ್ಲೂ ವಿವಿಧತೆ ಹಾಗೂ ಅವುಗಳ ಆಯ್ಕೆ ಮಾಡುವ ನಾವು ಈ ಬೋನ್‌ಸಾಯ್ ಮರಗಳಲ್ಲೂ ಸಹ ಮಾಡುವ ಆಯ್ಕೆ ಉತ್ತಮದ್ದಾಗಿರಬೇಕು. ದೇವದಾರು ಮರ, ದಾಳಿಂಬೆ ಹಣ್ಣಿನ ಗಿಡ, ಕಿತ್ತಳೆ ಹಣ್ಣಿನ ಗಿಡ ಇತ್ಯಾದಿಗಳನ್ನು ಬೋನ್‌ಸಾಯ್ ಬೆಳೆಸಲು ಉಪಯೋಗಿಸಬಹುದು. ಬೋನ್‌ಸಾಯ್ ವೃಕ್ಷಗಳನ್ನು ವಿವಿಧ ರೀತಿಯಲ್ಲಿ ಅಂದರೆ ಬೀಜ, ಸಸಿಗಳು ಅಥವಾ ಬೇರು ಬರಿಸಿದ ಕಾಂಡದ ತುಂಡುಗಳಿಂದ ಸಸಿಗಳನ್ನು ಮಾಡಿ ಬೆಳೆಸಬಹುದಾಗಿದೆ. ಸಸಿಗಳನ್ನು ಬೆಳೆಸಿದಾಗ ಬೇಗನೆ ಬೋನ್‌ಸಾಯ್ ಮರಗಳನ್ನು ಬೆಳೆಸಬಹುದು. ಆದರೆ ಇಂತಹ ಮರಗಳ ಹತೋಟಿ, ನಿಯಂತ್ರಣ ಕಷ್ಟಸಾಧ್ಯವಾಗುತ್ತದೆ. ಆದಕಾರಣ, ನಾವು ಬೀಜದಿಂದ ಬೆಳೆದ ಬೋನ್‌ಸಾಯ್ ಮರಗಳನ್ನು ಆಯ್ಕೆ ಮಾಡಿದಾಗ ಇವುಗಳ ಮೇಲೆ ಸಂಪೂರ್ಣ ಹತೋಟಿಯನ್ನು ಸಾಧಿಸಬಹುದಾಗಿದೆ. ಬೋನ್‌ಸಾಯ್ ಬೆಳೆಸುವುದಕ್ಕೋಸ್ಕರ ಗ್ರಾಮಾಂತರ ಪ್ರದೇಶಗಳಲ್ಲಿ, ತೋಟಗಳಲ್ಲಿ ಕುಂಠಿತವಾದ ಅಥವಾ ಆಕಾರವಿಲ್ಲದೆ ಅವ್ಯಸ್ಥಿತವಾಗಿ ಬೆಳೆದಿರುವ ಅಥವಾ ಗಿಡ್ಡವಾದ ಗಿಡಗಳನ್ನು ಆಯ್ಕೆ ಮಾಡಬೇಕು.

ಯಾವ ಜಾತಿಯ ಮರಗಳನ್ನು ಬೆಳೆಸಬೇಕು ಎಂಬುದರ ಬಗ್ಗೆ ಖಚಿತ ಮಾಡಿಕೊಳ್ಳಬೇಕು. ಫಲವತ್ತತೆಯಿಂದ ಕೂಡಿದ ಮರಳು ಮಿಶ್ರಿತ ಜೇಡಿ ಮಣ್ಣು ತುಂಬಿರುವ ಚೌಕಟ್ಟಿನಲ್ಲಿ ಬೀಜಗಳನ್ನು ಬಿತ್ತನೆ ಮಾಡಬೇಕು. ನಂತರ ಸಸಿಗಳು 3–5 ಸೆಂ.ಮೀ. ಎತ್ತರ ಬೆಳೆದಾಗ ಈ ಸಸಿಗಳನ್ನು ಕೆಲವು ಸಣ್ಣ ರಂಧ್ರಗಳಿರುವ ಬಟ್ಟಲು ಅಥವಾ ಐಸ್‌ಕ್ರೀಮ್ ಬಟ್ಟಲು ಅಥವಾ ಕಿತ್ತಳೆ ಹಣ್ಣಿನ ಸಿಪ್ಪೆ ಅಥವಾ ಮಣ್ಣಿನ ಕುಂಡಗಳಿಗೆ ಫಲವತ್ತಾದ ಮಣ್ಣನ್ನು ತುಂಬಿ ಸಸಿಯನ್ನು ನಾಟಿ ಮಾಡಬೇಕು. ಕುಂಡದಲ್ಲಿರುವ ಮಣ್ಣಿನ



ಸವಕಳಿಯನ್ನು ತಡೆಯಲು ಕುಂಡದ ತಳಹದಿಯ ರಂಧ್ರದಲ್ಲಿ ಚಿಕ್ಕ ಕಲ್ಲುಗಳು, ಗೋಣಿಚೀಲದ ತಾಟು ಅಥವಾ ತಂತಿಯ ಬಲೆಯನ್ನು ಇಡಬೇಕು. ಕುಂಡಗಳಿಗೆ ಸಸಿಯನ್ನು ನಾಟಿ ಮಾಡಿದ ನಂತರ ನೀರನ್ನು ಅಲ್ಪ ಪ್ರಮಾಣದಲ್ಲಿ ಹಾಕಬೇಕು. ಒಂದು ವಾರ ನೆರಳಿನಲ್ಲಿಟ್ಟು, ನಂತರ ಬಿಸಿಲಿನಲ್ಲಿ ಇಡಬೇಕು.

ಬೋನ್‌ಸಾಯ್ ಮರದ ಬೆಳವಣಿಗೆಯನ್ನು ಕುಂಠಿತಗೊಳಿಸಬೇಕಾದರೆ ಸಸಿ ನಾಟಿ ಮಾಡಿದ ಮೊದಲನೆ ವರ್ಷದಿಂದಲೇ ಅದರ ಬೇರುಗಳನ್ನು ಕತ್ತರಿಸಲು (ಪ್ರೂನಿಂಗ್) ಪ್ರಾರಂಭಿಸಬೇಕು. ಸಸಿಯ ಬೇರುಗಳ ಬೆಳವಣಿಗೆಗೆ ತಕ್ಕಂತೆ ಒಂದು ಅಥವಾ ಎರಡು ಬಾರಿ ರಂಧ್ರದಿಂದ ಹೊರಬಂದ ಬೇರುಗಳನ್ನು ಕತ್ತರಿಯ ಮೂಲಕ ಓರೆಯಾಗಿ ಕತ್ತರಿಸಬೇಕು. ಮಣ್ಣಿನ ಚಿಕ್ಕ ಕುಂಡಗಳಲ್ಲಿ ಸಸಿಯನ್ನು

**ಬೋನ್‌ಸಾಯ್ ವೃಕ್ಷಗಳನ್ನು ಬೆಳಕು ಇರದ ಅಥವಾ ಉಷ್ಣತೆ ಹೆಚ್ಚಿರುವ ಕೊಠಡಿಯಲ್ಲಿ ಇಡದೇ, ಇವುಗಳನ್ನು ಮನೆಯ ಹೊರಗಡೆ ಇಡಬೇಕು. ಹೀಗೆ ಇಡುವುದರಿಂದ ಮನೆಯ ಅಲಂಕಾರವೂ ಹೆಚ್ಚುವುದಲ್ಲದೇ, ಸಸಿಯ ಬೆಳವಣಿಗೆಯು ಉತ್ತಮವಾಗಿರುತ್ತದೆ. ಕೆಲವು ಜಾತಿಯ ಮರಗಳು ಬಿಸಿಲನ್ನು ಹಾಗೂ ಇನ್ನು ಕೆಲವು ಜಾತಿಯ ಮರಗಳು ನೆರಳನ್ನೂ ಇಷ್ಟಪಡುತ್ತವೆ. ಆಯಾ ಜಾತಿಯ ಮರಗಳ ಅವಶ್ಯಕತೆಗೆ ತಕ್ಕಂತೆ ನಾವು ಅವುಗಳನ್ನು ಸಂರಕ್ಷಿಸಬೇಕು.**

ನಾಟಿ ಮಾಡಿದಾಗ ಅದನ್ನು ಕುಂಡದಿಂದ ಹೊರ ತೆಗೆದು ದಪ್ಪವಾದ ಬೇರನ್ನು ಮಾತ್ರ ಕತ್ತರಿಸಬೇಕು. ಇದರಿಂದ ಹೊಸದಾಗಿ ಬೇರು ಬರಲು ಸಹಾಯವಾಗುತ್ತದೆ. ಕುಂಡದಲ್ಲಿರುವ ಮಣ್ಣಿನ ತೇವಾಂಶವು ಕಡಿಮೆಯಾದಂತೆಲ್ಲಾ ಅದಕ್ಕೆ ನೀರು ಹಾಕುತ್ತಿರಬೇಕು. ಧಾರಾಕಾರವಾದ ಮಳೆಯಿಂದ ಚಿಕ್ಕ ಸಸಿಗಳನ್ನು ರಕ್ಷಿಸಬೇಕು.

ವರ್ಷ ಕಳೆದಂತೆ ಸಸಿಯ ಬೆಳವಣಿಗೆಯಲ್ಲಿ ಅಭಿವೃದ್ಧಿ ಹೊಂದುತ್ತಿರುವುದರಿಂದ ಇದರ ಮೇಲೆ ನಿಗಾ ವಹಿಸುತ್ತಿರಬೇಕು. ಎರಡನೇ ವರ್ಷವೂ ಸಹ, ಬೇರಿನ ಬೆಳವಣಿಗೆಗೆ ತಕ್ಕಂತೆ ಅವುಗಳನ್ನು ಕತ್ತರಿಸುತ್ತಾ ಹೋಗಬೇಕು. ನಮಗೆ ಬೇಕಾದ ಆಕಾರವನ್ನು ಮನದಟ್ಟು ಮಾಡಿ ಅದೇ ಆಕಾರಕ್ಕೆ ತಕ್ಕಂತೆ ಅದರ ರೆಂಬೆಗಳನ್ನು ಕತ್ತರಿಸುತ್ತಾ ಹೋಗಬೇಕು. ಮೂರನೆಯ ವರ್ಷದಿಂದ ಸಸಿಗಳನ್ನು ಶಾಶ್ವತವಾದ ಕುಂಡಗಳಲ್ಲಿ ವರ್ಗಾವಣೆ ಮಾಡಿ ನಾಟಿ ಮಾಡಬೇಕು. ನಾವು ಆಯ್ಕೆ ಮಾಡಬೇಕಾದ ಕುಂಡಗಳ ಆಕಾರ, ಮತ್ತು ಗಾತ್ರಗಳು ಬೆಳೆಸಬೇಕಾದ ಮರದ ಮೇಲೆ ಅವಲಂಭಿಸಿರುತ್ತದೆ. ಈ ಕುಂಡಗಳು ಅಥವಾ ಪಾತ್ರೆಗಳು ವಿವಿಧ ತರಹದಾಗಿದ್ದು, ಲೋಹ, ಮಣ್ಣು ಅಥವಾ ಮರದಿಂದ ತಯಾರಿಸಿದ ಆಕರ್ಷಕವಾಗಿರುವ ಕುಂಡಗಳಲ್ಲಿ ಬೆಳೆಸಬಹುದು. ಕುಂಡಗಳ ಆಳತೆಯು ಸುಮಾರು 3 ರಿಂದ 12 ಸೆಂ.ಮೀ. ಆಳ ಇದ್ದು, 15–30 ಸೆಂ.ಮೀ. ಅಗಲವನ್ನು ಹೊಂದಿದ್ದು, ತಳಭಾಗದಲ್ಲಿ ರಂಧ್ರಗಳಿರುವಂತೆ ನೋಡಿಕೊಳ್ಳಬೇಕು. ಇದರಿಂದ ನೀರು ಬಸಿದು ಹೋಗಲು ಅನುಕೂಲವಾಗುತ್ತದೆ. ಕುಂಡಗಳ ತಳಹದಿಯಲ್ಲಿ ಜಲ್ಲಿಯನ್ನು ಹಾಗೂ ಅದರ ಮೇಲೆ ಮರಳನ್ನು ಪಾತ್ರೆಯ ತಳ ಭಾಗದಷ್ಟು ಭರ್ತಿ ಮಾಡಬೇಕು. ನಂತರ ಅದರ ಮೇಲೆ 6 ಭಾಗ ಜರಡಿ ಹಿಡಿದ ಮರಳು ಮಿಶ್ರಿತ ಜೇಡಿ ಮಣ್ಣು, 1 ಭಾಗ ಚೆನ್ನಾಗಿ ಕೊಳೆತ ಜರಡಿ ಹಿಡಿದ ಕೊಟ್ಟಿಗೆ ಗೊಬ್ಬರ ಹಾಗೂ 3 ಭಾಗ ಒರಟು ಕಣಗಳಿಂದ ಕೂಡಿದ ನದಿಯ ಮರಳು ಇವುಗಳ ಮಿಶ್ರಣವನ್ನು ತುಂಬಬೇಕು. ಇದಕ್ಕೂ ಮೊದಲಿನ ಚಿಕ್ಕ ಕುಂಡದಲ್ಲಿರುವ ಸಸಿಯನ್ನು ವರ್ಗಾವಣೆ ಮಾಡುವಾಗ ಯಾವ ಆಳದಲ್ಲಿ ಸಸಿಯು ಬೆಳೆಯುತ್ತಿದೆಯೋ ಅದಕ್ಕಿಂತ ಹೆಚ್ಚು



Downloaded From: www.kpscvaani.com

ಆಳವಾಗಿ ಸಸಿಯನ್ನು ನಾಟಿ ಮಾಡಬಾರದು. ಕಡಿಮೆ ಆಳಕ್ಕೆ ನಾಟಿ ಮಾಡುವುದರಿಂದ ಮಣ್ಣಿನ ಮೇಲೆ ಬೇರುಗಳು ಬಲೆಯಂತೆ ಹೆಣೆಯುತ್ತದೆ. ಹಾಗೂ ಬಹಳ ಪುರಾತನ ವೃಕ್ಷದಂತೆ ಕಾಣುತ್ತದೆ.

ಬೋನ್‌ಸಾಯ್ ಮರದ ರೆಂಬೆಗಳನ್ನು ನಮಗೆ ಬೇಕಾದ ಆಕಾರದಲ್ಲಿ ಕತ್ತರಿಸುತ್ತಿರಬೇಕು. ಈ ಸಸಿಗಳು ಬೆಳೆದು ಚಿಕ್ಕ ಮರಗಳೆಂಬಂತೆ ಭಾಸವಾದಾಗ ಅದರ 5 ಸೆಂ.ಮೀ. ಉದ್ದವಿರುವ ರೆಂಬೆಗಳನ್ನು ಕತ್ತರಿಸಬೇಕು. ಹೀಗೆ ಕತ್ತರಿಸುವುದರಿಂದ ಅವುಗಳ ಮಧ್ಯೆ ಹೊಸ ಚಿಗುರೊಡೆಯಲು ಪ್ರಾರಂಭವಾಗುತ್ತದೆ. ಹೀಗೆ ಚಿಗುರು ಹೊಡೆದ ಎಲೆಗಳನ್ನು ಸ್ವಲ್ಪ ಬೆಳೆಯಲು ಬಿಟ್ಟು ಮರಳಿ ಚಿವುಟುವುದರಿಂದ ಹೊಸದಾಗಿ ರೆಂಬೆಗಳು ಕವಲೊಡೆಯುತ್ತವೆ. ಬೋನ್‌ಸಾಯ್ ಮರವು ಬೆಳೆಯುತ್ತಾ ಹೋದಂತೆ ಕಾಂಡವು ಮೇಲ್ಭಾಗಕ್ಕೆ ಸಣ್ಣದಾಗುತ್ತಾ ಹೋಗಬೇಕು, ಮರದ ಎತ್ತರವನ್ನು ಕಡಿಮೆ ಮಾಡುವುದಕ್ಕೋಸ್ಕರ ದಪ್ಪವಾದ ಕಾಂಡವನ್ನು ಕತ್ತರಿಸಬಾರದು. ಏಕೆಂದರೆ ಹೀಗೆ ಕತ್ತರಿಸುವುದರಿಂದ ಮರದ ಸ್ವಾಭಾವಿಕ ಪರಸ್ಪರಾನುರೂಪತೆ (ನ್ಯಾಚುರಲ್ ಸಿಮೆಟ್ರಿ) ಹಾಳಾಗುತ್ತದೆ. ಮರಗಳು ಒಂದು ಅಥವಾ ಐದು ಕಾಂಡಗಳನ್ನು ಹೊಂದಿರಬಹುದು.

ತಾಮ್ರದ ತಂತಿಯನ್ನು ಕಾಂಡ ಅಥವಾ ರೆಂಬೆಗಳಿಗೆ ಸುರಳಿಯಾಕಾರದಲ್ಲಿ ಸುತ್ತಿ, ಕುಂಡದ ತಳಭಾಗದಲ್ಲಿ ಮಾಡಿರುವ 2 ರಂಧ್ರಗಳಿಗೆ ಕಟ್ಟಬೇಕು. ಹೀಗೆ ಕಟ್ಟುವುದರಿಂದ ನಮಗೆ ಬೇಕಾದ ಹಾಗೆ ಅದನ್ನು ಬಗ್ಗಿಸಿ ಆಕಾರವನ್ನು ಪಡೆದುಕೊಳ್ಳುವಂತೆ ಮಾಡಬಹುದು. ನಾಟಿ ಮಾಡಿದ ಒಂದು ವರ್ಷದ ನಂತರ ಅಥವಾ ಸಸಿ ಚೆನ್ನಾಗಿ ಬೆಳವಣಿಗೆ ಹೊಂದಿದಾಗ ಕಾಂಡ ಅಥವಾ ರೆಂಬೆಯು ಗಟ್ಟಿಯಾದಾಗ ಕಟ್ಟಿದ ತಂತಿಯನ್ನು ಕತ್ತರಿಸಿ ಹಾಕಬಹುದು.

ಸಾಮಾನ್ಯವಾಗಿ ಬೋನ್‌ಸಾಯ್ ಸುಮಾರು 60 ಸೆಂ.ಮೀ. ಎತ್ತರ ಹಾಗೂ 60 ಸೆಂ.ಮೀ. ಅಗಲವಿರುತ್ತವೆ. ಅತಿ ಚಿಕ್ಕ ಬೋನ್‌ಸಾಯ್‌ಗಳು 8 ಸೆಂ.ಮೀ. ನಷ್ಟು ಎತ್ತರವಿರುತ್ತವೆ. ಈ ಬೋನ್‌ಸಾಯ್ ಮರಗಳನ್ನು ಪ್ರತಿ ವರ್ಷವು ಕುಂಡದಿಂದ ಕುಂಡಕ್ಕೆ ಸ್ಥಳಾಂತರಿಸಿ ನಾಟಿ ಮಾಡುವಾಗ ಅದರ ಪಕ್ಕದ ಬೇರುಗಳನ್ನು ಕತ್ತರಿಸಿ ಹಾಕಬೇಕು. ಈ ರೀತಿ ಕತ್ತರಿಸುವಾಗ ಪ್ರಧಾನ ಬೇರಿನ ತುದಿಗೆ ಹಾನಿಯಾಗಬಾರದು. ವಿವಿಧ ತಳಿಯ ಸಸಿಗಳನ್ನು ವಿವಿಧ ವಾರ್ಷಿಕ ಅಂತರದೊಂದಿಗೆ ಕುಂಡಗಳಿಗೆ ವರ್ಗಾವಣೆ ಮಾಡಿ ನಾಟಿ ಮಾಡಲಾಗುತ್ತದೆ. ಕೆಲವೊಂದು ಗಿಡಗಳನ್ನು ಒಂದು ವರ್ಷಕ್ಕೊಮ್ಮೆ, 2 ವರ್ಷಗಳಿಗೊಮ್ಮೆ, ಮತ್ತೆ ಕೆಲವು ಗಿಡಗಳನ್ನು 3, 4 ಅಥವಾ 5 ವರ್ಷಗಳಿಗೊಮ್ಮೆ ಹೀಗೆ ನಾಟಿ ಮಾಡಲಾಗುತ್ತದೆ. ಹೆಚ್ಚಾಗಿ ಮರಗಳನ್ನು ವಸಂತ ಋತುವಿನಲ್ಲಿ ಬೇರೊಂದು ಕುಂಡಗಳಿಗೆ ವರ್ಗಾವಣೆ ಮಾಡಿ ನಾಟಿ ಮಾಡಲಾಗುತ್ತದೆ.

ಸಸಿಗಳನ್ನು ವರ್ಗಾವಣೆ ಮಾಡುವಾಗ ಹಾಗೂ ಅವುಗಳ ಬೇರುಗಳನ್ನು ಕತ್ತರಿಸುವ ಸಮಯದಲ್ಲಿ ಬಿಸಿಲು ಹಾಗೂ ಗಾಳಿಯಿಂದ ಕಾಪಾಡಿಕೊಳ್ಳಬೇಕು. ಮುಖ್ಯವಾಗಿ ಆರ್ದ್ರತೆಯಿಂದ ಕೂಡಿದ ಕೊಠಡಿಯಲ್ಲಿ ಬೇರುಗಳನ್ನು ಕತ್ತರಿಸುವ ಕೆಲಸವನ್ನು ಮಾಡಿ ಮುಗಿಸಬೇಕು. ಕುಂಡದಿಂದ ಕುಂಡಕ್ಕೆ ಸಸಿಯನ್ನು ವರ್ಗಾವಣೆ ಮಾಡುವಾಗ 2/3 ಭಾಗದಷ್ಟು ಹಳೆಯ ಮಣ್ಣನ್ನು ತೆಗೆದು ಹಾಕಿ, ನಾಟಿ ಮಾಡಿ ತಕ್ಷಣವೇ ನೀರು ಹಾಕಬೇಕು. ಸಸಿಯ ಬೇರುಗಳು ಕಾರ್ಯೋನ್ಮುಖರಾಗುವವರೆಗೂ ಬಿಸಿಲು ಮತ್ತು ಗಾಳಿಯಿಂದ ಕಾಪಾಡಿ ಸುರಕ್ಷಿತ ಜಾಗದಲ್ಲಿಡಬೇಕು.

ಬೋನ್‌ಸಾಯ್ ವೃಕ್ಷಗಳನ್ನು ಬೆಳಕು ಇರದ ಅಥವಾ ಉಷ್ಣತೆ ಹೆಚ್ಚಿರುವ ಕೊಠಡಿಯಲ್ಲಿ ಇಡದೇ, ಇವುಗಳನ್ನು ಮನೆಯ ಹೊರಗಡೆ ಇಡಬೇಕು. ಹೀಗೆ ಇಡುವುದರಿಂದ ಮನೆಯ ಅಲಂಕಾರವೂ ಹೆಚ್ಚುವುದಲ್ಲದೇ, ಸಸಿಯ ಬೆಳವಣಿಗೆಯು ಉತ್ತಮವಾಗಿರುತ್ತದೆ. ಕೆಲವು ಜಾತಿಯ ಮರಗಳು ಬಿಸಿಲನ್ನು ಹಾಗೂ ಇನ್ನು ಕೆಲವು ಜಾತಿಯ ಮರಗಳು ನೆರಳನ್ನೂ ಇಷ್ಟಪಡುತ್ತವೆ. ಆಯಾ ಜಾತಿಯ ಮರಗಳ ಅವಶ್ಯಕತೆಗೆ ತಕ್ಕಂತೆ ನಾವು ಅವುಗಳನ್ನು ಸಂರಕ್ಷಿಸಬೇಕು.

ಈ ಮರಗಳಿಗೆ ನೀರನ್ನು ಅವಶ್ಯಕತೆ ಇದ್ದಾಗ ಕೊಡಬೇಕು. ಚಳಿಗಾಲದಲ್ಲಿ ಮಣ್ಣಿನಲ್ಲಿ ಸದಾ ತೇವಾಂಶವಿರುವುದರಿಂದ ಕಡಿಮೆ ನೀರಿನ ಅವಶ್ಯಕತೆ ಇರುತ್ತದೆ. ಇಂತಹ ಸಮಯದಲ್ಲಿ ಕಡಿಮೆ ನೀರುಣಿಸುವುದಲ್ಲದೇ ಅವುಗಳ ಎಲೆಗಳ ಮೇಲೆಯೂ ಸಹ ನೀರನ್ನು ಸಿಂಪಡಣೆ ಮಾಡಬೇಕು. ಒಂದು ವೇಳೆ ಮಣ್ಣಿನ ಮೇಲ್ಭಾಗವು ಸುಮಾರು 3 ಸೆಂ.ಮೀ. ಆಳದಷ್ಟು ಪೂರ್ತಿ ಒಣಗಿದಾಗ ಮತ್ತೊಮ್ಮೆ ನೀರು ಕೊಡಬೇಕು. ಹೆಚ್ಚಿಗೆ ನೀರನ್ನು ಕೊಡುವುದರಿಂದಲೂ ಸಹ ತೊಂದರೆಯಾಗುತ್ತದೆ. ಬೇಸಿಗೆಯಲ್ಲಿ ಹೆಚ್ಚಿಗೆ ನೀರನ್ನು ಕೊಡುವುದರಿಂದ ಮರದ ಬೆಳವಣಿಗೆ ಉತ್ತಮವಾಗಿರುತ್ತದೆ.

ಈ ವೃಕ್ಷಗಳಿಗೆ ಪೋಷಕಾಂಶಗಳನ್ನು ಮಿತವಾಗಿ ಕೊಡುತ್ತಿರಬೇಕು. ಹೆಚ್ಚಿಗೆ ಪೋಷಕಾಂಶಗಳನ್ನು ಕೊಡುವುದರಿಂದ ಬೋನ್‌ಸಾಯ್‌ನ ಅಂದವು ಕೆಟ್ಟು ಹೋಗುತ್ತದೆ. ವರ್ಷದಲ್ಲಿ ಬೇಸಿಗೆ ಹಾಗೂ ಶರತ್ಕಾಲದಲ್ಲಿ 2–3 ಬಾರಿ ಪೋಷಕಾಂಶಗಳನ್ನು ಕೊಡಬೇಕು. ಆರಂಭದ ವರ್ಷದಲ್ಲಿ ಬೆಳವಣಿಗೆಯ ಹಂಗಾಮಿನಲ್ಲಿ ಬಹು ದುರ್ಬಲ ದ್ರವ ಸಾವಯವ ಗೊಬ್ಬರ ಕೊಡಬೇಕು. ರಸಾಯನಿಕ ಗೊಬ್ಬರಗಳನ್ನು ಕೊಡಬಾರದು. ಪ್ರಾಣಿಗಳ ಮೂಳೆ, ಗೊರಸು ಹಾಗೂ ಕೊಂಬಿನ ಪುಡಿ ಗೊಬ್ಬರಗಳನ್ನು ಮತ್ತು ಸೋಯಾಬೀನ್ ಹಾಗೂ ಹತ್ತಿ ಬೀಜದ ಪುಡಿ ಗೊಬ್ಬರ ಮುಂತಾದ ಸಾವಯವ ಗೊಬ್ಬರಗಳನ್ನು ಕೊಡಬೇಕು. ಮೇಲೆ ತಿಳಿಸಿದ ಸ್ವಲ್ಪ ಪ್ರಮಾಣದ ಸಾವಯವ ಗೊಬ್ಬರಗಳನ್ನು ಮಣ್ಣಿನ ಮೇಲೆ ಚೆಲ್ಲಿ ನೀರು ಹಾಕಬೇಕು ಅಥವಾ ಈ ಗೊಬ್ಬರಗಳನ್ನು ನೀರಿನಲ್ಲಿ ಬೆರೆಸಿ, ಬಹು ದುರ್ಬಲಗೊಳಿಸಿ ಕೊಡಬೇಕು.

ಈ ಕಲೆಯನ್ನು ಒಂದು ಹವ್ಯಾಸವಾಗಿ ರೂಢಿಸಿಕೊಂಡಲ್ಲಿ ಈ ಕಲೆಯು ಮಾನವನಿಗೆ ತೃಪ್ತಿಯನ್ನು ನೀಡುವುದರಲ್ಲಿ ಸಂಶಯವೇ ಇಲ್ಲ. ಬೋನ್‌ಸಾಯ್ ತಮ್ಮ ವಿಶಿಷ್ಟ ಆಕಾರ ಮತ್ತು ರಚನೆಯಿಂದಲೇ ನೋಡುಗರನ್ನು ಸೆಳೆಯುತ್ತವೆ. ಈ ಮರಗಳಿಗೆ ಹೆಚ್ಚಿನ ಸ್ಥಳಾವಕಾಶ ಬೇಕಾಗಿಲ್ಲ. ವರಾಂಡ, ಟೆರಸ್, ಕಚೇರಿ, ಹಾಲ್, ಮಲಗುವ ಕೋಣೆ ಹೀಗೆ ಎಲ್ಲೆಲ್ಲಿ ಜಾಗವಿದೆಯೋ ಅಲ್ಲೆಲ್ಲಾ ಬೋನ್‌ಸಾಯ್ ಅಲಂಕಾರಿಕ ಮರವನ್ನಾಗಿ ಇಟ್ಟು ಖುಷಿ ಪಡಬಹುದು. ಇಂಥ ಪ್ರದೇಶಕ್ಕೆ ಬೋನ್‌ಸಾಯ್ ವರದಾನವಾಗಿದೆ. ಮನೆಯ ಚೆಲುವು ಹೆಚ್ಚಿಸುವುದರ ಜೊತೆಗೆ ಆಮ್ಲಜನಕ ಬಿಡುಗಡೆ ಮಾಡುವುದರಿಂದ ಉಸಿರಾಟಕ್ಕೆ ಶುದ್ಧ ಗಾಳಿಯೂ ಸಿಗುತ್ತದೆ. ಹಾಗಾದರೆ ಬನ್ನಿ ಬೋನ್‌ಸಾಯ್ ಬೆಳೆಸೋಣ.

■



Downloaded From: www.kpscvaani.com





# ಭಾರತ ಸಂವಿಧಾನ
## ಮೂಲಭೂತ ಕರ್ತವ್ಯಗಳು

1. ಪ್ರತಿಯೊಬ್ಬರು ಸಂವಿಧಾನಕ್ಕೆ ನಿಷ್ಠರಾಗಿರಬೇಕು. ಅದರ ಆದರ್ಶಗಳನ್ನು ಮತ್ತು ಸಂಸ್ಥೆಗಳನ್ನು ಹಾಗೂ ರಾಷ್ಟ್ರ ಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸಬೇಕು. ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆ ಭಾರತ ದೇಶದ ಪ್ರತಿಷ್ಠೆಯ ದ್ಯೋತಕಗಳು. ಇವುಗಳನ್ನು ಯಾವುದೇ ಕಾರಣಕ್ಕೂ ವಾಣಿಜ್ಯ ಉದ್ದೇಶಗಳಿಗೆ ಬಳಕೆ ಮಾಡುವಂತಿಲ್ಲ. ಅಲ್ಲದೆ ರಾಷ್ಟ್ರಧ್ವಜಕ್ಕೆ ಮತ್ತು ರಾಷ್ಟ್ರಗೀತೆಗೆ ಅವಮಾನ ಮಾಡುವುದು ಶಿಕ್ಷಾರ್ಹ ಅಪರಾಧವಾಗುತ್ತದೆ.
2. ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿ ಕೊಟ್ಟ ಉದಾತ್ತ ಆದರ್ಶಗಳನ್ನು ಮನನಗೊಳಿಸುವುದು ಮತ್ತು ಅದರಂತೆ ನಡೆದುಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. (ಉದಾಹರಣೆ: 1857ರ ಸಿಪಾಯಿದಂಗೆ, ಗಾಂಧೀಜಿಯವರ ದಂಡಿ ಸತ್ಯಾಗ್ರಹ, ಜಲಿಯನ್ ವಾಲಾಬಾಗ್ ಮಾರಣ ಹೋಮ, ಸ್ವದೇಶಿ ಚಳುವಳಿ, ಭಾರತ ಬಿಟ್ಟು ತೊಲಗಿ ಚಳುವಳಿ, ಅಸಹಕಾರ ಚಳುವಳಿ ಇತ್ಯಾದಿ)
3. ಎಲ್ಲ ಭಾರತೀಯರು ರಾಷ್ಟ್ರದ ಸಾರ್ವಭೌಮತ್ವ, ಏಕತೆ, ಅಖಂಡತೆ ಮತ್ತು ನಿಷ್ಠೆಯನ್ನು ಎತ್ತಿ ಹಿಡಿಯಬೇಕು.
4. ದೇಶದ ರಕ್ಷಣೆಗೆ ಸಂಬಂಧಿಸಿದಂತೆ ಅವಶ್ಯಕತೆ ಬಿದ್ದಾಗ ರಾಷ್ಟ್ರದ ಸೇವೆಯಲ್ಲಿ ತೊಡಗಿಸಿಕೊಳ್ಳುವುದು.
5. ಭಾರತೀಯರು ಅವರು ಯಾವುದೇ ಧರ್ಮದವರಾಗಿರಲೀ, ಯಾವುದೇ ಭಾಷಿಕರಾಗಿರಲೀ, ಅಥವಾ ಪ್ರದೇಶದವರಾಗಿರಲೀ, ಪ್ರತಿಯೊಬ್ಬರು ಸಾಮರಸ್ಯವನ್ನು ಮತ್ತು ಭಾತೃತ್ವವನ್ನು ಪ್ರೇರೇಪಿಸಬೇಕು. (ಮಹಿಳೆಯರ ಆತ್ಮಗೌರವಕ್ಕೆ ಚ್ಯುತಿ ಬರುವಂಥ ಎಲ್ಲಾ ಆಚರಣೆಗಳನ್ನು ತ್ಯಜಿಸುವುದು; ಮಹಿಳೆಯರ ಅಪಹರಣ, ವರದಕ್ಷಿಣೆ ಕಿರುಕುಳ, ಸಜೀವ ದಹನ, ಮಹಿಳೆಯರ ಬಗ್ಗೆ ತಿರಸ್ಕಾರ ಭಾವ ಇತ್ಯಾದಿ ಆಚರಣೆಗಳು ನಿಲ್ಲಬೇಕು.)
6. ನಮ್ಮ ಸಮಷ್ಟಿ ಸಂಸ್ಕೃತಿಯ ಚಾರಿತ್ರಿಕ ಮೌಲ್ಯಗಳನ್ನು ಗೌರವಿಸುವುದರ ಜತೆಗೆ ಅವುಗಳನ್ನು ಕಾಪಾಡಿಕೊಂಡು ಬರುವುದು (ನಮ್ಮ ಸಂಸ್ಕೃತಿ, ನಮ್ಮ ಭಾಷೆ, ನಮ್ಮ ಸಂಗೀತ, ನಮ್ಮ ಉಡುಗೆ ತೊಡುಗೆಗಳ ಕುರಿತಾಗಿ ಗೌರವ, ಪಾಶ್ಚಿಮಾತ್ಯ ಸಂಸ್ಕೃತಿಯ ಅಂಧಾನುಕರಣೆಯನ್ನು ತ್ಯಜಿಸಿ, ನಮ್ಮ ಜೀವನ ಕ್ರಮದ ಮೌಲ್ಯಗಳನ್ನು ಎತ್ತಿ ಹಿಡಿಯುವುದು
7. ಅರಣ್ಯಗಳು, ಜಲ ರಾಶಿಗಳು, ಅಂದರೆ ಕೆರೆ, ಕಟ್ಟೆ, ನದಿ, ಸರೋವರಗಳು, ಅರಣ್ಯ ಜೀವಿಗಳು ಇವುಗಳನ್ನೆಲ್ಲ ಒಳಗೊಂಡಂತೆ ಪರಿಸರವನ್ನು ಕಾಪಾಡಿಕೊಳ್ಳುವುದಲ್ಲದೆ, ಅದನ್ನು ಉಳಿಸಿ ಬೆಳೆಸುವುದು (ಉದಾಹರಣೆಗೆ; ದಂತಕ್ಕಾಗಿ ಆನೆಗಳನ್ನು ಬೇಟೆಯಾಡುವುದು, ಚರ್ಮಕ್ಕಾಗಿ ಕಾಡು ಮೃಗಗಳನ್ನು ಕೊಲ್ಲುವುದು, ಪಶು ಪಕ್ಷಿಗಳನ್ನು ಬೇಟೆಯಾಡುವುದು, ಪರಿಸರಕ್ಕೆ ಹಾನಿ ಮಾಡುವುದು ಇತ್ಯಾದಿ)
8. ವೈಜ್ಞಾನಿಕ ಮನೋಧರ್ಮವನ್ನು, ಮಾನವೀಯತೆಯನ್ನು, ಅನ್ವೇಷಿಕ ಪ್ರವೃತ್ತಿ ಮತ್ತು ಸುಧಾರಣೆಯ ಮನೋಭಾವವನ್ನು ಬೆಳೆಸಿಕೊಳ್ಳಬೇಕು.
9. ಸಾರ್ವಜನಿಕ ಆಸ್ತಿಯನ್ನು ಕಾಪಾಡುವುದು ಮತ್ತು ಹಿಂಸಾ ಪ್ರವೃತ್ತಿಯನ್ನು ತ್ಯಜಿಸುವುದು. (ಇತ್ತೀಚಿನ ದಿನಗಳಲ್ಲಿ ಯಾವುದೇ ಚಳವಳಿಯಾಗಲೀ, ಯಾರ ಮೇಲೆ ಸಿಟ್ಟಿರಲಿ, ಬಸ್ಸುಗಳಿಗೆ ಬೆಂಕಿ ಹಚ್ಚುವುದು, ಕಟ್ಟಡಗಳ ಗಾಜುಗಳನ್ನು ಪುಡಿ ಮಾಡುವುದು, ಹಿಂಸಾಚಾರದಲ್ಲಿ ತೊಡಗುವುದು ಕಂಡು ಬರುತ್ತದೆ. ಇಂಥ ಕೃತ್ಯಗಳು ಸಭ್ಯವಲ್ಲ)
10. ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳ ಪರಿಧಿಯಲ್ಲಿ ಉತ್ಕೃಷ್ಟತೆ ಅಥವಾ ಮೇಲ್ಮೆಯನ್ನು ಸಾಧಿಸುವುದಕ್ಕೆ ಶ್ರಮಿಸುವುದು. ಇದರಿಂದ, ರಾಷ್ಟ್ರ ನಿರಂತರವಾಗಿ ಉದ್ಯಮಶೀಲತೆಯ ಮತ್ತು ಸಾಧನೆಯ ಮಟ್ಟಗಳನ್ನು ಎತ್ತರೆತ್ತರಕ್ಕೆ ತೆಗೆದುಕೊಂಡು ಹೋಗಲು ಅನುವಾಗುತ್ತದೆ.
11. ಮಕ್ಕಳಿಗೆ ಕಡ್ಡಾಯ ಶಿಕ್ಷಣವನ್ನು ನೀಡುವುದು ತಂದೆ– ತಾಯಿಗಳು ಅಥವಾ ಪೋಷಕರಾದವರ ಕರ್ತವ್ಯ. 6 ರಿಂದ 14ವರ್ಷದೊಳಗಿನ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸುವುದು ಕಡ್ಡಾಯವಾಗಿದೆ.

Downloaded From: www.kpscvaani.com

# ಪದಬಂಧ-26



ವಿದ್ಯಾ ವಿ. ಹಾಲಭಾವಿ

**ಎಡದಿಂದ ಬಲಕ್ಕೆ**

1. ದರ್ಪಣ ಇಲ್ಲಿದೆ(3)
3. ಧಾನ್ಯ ಸಂಗ್ರಹಿಸುವ ಸ್ಥಳ (3)
5. ಸ್ವಾಗತದಲ್ಲೇ ರುಚಿಯನ್ನು ಹುಡುಕಿ! (2)
6. ಅಗ್ನಿಯಿಲ್ಲಿ ಉಲ್ಟಾ ಕಾಣುತ್ತಿದೆಯಲ್ಲಾ! (2)
8. ಚಾಂದ್ರಮಾನ ಪಕ್ಷದ ಒಂಬತ್ತನೆಯ ತಿಥಿ (3)
9. ತಿರುಗಿ ನಿಂತಿರುವ ಚಾರ (3)
10. ಉದಾಹರಿಸುವಾಗ ದಾನಶೀಲ ಬಂದಿಹನಲ್ಲಾ! (3)
11. ಸೀತೆಯ ತಂದೆ (3)
12. ತಿರುವು ಮುರುವಾದ ಕಾಲ (3)
14. ತರುವಾಯ ಎಂದು ಹೀಗೆ ಹೇಳಿ (3)
15. ಹೊಸದಾದುದು ತಿರುಗಿಸಿದರೆ ಕಾಡಾದೀತು! (2)
17. ಮುನಿದವನಲ್ಲಿ ಆನಂದವನ್ನು ನೋಡಿ! (2)
18. ವಿಸ್ತಾರವಾದ ಹೇಳಿಕೆ (3)
19. ಇರುಳಿಗೊಂದು ಪರ್ಯಾಯ ಪದ (3)

**ಮೇಲಿಂದ ಕೆಳಕ್ಕೆ**

1. ಕಲಾವಿದನು ತೆರೆದ ಬಾಗಿಲು! (2)
2. ಬೆಂಕಿಯ ಚೂರಿಲ್ಲಿ ಉಲ್ಟಾ ಆಗಿದೆ (2)
3. ಬಂಗಾರವನ್ನು ಹೀಗೂ ಹೇಳುವರು (3)
4. ನಾಗರೀಕರ ಮನೆ ಬಾಗಿಲಿಗೆ ಸರ್ಕಾರದ ಸೇವೆ ನೀಡುವ ಯೋಜನೆ (5)
5. ಜನವರಿ 12 ಇವರ ಜನ್ಮದಿನಾಚರಣೆ (7)
7. ಹುಬ್ಬಳ್ಳಿಯ ಈ ಸ್ಥಳದಲ್ಲಿ ರಾಷ್ಟ್ರ ಧ್ವಜವನ್ನು ತಯಾರಿಸಲಾಗುತ್ತದೆ (3)
10. ಮೂಡುತ್ತಿರುವ ಸೂರ್ಯ (5)
11. ಜನದೊಳಗಿರುವ ಹುಟ್ಟು! (3)
13. ಮರದ ಹತ್ತಿರ ನಡೆದ ಕಾಳಗ (3)
16. ವಠಾರದಲ್ಲಿರುವ ಮದುವೆ ಗಂಡು! (2)
17. ಕೋಪಗೊಳ್ಳುವಾಗ ತಪಸ್ವಿ ಬಂದನಲ್ಲಾ! (2)

**ಉತ್ತರ**

**ಮೇಲಿಂದ ಕೆಳಕ್ಕೆ**

1. ಕದ 2. ಡಿಕಿ 3. ಕನಕ 4. ಜನಸೇವಕ 5. ಸ್ವಾಮಿವಿವೇಕಾನಂದ 7. ಬೆಂಗೇರಿ 10. ಉದಯರವಿ 11. ಜನನ 13. ಸಮರ 16. ವರ 17. ಮುನಿ

**ಎಡದಿಂದ ಬಲಕ್ಕೆ**

1. ಕನ್ನಡಿ 3. ಕಣಜ 5. ಸ್ವಾದ 6. ಕಿಬೆಂ 8. ನವಮಿ 9. ಕವಸೇ 10. ಉದಾರಿ 11. ಜನಕ 12. ಯಮಸ 14. ನಂತರ 15. ನವ 17. ಮುದ 18. ವಿವರ 19. ರಜನಿ

**-: ಸೂಚನೆ :-**

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ-ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Dr P S Harsha, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050

Downloaded From: www.kpscvaani.com




ಬೆಳಗಾವಿಯ ಸುವರ್ಣ ಸೌಧ ಮುಂಭಾಗದಲ್ಲಿರುವ ಬಸ್ತವಾಡ ಗ್ರಾಮದಲ್ಲಿ ಪ್ರತಿಷ್ಠಾಪಿಸಲಾಗಿರುವ ಡಾ.ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಯನ್ನು ಡಿಸೆಂಬರ್ 17 ರಂದು ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ಅನಾವರಣಗೊಳಿಸಿದರು.
ಈ ಸಂದರ್ಭದಲ್ಲಿ ಜಲಸಂಪನ್ಮೂಲ ಸಚಿವರಾದ ಗೋವಿಂದ ಎಂ ಕಾರಜೋಳ, ಶಾಸಕ ಬಸವರಾಜ ಮತ್ತಿಮೂಡ, ಮಾಜಿ ಶಾಸಕ ಸಂಜಯ್ ಪಾಟೀಲ್ ಮತ್ತಿತರು ಉಪಸ್ಥಿತರಿದ್ದರು.




ಬೆಳಗಾವಿಯಲ್ಲಿ ಏರ್ಪಡಿಸಲಾಗಿದ್ದ ಕರಕುಶಲ ವಸ್ತು ಪ್ರದರ್ಶನಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ತಮ್ಮ ಮನೆಗಾಗಿ ಕೆಲವು ವಸ್ತುಗಳನ್ನು ಖರೀದಿಸಿದ ಸಂದರ್ಭ.

Downloaded From: www.kpscvaani.com

RNI No. KAR/KAN/2017/75029

Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26




Downloaded From: www.kpscvaani.com